ಅನುಮೋದನಾ ಪ್ರಸ್ತಾವ

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಪ್ರಸ್ತಾವವನ್ನು ಮಂಡಿಸಬಹುದು.

ಶ್ರೀ ವಿ. ಎಲ್. ಪಾಟೀಲ್.—ಕೆಳಗೆಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ. "ಕರ್ನಾಟಕ ರಾಜ್ಯ ಸ್ಟಾಂಪು (ತಿದ್ದುಪಡಿ) ವಿಧೇಯಕ ೧೯೮೩ನ್ನು" ಸಭೆಯು ಅನುಮೋದಿಸುವುದು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

"ಕರ್ನಾಟಕ ರಾಜ್ಯ ಸ್ಟಾಂಪು (ತಿದ್ದುಪಡಿ) ವಿಧೇಯಕ ೧೯೮೩ನ್ನು" ಸಭೆಯು ಅನುಮೋದಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟು ಅನುಮೋದಿಸಲ್ಪಟ್ಟಿತು)

ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ, ೧೯೮೩

ಪರಿಶೀಲನಾ ಪ್ರಸ್ತಾವ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಮಾನ್ಯ ಮಂತ್ರಿಗಳು ಈ ಬಿಲ್‌ನ್ನು ಮಂಡಿಸಿದ ಮೇಲೆ ನಾವು ನಮ್ಮ ಕ್ಲಾರಿಫಿಕೇಷನ್ ಕೇಳುವುದಕ್ಕೆ ತೊಂದರೆಯಾಗುತ್ತದೆ. ಈಗ ತಾವು ಮಂಡಿಸಬೇಕಾಗಿರತಕ್ಕಂಥ ಬಿಲ್‌ನಲ್ಲಿ ಶೇಕಡ ೪೦ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ಕೊಟ್ಟಿದ್ದೀರಿ ಮತ್ತು ೧೮ ವರ್ಷ ವಯಸ್ಸಿನ ಯುವಕ ಮತ್ತು ಯುವತಿಯರು ಮತದಾನ ಮಾಡಬಹುದೆಂದು ತಾವು ಈ ಬಿಲ್‌ನಲ್ಲಿ ಹೇಳಿದ್ದೀರಿ. ಆದರೆ ತಾಲ್ಲೂಕು ಬೋರ್ಡ್ ಮತ್ತು ಪಂಚಾಯ್ತಿ ಚುನಾವಣೆಯಲ್ಲಿ ಮತದಾನ ಮಾಡಬೇಕಾದರೆ ೨೧ ವರ್ಷವೆಂದು ಇಟ್ಟಿದ್ದೀರಿ. ಇದು ಒಂದಕ್ಕೊಂದು ವಿರುದ್ಧವಲ್ಲವೇ ? ಮತ್ತು ತಾವು ಮಾಡುತ್ತಿರುವುದು ತಾರತಮ್ಯವಲ್ಲವೇ ? ಪಟ್ಟಣಗಳಲ್ಲಿರತಕ್ಕಂಥ ಯುವಕರು ಮತ್ತು ಯುವತಿಯರು ಚುನಾವಣೆಯಲ್ಲಿ ಮತದಾನ ಮಾಡಬಹುದು ಆದರೆ ಹಳ್ಳಿಗಳಲ್ಲಿ ಇರುವಂಥ ಯುವಕ ಯುವತಿಯರಿಗೆ ಈ ಸೌಲಭ್ಯವಿಲ್ಲ. ಇದು ರಾಜಕೀಯ ಉದ್ದೇಶದಿಂದ ತಂದಿರತಕ್ಕಂಥ ಬಿಲ್ ಅಲ್ಲವೇ ? ಆದ್ದರಿಂದ ನಾನು ಹೇಳುವುದೇನೆಂದರೆ ಎಲ್ಲಾ ಕಡೆಗಳಲ್ಲಿ ಒಂದೇ ರೀತಿಯಲ್ಲಿ ವಯಸ್ಸು ನಿಗದಿ ಮಾಡಿ ಎಲ್ಲರಿಗೂ ಮತದಾನ ಮಾಡುವ ಹಕ್ಕು ಕೊಡಬೇಕೆಂದು ನಾನು ಹೇಳುತ್ತೇನೆ. ತಾವು ಈ ರೀತಿ ಮಾಡಿರುವುದರಿಂದ ನಮಗೆ ಏನು ಗೊತ್ತಾಗುತ್ತದೆಂದರೆ ಪಟ್ಟಣಗಳಲ್ಲಿ ಜನತಾ ಪಕ್ಷದ ಮೇಲೆ ಒಲವು ಇದೆ. ಆದ್ದರಿಂದ ಜನತೆ ನಿಮಗೆ ಮತ ಕೊಡುತ್ತಾರೆಂದು ನೀವು ಆ ರೀತಿ ಮಾಡಿರಬಹುದೇ ? ಆದ್ದರಿಂದ ತಾವು ಈಗ ತಂದಿರತಕ್ಕಂಥ ಬಿಲ್‌ನ್ನು ವಾಪಸ್ ತೆಗೆದುಕೊಂಡು ಹಳ್ಳಿಗಳಿಗೂ ಮತ್ತು ಪಟ್ಟಣಗಳಿಗೂ ಒಂದೇ ರೀತಿಯ ಮತದಾನದ ವಯಸ್ಸು ನಿಗದಿ ಮಾಡಿ ತರಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಧರ್ಮಸಿಂಗ್.—ಸ್ವಾಮಿ ಸರ್ಕಾರ ಕೇವಲ ಪಟ್ಟಣಗಳಲ್ಲಿರತಕ್ಕಂಥ ಯುವಕ ಮತ್ತು ಯುವತಿಯರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಹಳ್ಳಿಗಳಲ್ಲಿರತಕ್ಕಂಥ ಯುವಕ ಮತ್ತು ಯುವತಿಯರಿಗೆ ಆ ಅವಕಾಶವನ್ನು ಕಲ್ಪಿಸಿಕೊಡದೆ ತಾರತಮ್ಯ ಮಾಡಿದ್ದಾರೆ. ಮತ್ತು ೧೯೮೩ ನೇ ಇಸವಿ ಚುನಾವಣೆಯಲ್ಲಿ ಜನತೆ ನಿಮ್ಮ ಮೇಲೆ ಒಲವು ಇಟ್ಟು ನಿಮಗೆ ಮತ ಕೊಟ್ಟರು. ಆದರೆ ನೀವು ಯಾವ ಕೆಲಸವನ್ನು ಮಾಡುತ್ತಿದ್ದೀರಿ ಎಂಬುದು ಜನತೆ ನೋಡುತ್ತಿದ್ದಾರೆ. ಆದ್ದರಿಂದ ತಾವು ಈ ರೀತಿಯ ತಾರತಮ್ಯವನ್ನು ಬಿಟ್ಟು ಹಳ್ಳಿ ಮತ್ತು ಪಟ್ಟಣ ಪ್ರದೇಶಗಳಿಗೆ ಅನ್ವಯಿಸುವಂತೆ ಒಂದೇ ಬಿಲ್‌ನ್ನು ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಎಲ್ಲಾ ಪಕ್ಷದ ಬೆಂಬಲ ಪಡೆದು ಸರ್ಕಾರ ರಚನೆ ಮಾಡಲು ಹೊರಟಿದ್ದಾರೆ. ಎರಡೂ ಕಡೆಗಳಲ್ಲೂ ತಾರತಮ್ಯ ತೋರಿಸದೆ ಒಂದೇ ರೀತಿಯಾಗಿ ಹದಿನೆಂಟು ವರ್ಷದವರಿಗೆ ಮತದಾನ ಹಕ್ಕು ಕೊಡಿ. ಪಟ್ಟಣ ಪ್ರದೇಶದವರಿಗೆ ಮಾತ್ರ ಈ ಅವಕಾಶ ಕೊಟ್ಟು, ಹಳ್ಳಿ ಪ್ರದೇಶದ ಯುವಜನರಿಗೆ ಮತದಾನದ ಹಕ್ಕು ಕೊಡಬಾರದು ಎನ್ನುವ ಸ್ಪಷ್ಟವಾದ ಮನೋಭಾವ ಇದರಲ್ಲಿ ಕಂಡುಬರುತ್ತದೆ.

ಇದಕ್ಕೆ ಯಾವ ತರಹದ ಉತ್ತರವೂ ಇಲ್ಲ. ತಾವು ಇವತ್ತು ತರತಕ್ಕಂಥ ಬಿಲ್ ಕೂಡ ಎಷ್ಟು ತಪ್ಪುಗಳಿಂದ ಕೂಡಿದೆ ಎನ್ನುವುದನ್ನು ನಾನು ಪುನಃ ಪ್ರಸ್ತಾಪ ಮಾಡುತ್ತೇನೆ. ಆದ್ದರಿಂದ ಇದರ ಬಗ್ಗೆ ಸರಿಯಾದ ಚರ್ಚೆ ಆಗಬೇಕು.

ಶ್ರೀ ಜೆ ಡಿ. ಸೋಮಪ್ಪ.—ಹಳ್ಳಿಗಾಡಿನಲ್ಲಿ ಹದಿನೆಂಟು ವರ್ಷ ವಯಸ್ಸಾದವರು ಏನು ಮಹಾ ಪಾಪ ಮಾಡಿದ್ದಾರೆ? ಗ್ರಾಮಾಂತರ ಜನತೆಗೆ ಅನುಕೂಲ ಮಾಡಲು ಹೊರಟಿರುವ ಸರ್ಕಾರ ಪ್ರಪ್ರಥಮವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಯುವಕರಿಗೆ ಅನುಕೂಲತೆ ಮಾಡಿಕೊಡುವ ಬದಲು, ಅವರನ್ನು ನಾಶ ಮಾಡಲು ಹೊರಟರೆ ಏನಾಗುತ್ತದೆ ?

ಶ್ರೀ ಧರ್ಮಸಿಂಗ್.—ಶಿವಮೊಗ್ಗ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳ ಪ್ರಾತಿನಿಧ್ಯ ಹೊಂದಿರುವ ಸರ್ಕಾರ ಹಳ್ಳಿಗಳಿಗೆ ಯಾವ ಪ್ರಾತಿನಿಧ್ಯವನ್ನೂ ಕೊಟ್ಟಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಮಂತ್ರಿಮಂಡಲದಲ್ಲಿ ಯಾವ ಪ್ರಾತಿನಿಧ್ಯವನ್ನೂ ಕೊಟ್ಟಿಲ್ಲ. ಈ ಮೂರು ಜಿಲ್ಲೆಗಳ ಪ್ರಾತಿನಿಧ್ಯ ಹೊಂದಿರುವ ಸರ್ಕಾರ ಕೇವಲ ಪಟ್ಟಣಗಳ ಬಗ್ಗೆ ಮಾತ್ರ ಯೋಚನೆ ಮಾಡುತ್ತಿದೆ.

ಚೇರ್‌ಮನ್ —ದಯವಿಟ್ಟು ಬಿಲ್ ಮೂವ್ ಮಾಡಿದ ಮೇಲೆ ಮಾತನಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇಕೆ, ಶ್ರೀಮಾನ್ ಧರ್ಮಸಿಂಗ್‌ರವರು ಹಿಂದೆ ಇದೇ ಖಾತೆಯನ್ನು ಹೊಂದಿದ್ದ ಮಂತ್ರಿಗಳಾಗಿದ್ದರು. ಒಳ್ಳೆಯ ತತ್ವವನ್ನು ವಿಚಾರ ಮಾಡತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ. ನಾವು ಯಾವ ವಚನವನ್ನು ಜನತೆಗೆ ಕೊಟ್ಟಿದ್ದೇವೆ ಅದನ್ನು ನೆರವೇರಿಸುತ್ತೇವೆ ಎನ್ನುವ ಮಾತನ್ನು ಒಂದು ಸಲವಲ್ಲ, ಹಲವಾರು ಸಲ ಈ ಸಭೆಯೊಳಗೆ ಹೇಳಿದ್ದೇವೆ. ಸರ್ಕಾರದ ಪರಿಯಿಂದ ಇತರ ಮಂತ್ರಿಗಳೂ ಕೂಡ ಇದೇ ಮಾತನ್ನು ಹೇಳಿದ್ದಾರೆ. ಹೀಗಿರುವಾಗ ನಮ್ಮ ಸರ್ಕಾರ ನಗರ ಪ್ರದೇಶಗಳಿಗೆ ಸೀಮಿತವಾಗಿರತಕ್ಕಂಥ ಸರ್ಕಾರ ಎಂದು ಅವರು ಹೇಳುವ ವಾದದಲ್ಲಿ ಲೇಶ ಮಾತ್ರವೂ ಸತ್ಯವಿಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್.—ಎಲ್ಲಾ ಪ್ರದೇಶಗಳಿಗೆ ನೀವು ಅವಕಾಶ ಕೊಡುತ್ತಿಲ್ಲ, ಹೀಗೆ ಮಾಡಿದರೆ ಜಯನಗರ, ಬಸವನಗುಡಿ, ಪ್ರದೇಶಗಳಿಗೆ ಮಾತ್ರ ಅವಕಾಶ ಕೊಟ್ಟಂತಾಗುತ್ತದೆ.

ಶ್ರೀ ಮೈಖಲ್ ಫರ್ನಾಂಡೀಸ್.—ಸೋಮವಾರ ಪೇಟೆಯಲ್ಲಿ ನಮ್ಮ ಪಕ್ಷ ಗೆದ್ದು ಬಂದಿದೆ, ನಮಗೆ ಭಯ ಏಕೆ ? ಬೆಂಗಳೂರಿನಲ್ಲಿ ಹದಿನೈದು ಸ್ಥಾನಗಳನ್ನು ನಾವು ಗೆದ್ದು ಬಂದಿದ್ದೇವೆ. ಬೇರೆ ಕಡೆಗಳಲ್ಲೂ ಕೂಡ ನಾವು ಗೆದ್ದು ಬಂದಿದ್ದೇವೆ.

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ನಾನು ನೇರವಾಗಿ ಕೇಳುತ್ತಿದ್ದೇನೆ. ಇದರ ಬಗ್ಗೆ ಉತ್ತರ ಬಂದಿಲ್ಲ. ಹದಿನೆಂಟು ವರ್ಷ ಮೀರಿದವರಿಗೆ ಮತದಾನದ ಹಕ್ಕನ್ನು ಪಟ್ಟಣ ಪ್ರದೇಶದಲ್ಲಿ ಮಾತ್ರ ಏಕೆ ಕೊಟ್ಟಿದ್ದೀರಿ ? ಹಳ್ಳಿ ಪ್ರದೇಶದಲ್ಲಿ ಏಕೆ ಕೊಟ್ಟಿಲ್ಲ ?

(ಗೊಂದಲ)

ಚೇರ್ಮನ್.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನೀವು ಹೀಗೆ ಎಲ್ಲರೂ ಏಕಕಾಲದಲ್ಲಿ ಮಾತನಾಡುವುದು ಸರಿಯಲ್ಲ. ಹಿಂದೆ ಮಂತ್ರಿಗಳಾಗಿದ್ದವರೂ ಹೀಗೆ ಮಾತನಾಡಿದರೆ ಹ್ಯಾಗೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದರಲ್ಲಿ ತಾರತಮ್ಯ ಮಾಡಲಾಗಿದೆ. ಅದನ್ನು ಕೇಳುವುದು ನಮ್ಮ ನೈತಿಕ ಹಕ್ಕು.

(ಶ್ರೀ ಜೆ. ಡಿ. ಸೋಮಪ್ಪ, ಜಿ. ಎಸ್ ಬಸವರಾಜು ಮತ್ತು ಬಿ. ಬಿ. ಚಿಮ್ಮನ ಕಟ್ಟಿಯವರು ಸಭಾಧ್ಯಕ್ಷ ಪೀಠದ ಮುಂದಿರುವ ಆವರಣದಲ್ಲಿ ಬಂದು ಕುಳಿತುಕೊಂಡರು)

ಚೇರ್ಮನ್.—ಹೀಗೆ ಪ್ರತಿಭಟನೆ ಮಾಡುವುದು ಸರಿಯಲ್ಲ. ಮಂತ್ರಿಗಳು ಉತ್ತರ ಕೊಟ್ಟ ಮೇಲೆ, ಅದು ನಿಮ್ಮ ದೃಷ್ಟಿಯಲ್ಲಿ ಸಮಂಜಸವಲ್ಲ ಎಂದು ತೋರಿದರೆ ಆಗ ಬೇಕಾದರೆ ಪ್ರತಿಭಟನೆಯನ್ನು ವ್ಯಕ್ತಪಡಿಸಬಹುದು.

(ಗೊಂದಲ)

ಶ್ರೀ ಧರ್ಮಸಿಂಗ್.--ತಾಲೂಕು ಅಭಿವೃದ್ಧಿ ಮಂಡಳಿಯಲ್ಲಿ ಚುನಾವಣೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹದಿನೆಂಟು ವರ್ಷ ವಯಸ್ಸಾದ ಯುವಕರಿಗೆ ಮತದಾನ ಅವಕಾಶವನ್ನು ಸರ್ಕಾರದವರು ಏಕೆ ಮಾಡಿ ಕೊಡುತ್ತಿಲ್ಲ ? ಅದು ಬಿಟ್ಟು ಪಟ್ಟಣ ಪ್ರದೇಶದ ಯುವಕರ ಸಲುವಾಗಿ ವಿಚಾರ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ. ಈ ಸರ್ಕಾರ ಏನಿದೆ ಇದು ಮೈಸೂರು ಬೆಂಗಳೂರು, ಶಿವಮೊಗ್ಗ ಜಿಲ್ಲೆಗಳ ಪ್ರಾತಿನಿಧ್ಯ ಪಡೆದ ಸರ್ಕಾರ, ಬರೀ ಪಟ್ಟಣ ಪ್ರದೇಶದವರ ಬಗ್ಗೆ ವಿಚಾರ ಮಾಡುತ್ತಿದೆಯೆಂದು ನಾನು ನೇರವಾಗಿಯೇ ಹೇಳುತ್ತಿದ್ದೇನೆ.

ಕೇವಲ ಪಟ್ಟಣ ಪ್ರದೇಶಗಳನ್ನು ಮಾತ್ರ ವಿಚಾರ ಮಾಡತಕ್ಕಂತಹ ಸರಕಾರವೇ ಇದು ? ಹಳ್ಳಿಗಾಡಿನಲ್ಲಿರತಕ್ಕಂತಹ ಜನರಿಗೂ ಈ ವ್ಯವಸ್ಥೆಯನ್ನು ಕಲ್ಪಿಸುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಚೇರ್ಮನ್.--ನಿಮ್ಮ ಪಕ್ಷದಲ್ಲಿ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದ್ದೀರಾ ? ೩ ಜನ ಈ ರೀತಿ ಇಲ್ಲಿ ಬಂದು ಕುಳಿತುಕೊಂಡಿದ್ದಾರೆ. ನೀವು ಮಾತನಾಡುವುದು ರೆಕಾರ್ಡ್ ಆಗುವುದಿಲ್ಲ, ಇದು ನಿಮ್ಮ ಪಕ್ಷದ ನಿಲುವೇನು ? ದಯಮಾಡಿ ತಾವು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಇಲ್ಲದಿದ್ದರೆ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯಾಗುತ್ತದೆ. ನಿಮ್ಮ ಪಕ್ಷದವರು ಕೆಲವರು ಅಲ್ಲಿದ್ದೀರಿ ? ಕೆಲವರು ಇಲ್ಲಿದ್ದೀರಿ ?...

ಶ್ರೀ ಧರ್ಮಸಿಂಗ್.--ಈ ಬಗ್ಗೆ ಸರ್ಕಾರ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಇಲ್ಲದಿದ್ದರೆ ನಾವು ಕೂಡ ಅಲ್ಲಿಗೆ ಹೋಗಿ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.--ನಾನು ಇದನ್ನು ಪ್ರಥಮದಲ್ಲೇ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸಚಿವರು ಈ ತಿದ್ದುಪಡಿಯನ್ನು ಇಂಟರ್‌ಡ್ಯೂಸ್ ಮಾಡುವುದಕ್ಕೆ ಮುಂಚೆ ಇದರಲ್ಲಿ ತಾರತಮ್ಯ ಇದೆ, ತಾವು ಒಪ್ಪಿಕೊಳ್ಳಿ. ಬೇಕಾದರೆ ಆಮೇಲೆ ಯೋಚನೆ ಮಾಡೋಣ. ಇದನ್ನು ಬಿಟ್ಟು ಬಿಡಿ ಅಂತ ಹೇಳಿದ ಮೇಲೂ ಕೂಡ ಮಾನ್ಯ ಸಚಿವರು.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೆ.—.........

ಶ್ರೀ ಕೆ. ಬಿ. ಮಲ್ಲಪ್ಪ.--ಧರಣಿ ಕುಳಿತಿರುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮಾತನಾಡುತ್ತಿದ್ದಾರೆ. ಅವರೆ ಅಲ್ಲ ಬೇರೆ ಯಾವ ಸದಸ್ಯರು ಮಾತನಾಡುವುದು ಸರಿಯಲ್ಲ. ಸಭೆ ಆರ್ಡರ್‌ನಲ್ಲಿಲ್ಲ. ಆದ್ದರಿಂದ ತಾವು ಮಾನ್ಯ ಸದಸ್ಯರ ಮನವೊಲಿಸಿ ಅವರ ಸ್ಥಾನಗಳಿಗೆ ಕಳುಹಿಸಿ.

ಶ್ರೀ ಎಸ್. ಬಂಗಾರಪ್ಪ.--ಅದನ್ನು ಯಾರು ಹೇಳಬೇಕು ? ನಾವು ನೀವು ಇಬ್ಬರೂ ಸೇರಿ ಮಾನ್ಯ ಸದಸ್ಯರುಗಳ ಮನವೊಲಿಸಬೇಕು.

ಶ್ರೀ ಮೈಕೇಲ್ ಫರ್ನಾಂಡೀಸ್ --ಅನೇಕ ವರ್ಷಗಳಿಂದ ಚುನಾವಣೆಯನ್ನೇ ನಡೆಸಿಲ್ಲ. ಆವಾಗ ಅನ್ಯಾಯವಾಗಿರುವುದು ನಿಮಗೆ ಗೊತ್ತಾಗಲಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.--ಚುನಾವಣೆಯನ್ನು ಮುಂದಕ್ಕೆ ಹಾಕಬೇಕು. ಇದಕ್ಕೆ ತಕರಾರು ಮಾಡಬೇಕೆಂಬ ದುರುದ್ದೇಶದಿಂದಲೇ ಮಾನ್ಯ ಸದಸ್ಯರು ಈ ರೀತಿ ಮಾಡುತ್ತಿದ್ದಾರೆ ಇದು ಸರಿಯಾದುದಲ್ಲ. ಚುನಾವಣೆಯನ್ನು ಮುಂದೂಡಬೇಕೆಂಬ ದುರುದ್ದೇಶದಿಂದ ಇವರು ಮಾಡುತ್ತಿರುವ ಕೆಲಸ.

(ಗೊಂದಲ)

ಶ್ರೀ ಧರ್ಮಸಿಂಗ್. - ಕನಕಪುರದಲ್ಲಿ ನಡೆಯುವಂತಹ ಚುನಾವಣೆಯಲ್ಲಿ ನೋಡುತ್ತೇವೆ. ಚುನಾವಣೆಗೆ ನಾವು ಹೆದರುವುದಿಲ್ಲ. ನಾವು ೮೧ ಜನ ಸದಸ್ಯರಿದ್ದೇವೆ. ನೀವು ನಮಗಿಂತ ಕಡಿಮೆ ಇದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಮಹತ್ವವಾದ ತಾತ್ವಿಕವಾದ ವಿಚಾರವನ್ನು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಆ ಸಲಹೆಯನ್ನು ಮೊದಲು ಒಪ್ಪಿದ್ದೇವೆ.

ಮಹಿಳೆಯರಿಗೆ ಶೇಕಡ ೨೦ ಭಾಗ ಮೀಸಲಾತಿಯನ್ನು ಮಾಡತಕ್ಕಂತಹ ವಿಚಾರದಲ್ಲಿ ತಾವುಗಳೆಲ್ಲರೂ ಒಪ್ಪಿಗೆ ಕೊಡುತ್ತೀರೆಂದು ನನ್ನ ಭಾವನೆ ಇದೆ. ಈ ಎರಡು ತಿದ್ದುಪಡಿಯಲ್ಲಿ ಏನಿದೆ ಅಂದರೆ ೧೮ ವರ್ಷ ವಯಸ್ಸಿಗೆ ಮೇಲ್ಪಟ್ಟು ವಯಸ್ಸಾದಂತಹವರಿಗೆ ಮತದಾನದ ಹಕ್ಕನ್ನು ಕೊಡತಕ್ಕಂತಹದ್ದು ಹಾಗೂ ಮಹಿಳೆಯರಿಗೆ ಮೀಸಲಾತಿಯನ್ನು ಕೊಡತಕ್ಕಂತಹ ಹಿನ್ನೆಲೆಯಲ್ಲಿ ತಂದಿದ್ದೇವೆ. ಇವತ್ತು ಈ ಶಾಸನ ಸಭೆಗೆ ಇಬ್ಬರೇ ಮಹಿಳಾ ಸದಸ್ಯರು ಇದ್ದಾರೆ. ಜನಸಂಖ್ಯೆಯಲ್ಲಿ ೧೦೦ಕ್ಕೆ ೫೦ರಷ್ಟು ಹೆಚ್ಚು ಮ ಹಿಳೆಯರು ಇದ್ದಾರೆ. ಅಗತ್ಯವಾದ ತಿದ್ದುಪಡಿಯನ್ನು ಎಲ್ಲಾ ಪಂಚಾಯಿತಿ ಮಟ್ಟದಲ್ಲೂ, ಜಿಲ್ಲಾ ಪರಿಷತ್ತಿನ ಮಟ್ಟದಲ್ಲೂ. ಪುರಸಭೆಗಳ ಮಟ್ಟದಲ್ಲೂ ಹಾಗೂ ನಗರ ಸಭೆಗಳಲ್ಲೂ ತರತಕ್ಕಂತಹ ವಿಚಾರ ಮಾಡಿದ್ದೇವೆ. ೧೮ ವರ್ಷ ವಯಸ್ಸಿಗಿಂತ ಮೇಲೆ ವಯಸ್ಸಾದವರಿಗೆ ಮತದಾನ ಮಾಡ ತಕ್ಕಂತಹ ಹಕ್ಕನ್ನು ನಮ್ಮ ನಗರದ ಯುವಕರಿಗೆ ಕೊಡಬೇಕು. ಅಷ್ಟೇ ಅಲ್ಲ, ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಯುವಕರಿಗೂ ಕೊಡತಕ್ಕಂತಹ ವಿಚಾರದಲ್ಲಿ ಸರ್ಕಾರದ ಸ್ಪಷ್ಟವಾದ ಧೋರಣೆ ಇದೆ. ಅದನ್ನು ನಾವು ಮಾಡುತ್ತೇವೆ. ಇವತ್ತು ತಂದಿರತಕ್ಕಂತಹ ಬಿಲ್‌ನಲ್ಲಿ ಅದು ಏಕೆ ಸೇರಲಿಲ್ಲವೋ ತಿಳಿಯದು. ಸಮಗ್ರವಾದ ತಿದ್ದುಪಡಿಯನ್ನು ತರತಕ್ಕಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಅಧಿಕಾರ ವಿಕೇಂದ್ರೀಕರಣ ದೃಷ್ಟಿಯಿಂದ, ಜಿಲ್ಲಾ ಪರಿಷತ್ತಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಈ ದೃಷ್ಟಿಯಿಂದ ಸಮಗ್ರವಾದ ತಿದ್ದುಪಡಿಯನ್ನು ತರುವವರಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೆ...

ಚೇರ್ಮನ್.—ಹೇಳಿಕೆ ಕೊಡಿ ಅಂತ ಹೇಳುತ್ತೀರಿ. ಹೇಳಿಕೆಯನ್ನು ಕೊಡುವಂತಹ ಸಮಯದಲ್ಲಿ ವಿಷಯವನ್ನು ಕೇಳದಿದ್ದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಮಗ್ರವಾದ ತಿದ್ದುಪಡಿಯನ್ನು ಸಾಧ್ಯವಾದರೆ ನಾಳೆಯೇ ಈ ಸದನದ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪಂಚಾಯಿತಿ ರಾಜ್, ಜಿಲ್ಲಾ ಪರಿಷತ್ ಹಾಗೂ ತಾಲ್ಲೂಕು ಬೋರ್ಡ್‌ಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡತಕ್ಕಂತಹದ್ದು. ಆ ಬಿಲ್ಲು ತಯಾರಾಗಿದೆ. ಅಪ್ರೂವಲ್ ಹಂತದಲ್ಲಿದೆ. ಆ ಮಸೂದೆಯಲ್ಲಿ ೧೮ ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮತದಾನ ಮಾಡುವಂತಹ ಹಕ್ಕನ್ನು ಕೊಡುವುದಕ್ಕೆ ತತ್ವಷ ಒಪ್ಪಿದ್ದೇವೆ. ಸಮಗ್ರವಾದ ತಿದ್ದುಪಡಿ ಬರುತ್ತದೆ. ಈ ಬಿಲ್ಲಿನಲ್ಲಿ ಕೆಲವು ನೀತಿ ನಿರ್ಣಯಗಳನ್ನು ಮುಂದೆ ಹಾಕುವಂತಹ ಪ್ರಮೇಯ ಇದೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಓಟರ್ಸ್ ಲಿಸ್ಟ್ ಏನಿದೆ. ಅದನ್ನು ಮಾಡಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಅಧಿಕಾರಿಗಳು ಹಾಗೂ ಸಿಬ್ಬಂದಿ ಬೇಕಾಗುತ್ತದೆ. ಏಕೆಂದರೆ ಪ್ರತಿಯೊಂದು ಹಳ್ಳಿಗೂ, ಪ್ರತಿಯೊಂದು ಹಟ್ಟಿಗೂ ಹೋಗಿ ಅದನ್ನು ಕಂಡು ಹಿಡಿದು ಹೊಸ ಪಟ್ಟಿಯಲ್ಲಿ ಸೇರಿಸಬೇಕಾದರೆ ಸಮಯ ಹೆಚ್ಚು ಹಿಡಿಯುತ್ತದೆ. ಇದರಿಂದಾಗಿ ಚುನಾವಣೆ ಮುಂದೆ ಹೋಗತಕ್ಕಂತಹ ಪ್ರಮೇಯ ಬರುತ್ತದೆ. ತಾಲ್ಲೂಕು ಬೋರ್ಡ್ ಚುನಾವಣೆ ಮುಂದೂಡಬಾರದು. ಎಲ್ಲ ಪುರಸಭೆಗಳಲ್ಲೂ ಓಟರ್ಸ್‌ಲಿಸ್ಟ್ ಮಾಡುವುದಕ್ಕೆ ಬೇಕಾದಂತಹ ಅನುಕೂಲ ಇದೆ. ಬೆಂಗಳೂರು ಮಹಾ ನಗರ ಅಷ್ಟೇ ಅಲ್ಲ, ಅನೇಕ ಪುರಸಭೆಗಳು. ಕೆಲವು ತಮಗೆ ಗೊತ್ತಿದೆ. ಕುಂದಗೋಳ ಪುರಸಭೆಯಲ್ಲಿ ೧೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಅದೇರೀತಿ ಕಲ್ಘಟ್ಟಿ ಪುರಸಭೆಯಲ್ಲಿ ೧೦ ಸಾವಿರ ಜನಸಂಖ್ಯೆ ಇದೆ. ಅನೇಕ ಪುರಸಭೆಗಳು ಇವೆ. ತಾವು ಗೆದ್ದು ಬಂದಿರತಕ್ಕಂತಹ ಕ್ಷೇತ್ರ. ಅಲ್ಲೂ ಒಂದು ಪುರಸಭೆ ಇದೆ. ೧೮ ವರ್ಷ ವಯಸ್ಸಿನ ಮೇಲ್ಪಟ್ಟವರು ಮತದಾನ ಮಾಡುವಂತಹ ಹಕ್ಕು ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಚುನಾವಣೆ ಮುಂದೆ ಹೋಗಬಾರದು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಇದಕ್ಕೆ ತಾವೆಲ್ಲ ಒಪ್ಪಬೇಕು. ಸಮಗ್ರ ತಿದ್ದುಪಡಿಯನ್ನು ತಂದಾಗ ತಾವು ಹೇಳುವುದನ್ನೆಲ್ಲಾ ಕನ್ಸಿಡರ್ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.—ಅದರ ಬಗ್ಗೆ ನಮ್ಮ ವಿರೋಧ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂತಹ ಯುವಕರಿಗೆ ಈ ಒಂದು ಅನುಕೂಲ ಸಿಗದಂತಾಗಿದೆ ಎಂಬುದು ನಮ್ಮ ಸಂಶಯ.

ಶ್ರೀ ಭೀಮಣ್ಣ ಖಂಡ್ರೆ.—ತಾಲ್ಲೂಕು ಬೋರ್ಡ್ ಚುನಾವಣೆಯಾದ ನಂತರ ಈ ಒಂದು ತಿದ್ದುಪಡಿಯನ್ನು ತರುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕಿಂತ ಮೊದಲು

ಶ್ರೀ ಭೀಮಣ್ಣ ಖಂಡ್ರೆ.—ಈಗಲೇ ತನ್ನಿ.

ಶ್ರೀ ಎಸ್. ಬಂಗಾರಪ್ಪ.—ನಗರಸಭೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಜನರಿಗೆ ೧೮ ವರ್ಷ ವಯಸ್ಸಾದವರಿಗೆ ಮತದಾನದ ಹಕ್ಕನ್ನು ಕೊಡತಕ್ಕಂತಹದ್ದು ಸ್ವಾಗತಾರ್ಹ. ತಾವು ಹೇಳುತ್ತಾ ಕಾರ್ಪೊರೇಷನ್ ಹಾಗೂ ಪುರಸಭೆಗಳ ಏರಿಯಾಗಳಲ್ಲಿ ಬರತಕ್ಕಂತಹ ಜನರಿಗೆ ಈಗಾಗಲೇ ಮತದಾರರ ಪಟ್ಟಿಯಲ್ಲಿ ಸೇರಿಸತಕ್ಕಂತಹ ಕ್ರಮ ತೆಗೆದುಕೊಂಡಿದ್ದೀರಿ. ಆದರೆ ಈ ಕೆಲಸವನ್ನು ಗ್ರಾಮಾಂತರ ಪ್ರದೇಶದಲ್ಲಿ ಮಾಡಬೇಕಾದರೆ ಹೆಚ್ಚಿಗೆ ಸಿಬ್ಬಂದಿ ಬೇಕಾಗುತ್ತದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಸರ್ಕಾರದ ಪರವಾಗಿ ತಾವು ಏನು ಹೇಳಿಕೆಯನ್ನು ಕೊಟ್ಟಿದ್ದೀರಿ. ಅದರಂತೆ ಮಾಡಿ ಪುರಸಭೆ ಹಾಗೂ ಕಾರ್ಪೊರೇಷನ್ ಏರಿಯಾದಲ್ಲಿ ಈ ಜನರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕೆಂದು ಏನು ಮಾಡಿದ್ದೀರಿ. ಇದು ಸ್ವಾಗತ ಮಾಡತಕ್ಕಂತಹ ವಿಚಾರ, ೧೮ ವರ್ಷ ವಯಸ್ಸಾದವರಿಗೆ ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲಿರುವವರಿಗೆ ತಾರತಮ್ಯ ಮಾಡಿಲ್ಲ ಎನ್ನತಕ್ಕಂತಹ ಅಭಿಪ್ರಾಯವನ್ನು ಇಟ್ಟು ಹೇಳಿದ್ದೀರಿ. ಈಗ ಅಧಿಕಾರ ವಿಕೇಂದ್ರೀಕರಣದ ಆಧಾರದ ಮೇಲೆ ತರಬೇಕೆಂದಿರುವ ಸಮಗ್ರ ತಿದ್ದುಪಡಿಯ ಕರಡು ತಯಾರಾಗಿವೆ, ನಾಳೆ ಅದು ರೆಡಿಯಾಗಬಹುದೆಂಬ ಮಾತನ್ನು ಹೇಳಿದ್ದೀರಿ, ನಾಳೆ ಅದನ್ನು ಸದನದಲ್ಲಿ ತರುವುದಕ್ಕೆ ಸಾಧ್ಯವಾಗದೇ ಇರಬಹುದು ಆ ವಿಚಾರ ತಮಗೆ ಗೊತ್ತಿಲ್ಲದೇ ಇರಬಹುದು. ಒಂದು ವೇಳೆ ನಾಳೆ ಆ ಸಮಗ್ರ ಮಸೂದೆಯನ್ನು ಸದನದಲ್ಲಿ ತರುವುದಕ್ಕೆ ಆಗುವುದಿದ್ದರೆ ಈ ಒಂದು ತಿದ್ದುಪಡಿ ಮಸೂದೆಯನ್ನು ಈಗ ಸದನದಲ್ಲಿ ಮಂಡಿಸುವಂತಹ ಅವಶ್ಯಕತೆ ಇಲ್ಲ. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ನಾಳೆ ತರತಕ್ಕಂತಹ ಉದ್ದೇಶ ಇದ್ದರೆ ಒಂದು ವೇಳೆ ಕಾಲದ ಅಭಾವದಿಂದ ನಾಳೆ ಸದನದಲ್ಲಿ ಸಮಗ್ರ ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯವಾಗದಿದ್ದರೆ, ಏಕೆಂದರೆ ನಾಳೆ ಸದನ ಕೊನೆಗೊಳ್ಳುತ್ತದೆ. ಸುಗ್ರೀವಾಜ್ಞೆಯ ಮುಖಾಂತರವಾದರೂ ಪಟ್ಟಣ ಪ್ರದೇಶದಲ್ಲಿರುವವರಿಗೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಇರುವವರಿಗೆ ಯಾರಿಗೆ ೧೮ ವರ್ಷಕ್ಕಿಂತ ಮೇಲ್ಪಟ್ಟು ವಯಸ್ಸಾಗಿದೆ ಅವರಿಗೆ ಮತದಾನದ ಹಕ್ಕನ್ನು ಕೊಡುತ್ತೇವೆಂದು ಈ ಸದನಕ್ಕೆ ಸರ್ಕಾರದ ಪರವಾಗಿ ಭರವಸೆಯನ್ನು ಈ ದಿನ ಕೊಡಬೇಕು.

೩-೩೦ ಪಿ. ಎಂ.

ಈರೀತಿಯಾದ ಒಂದು ಭರವಸೆ ಕೊಟ್ಟರೆ ನಮ್ಮದು ಏನೂ ಅಭ್ಯಂತರವೇನೂ ಇಲ್ಲ. ನೀವು ಸುಗ್ರೀವಾಜ್ಞೆ ಮುಖಾಂತರವಾದರೂ ತೆಗೆದುಕೊಂಡು ಬನ್ನಿ, ಅದರ ಬಗ್ಗೆ ಭರವಸೆ ಕೊಡಿ

ಶ್ರೀ ಹೆಚ್. ಗಂಗಾಧರನ್.—ನಾವೂ ಕೂಡ ಅದು ಆಗಲೇ ಬೇಕು ಎಂದು ಒತ್ತಾಯ ಮಾಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಹಾಗೆ ಮಾಡಿದರೆ ನಮ್ಮದೂ ಸಹ ಏನೂ ಅಭ್ಯಂತರವಿಲ್ಲ. ನಾವು ತಯಾರಿದ್ದೇವೆ.

ಶ್ರೀ ಮೈಕಲ್ ಫರ್ನಾಂಡಿಸ್.—ಮುಂದೆ ಮಳೆಗಾಲ ಬಂದರೆ ಚುನಾವಣೆಯನ್ನು ಮುಂದುವರೆಸಬೇಕಾಗುತ್ತದೆ, ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು.

ಶ್ರೀ ಧರ್ಮಸಿಂಗ್.—ಹಾಗಾದರೆ ನಗರ ಪ್ರದೇಶಗಳಲ್ಲಿ ಮಾತ್ರ ಚುನಾವಣೆ ಆಗಬೇಕು ಗ್ರಾಮಾಂತರ ಪ್ರದೇಶಗಳಲ್ಲಿ ಚುನಾವಣೆ ಆಗಬಾರದು ಎಂತಲೇ ನಿಮ್ಮ ಇಷ್ಟ, ಏತಕ್ಕೆಲ್ಲಾ ಹೀಗೆ ಮಾತನಾಡುತ್ತೀರಾ ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಾಕಷ್ಟು ಸಿಬ್ಬಂದಿ ವರ್ಗ ಇಲ್ಲ. ಗ್ರಾಮಾಂತರದ ಪ್ರದೇಶದಲ್ಲಿ ಮತದಾನದ ಪಟ್ಟಿಯನ್ನು ರಿವೈಸ್ ಮಾಡಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ ಅದಕ್ಕೆ ಮೊದಲು ಈ ನಗರ ಸಭೆ ಹಾಗೂ ಕಾರ್ಪೊರೇಷನ್ ಬಗ್ಗೆ ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ ಅಂತ ಹೇಳುತ್ತೀರಿ. ಆದರೆ, ಇದರ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇವೆ ಅದೇನೆಂದರೆ ೧೮ ವರ್ಷ ವಯೋಮಿತಿ ಇರುವವರಿಗೆ ಈ ಮತದಾನದ ಹಕ್ಕನ್ನು ಕೊಡಬೇಕೆಂದು ಈ ಸರ್ಕಾರ ತೀರ್ಮಾನ ಮಾಡಿರುವುದು ಸರಿಯಷ್ಟೆ. ಅದು ಈಗಿನ ತೀರ್ಮಾನವಲ್ಲ. ಹಿಂದೆಯೇ. ಮಾಡಿದ್ದೀರಿ ಅವೆಲ್ಲ ಪತ್ರಿಕೆಗಳಲ್ಲೂ ಬಂದಿವೆ. ತಮಗೆ ಗೊತ್ತಿರುವ ಹಾಗೆ ವೋಟರ್ಸ್ ಲಿಸ್ಟ್ ಅನ್ನು

ಆಗಾಗ್ಗೆ ರಿವೈಸ್ ಮಾಡುವಂಥಾ ಕೆಲಸ ನಮ್ಮ ದೇಶದಲ್ಲಿ ನಡೆದಿದೆ. ನಾನು ತಮಗೆ ಈ ಸಂದರ್ಭದಲ್ಲಿ ಕೇಳುತ್ತೇನೆ, ಇದಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ ? ಎಷ್ಟು ಸಿಬ್ಬಂದಿ ವರ್ಗ ಬೇಕಾಗುತ್ತದೆ ? ಅನ್ನುವುದು ತಮಗೆ ಗೊತ್ತು. ಈ ಕೆಲಸಕ್ಕೆ ಉಪಾಧ್ಯಾಯರನ್ನೂ, ಬೇರೆ ಬೇರೆ ಇಲಾಖೆಗಳಲ್ಲಿರ ತಕ್ಕಂಥಾ ಸಿಬ್ಬಂದಿ ವರ್ಗವನ್ನು ಜೊತೆಗೆ ಸ್ಪೈಫೆಂಡರಿ ಗ್ರಾಜುಯೇಟ್ಸ್‌ನವರನ್ನೂ ತೆಗೆದುಕೊಂಡು ಕೆಲಸ ಮಾಡಿಸುತ್ತಾರೆ. ಹೊಸದಾಗಿ ಯಾರನ್ನೂ ಏನೂ ಇದಕ್ಕೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಮೈಕಲ್ ಫರ್ನಾಂಡಿಸ್.—ಈಗ ಉಪಾಧ್ಯಾಯರನ್ನು ಈ ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ಎಕ್ಸಾಮಿನೇಷನ್ ಇದೆಯಲ್ಲಾ. ಅವರು ತಮ್ಮ ಸ್ಕೂಲ್ ಕೆಲಸ ಬಿಟ್ಟು ಈ ಕೆಲಸಕ್ಕೆ ಹೋಗುವುದಕ್ಕಾಗುತ್ತದೆಯೇ ?

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ಈಗ ಎಕ್ಸಾಮಿನೇಷನ್ ಇದೆ. ಬೇರೆ ಬೇರೆ ಇಲಾಖೆಗಳಲ್ಲಿ ಸಿಬ್ಬಂದಿ ವರ್ಗ ಏನು ಇದೆ ಅವರನ್ನೂ ತೆಗೆದುಕೊಂಡು ಇನ್ನೇನಾದರೂ ಕೊರತೆ ಇದ್ದರೆ ಅವರನ್ನು ವಾರ್‌ಫುಟಿಂಗ್ ಮೇಲೆ ತೆಗೆದುಕೊಂಡು ಈ ಮತದಾರರ ಪಟ್ಟಿಯನ್ನು ಪರಿಷ್ಕರಣ ಮಾಡಿಸುವುದಕ್ಕೆ ಸಾಧ್ಯತೆ ಇಲ್ಲವೇ ? ಸಾಧ್ಯತೆ ಇದೆ. ಈಗಲೂ ಕೂಡ ಕಾಲ ಮಿಂಚಿಲ್ಲ, ಆರೀತಿ ಮಾಡಬಹುದು. ಅದರ ಬಗ್ಗೆ ಎಲ್ಲರೂ ಸ್ವಾಗತ ಮಾಡುತ್ತಾರೆ. ಅದರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ. ಈ ೧೮ ವರ್ಷದ ಮತದಾನದ ಬಗ್ಗೆ ಮಾನ್ಯ ಗಂಗಾಧರನ್‌ರವರು ಹೇಳತಕ್ಕಂಥಾ ಮಾತು ಎಲ್ಲರಿಗೂ ಅರ್ಥವಾಗಿದೆ. ಅದನ್ನು ಎಲ್ಲರೂ ಸ್ವಾಗತಾರ್ಹಮಾಡುತ್ತಾರೆ. ನಾವೆಲ್ಲರೂ ಕೂಡ ಅದನ್ನು ಸ್ವಾಗತ ಮಾಡುತ್ತೇವೆ. ಇದರ ಬಗ್ಗೆ ಬೇಕಾದರೆ ಒಂದು ಸುಗ್ರೀವಾಜ್ಞೆಯನ್ನಾದರೂ ಹೊರಡಿಸಿ. ಈಗಲೂ ಕಾಲ ಮಿಂಚಿಲ್ಲ. ಎಲ್ಲಾ ಇಲಾಖೆಗಳಿಗೆ ತಿಳಿಸಿ, ನಿಮ್ಮ ಸಿಬ್ಬಂದಿ ವರ್ಗ ಈಗ ಏನು ಇದೆ ಅವರ ಕೈಯಲ್ಲಿ ಈ ಮತದಾನದ ಪರಿಷ್ಕರಣವನ್ನು ಮಾಡಿಸಬಹುದು. ಒಂದು ವೇಳೆ ಅಷ್ಟು ಸಿಬ್ಬಂದಿ ವರ್ಗ ಸಿಕ್ಕದೇಹೋದರೆ ೧೫ ದಿವಸ ತಡವಾಗಬಹುದು. ಇನ್ನೊಂದು ವೇಳೆ ಮಳೆ ಬಂದರೆ ಚುನಾವಣೆಯನ್ನು ಮುಂದೂಡಬಹುದು ಎನ್ನುವುದನ್ನು ಮಾನ್ಯ ಸದಸ್ಯರೊಬ್ಬರು ತಿಳಿಸಿದರು. ಅದಕ್ಕೆ ನಾನು ಹೇಳುತ್ತೇನೆ, ಬಾಂಬೆ ಕರ್ನಾಟಕ ಏರಿಯಾದಲ್ಲಿ ಹೈದ್ರಾಬಾದ್ ಕರ್ನಾಟಕ ಏರಿಯಾದಲ್ಲಿ ಧಾರವಾಡದಲ್ಲಿ ಸ್ವಲ್ಪ ಭಾಗ ಬಿಟ್ಟರೆ ಕೆಲವು ಕಡೆಗಳಲ್ಲಿ ಮಳೆಬರುವುದಿಲ್ಲ ಎಲ್ಲಿ ಮಳೆ ಜಾಸ್ತಿ ಇದೆ ಎಂದರೆ ದಕ್ಷಿಣ ಕನ್ನಡ ಜಿಲ್ಲೆ, ಕಾರವಾರ್, ಚಿಕ್ಕಮಗಳೂರು, ಶಿವಮೊಗ್ಗ ಮೈಸೂರು. ಹಾಸನ ಈ ಭಾಗಗಳಲ್ಲಿ ಜಾಸ್ತಿ ಇದೆ, ಆದುದರಿಂದ ಮಳೆ ಪ್ರಮಾಣ ಕೆಲವು ಕಡೆಗಳಲ್ಲಿ ಜಾಸ್ತಿ ಇರುವುದಿಲ್ಲ, ಎಲ್ಲೋ ಕೆಲವು ಭಾಗಗಳಲ್ಲಿ ಮಳೆ ಜಾಸ್ತಿ ಬರುತ್ತದೆ ಅಂತ ತಿಳಿದುಕೊಂಡು ಈ ಚುನಾವಣೆಯನ್ನು ಮುಂದಕ್ಕೆ ಹಾಕುವುದು ಒಳ್ಳೆಯದಲ್ಲ. ಮಾನ್ಯ ಮಂತ್ರಿಗಳೂ ಸಹ ಈ ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲ ಎಂದು ಹೇಳಿದ್ದಾರೆ. ಬಹಳ ಸಂತೋಷ. ಈ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ ೧೮ ವರ್ಷ ವಯೋಮಿತಿ ಇರುವವರನ್ನು ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಮತ್ತು ಪಟ್ಟಣ ಹಾಗೂ ನಗರ ಸಭೆಯ ಮತದಾರರ ಪಟ್ಟಿಗೆ ಸೇರಿಸಿ ಈ ಪಂಚಾಯಿತಿ ಮಟ್ಟದಲ್ಲಿ ಬಿಟ್ಟು ಬಿಟ್ಟರೆ, ಇದರ ಬಗ್ಗೆ ತಾರತಮ್ಯ ತೋರಿಸಿದರೆ ಅಷ್ಟು ಒಳ್ಳೆಯದಲ್ಲ. ಒಂದು ವೇಳೆ ಆರೀತಿ ಮಾಡಿದರೆ ಗ್ರಾಮಾಂತರ ಪ್ರದೇಶದ ಜನರಿಗೆ ನಾವು ತಾರತಮ್ಯ ತೋರಿಸಿದಂತಾಗುತ್ತದೆ. ಅಲ್ಲದೆ ಈ ಸರ್ಕಾರ ಈ ಗ್ರಾಮಾಂತರ ಪ್ರದೇಶದ ಜನರಿಗೆ ಏನು ಒಂದು ಆಶ್ವಾಸನೆ ಕೊಟ್ಟಿತ್ತೋ ಅದಕ್ಕೆ ವಂಚನೆಯಾದ ಹಾಗೆ ಆಗುತ್ತದೆ. ಆದುದರಿಂದ ನಮಗೆ ಇದರ ಬಗ್ಗೆ ಸ್ಪಷ್ಟ ಭರವಸೆ ಬೇಕು. ನಾವು ಈಗ ಈ ಎರಡೂ ಬಿಲ್ಲನ್ನು ಪಾಸು ಮಾಡಿದರೆ ಒಂದು ಮಸೂದೆಗೆ ಒಂದು ತರಹ ಇನ್ನೊಂದು ಮಸೂದೆಗೆ ಇನ್ನೊಂದು ತರಹ ವ್ಯತ್ಯಾಸ ಕಂಡು ಬರುತ್ತದೆ, ಅದು ಆಗಬಾರದು. ನೀವು ನಾಳೆಯೇ ಇದರ ಬಗ್ಗೆ ಒಂದು ಸಮಗ್ರವಾದ ಮಸೂದೆಯನ್ನು ತರುತ್ತೇವೆಂದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನಾಳೆಯೇ ಸಮಗ್ರವಾದ ಮಸೂದೆಯನ್ನು ತೆಗೆದುಕೊಂಡು ಬರುವುದಾದರೆ ಈ ಮಸೂದೆಯನ್ನು ಈಪೊತ್ತೇ ಕನ್ಸಿಡರೇಷನ್‌ಗೆ ತೆಗೆದುಕೊಳ್ಳಬೇಕೆಂದು ದಯಮಾಡಿ ಒತ್ತಾಯ ಮಾಡಬೇಡಿ. ನಾನು ಕೇಳುವುದೇನೆಂದರೆ ಒಂದುವೇಳೆ ಸುಗ್ರೀವಾಜ್ಞೆಯನ್ನು ಹೊರಡಿಸುವ ಸಂದರ್ಭ ಬಂದರೆ ಈ ಪಂಚಾಯಿತಿಗಳನ್ನೂ ಸೇರಿಸಿ ಸಮಗ್ರವಾದ ಒಂದು ಬಿಲ್ಲನ್ನು ಜಿಲ್ಲಾ ಪರಿಷತ್ತಿನ ಅಧಿಕಾರ ವಿಕೇಂದ್ರೀಕರಣದ ಒಂದು ಆಧಾರದ ಮೇಲೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ಕೊಟ್ಟರೆ ಸಾಕು. ನಾಳೆ ಒಂದು ವೇಳೆ ತಾವು ಇದರ ಬಗ್ಗೆ ಸುಗ್ರೀವಾಜ್ಞೆಯನ್ನು ಹೊರಡಿಸದಿದ್ದರೆ ನಿಮ್ಮ ಒಂದು ಆದೇಶದ ಪ್ರಕಾರ ನಡೆದುಕೊಂಡಿಲ್ಲ ಅನ್ನುವುದು ಗೊತ್ತಾಗುತ್ತದೆ. ಅಲ್ಲದೆ ಜನತೆ ಏನು ತಿಳಿದುಕೊಳ್ಳುತ್ತದೆ ಎಂದರೆ ಹಿಂದಿನಿಂದಲೂ ಯಾವ ಒಂದು

ಪ್ರವೃತ್ತಿ ಕಳೆದುಕೊಂಡು ಬಂದಿದೆಯೋ ಅದೇರೀತಿಯಾಗಿ ಈಗಲೂ ಬೆಳೆದುಕೊಡು ಬರುತ್ತಾ ಇದೆ ಅಂತ ತಿಳಿದುಕೊಳ್ಳುತ್ತಾರೆ ಮತ್ತು ಈ ಸದನದಲ್ಲಿರುವ ಎಲ್ಲರಿಗೂ ಇವರ ಬಗ್ಗೆ ಒಂದು ಶಂಕೆ ಬರುತ್ತದೆ ಅಂತ ಹೇಳಿದರೆ ತಾವೆಲ್ಲಾ ಒಪ್ಪಬಹುದು ಅಂತ ನಾನು ನಂಬಿದ್ದೇನೆ. ನಾಳೆ ದಿವಸ ಇದರ ಬಗ್ಗೆ ಒಂದು ಸಮಗ್ರವಾದ ಮಸೂದೆ ತೆಗೆದುಕೊಂಡು ಬಂದರೆ ಪರವಾಗಿಲ್ಲ ಇಲ್ಲದೇ ಹೋದರೆ ಒಂದು ಆರ್ಡಿನೆನ್ಸ್ ಆದರೂ ತೆಗೆದುಕೊಂಡು ಬರುತ್ತೇವೆ ಅಂತಾದರು ಹೇಳಿ. ಅದು ಬಿಟ್ಟು ಈ ಎರಡು ಬಿಲ್ಲನ್ನು ನಾವು ಪಾಸು ಮಾಡಿಬಿಟ್ಟರೆ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗೆ ಒಂದು ತರಹ ಪಂಚಾಯಿತಿಗಳಿಗೆ ಒಂದು ತರಹ ಆಗುತ್ತದೆ. ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗೆ ಮಾತ್ರ ಇದನ್ನು ತಂದಿದ್ದಾರೆ ಅಂತ ಆಗುತ್ತದೆ. ಆದುದರಿಂದ ದಯುಮಾಡಿ ಕ್ಷಮಿಸಬೇಕೆಂದು ಹೇಳುತ್ತೇನೆ. ಇದನ್ನು ತಾವು ಏತಕ್ಕೆ ಒಪ್ಪಿಕೊಳ್ಳಬಾರದು ? ನೀವು ಇದಕ್ಕೆ ಒಪ್ಪಿಗೆ ಕೊಡದೇ ಇದ್ದರೆ ಇದರಲ್ಲಿ ತಾರತಮ್ಯ ಬರಬಹುದು. ಮುಂದೆ ಏನು ಮಾಡುತ್ತಾರೋ ಅನ್ನುವ ಶಂಕೆ ಬರುತ್ತದೆ. ಉದ್ದೇಶ ಪೂರ್ವಕವಾಗಿ ಈ ಮಸೂದೆಯನ್ನು ನಾವು ವಿರೋಧಮಾಡಬೇಕು ಅನ್ನುವ ಆಸೆ ಏನೂ ಇಲ್ಲ. ಇದರ ಬಗ್ಗೆ ಒಂದು ಶಂಕೆ ಇರುವುದರಿಂದ ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ ಈ ಕಡೆ ಪಕ್ಷದ ಸದಸ್ಯರ ಮೇಲೆ ತೀವ್ರ ಪ್ರತಿಭಟನೆ ತೋರಿಸಿದರು ಏತಕ್ಕೆಂದರೆ ಪಂಚಾಯಿತಿ ಬಗ್ಗೆ ಈ ೧೮ ವರ್ಷದ ವಯೋಮಿತಿಯನ್ನು ಈ ಬಿಲ್‌ನಲ್ಲೇ ಸೇರಿಸಬೇಕಾಗಿತ್ತು, ಈಗ ತಂದಿರುವ ಬಿಲ್ಲಿನಲ್ಲಿ ಸೇರಿಸಿಲ್ಲಾ ಮುಂದೆ ಪಂಚಾಯತ್ ಬಗ್ಗೆ ಬಿಲ್ ತಂದಾಗ ಅದರಲ್ಲಿ ಏನು ಮಾಡುತ್ತಾರೋ ಅನ್ನುವ ವಿಚಾರವಾಗಿ ಹೇಳಿದರು. ಅದಕ್ಕೆ ನಾನು ಉತ್ತರ ಹೇಳುವುದು ಅಷ್ಟು ಸಾಧುವೂ ಅಲ್ಲ. ಸರ್ಕಾರದವರೇ ಹೇಳಬೇಕು. ಅವರೇ ಆ ಕಾರಣ ಹೇಳಲಿ. ಒಟ್ಟಿನಲ್ಲಿ ಹೇಳಬೇಕಾದರೆ ಆ ರೀತಿ ಇದರಲ್ಲಿ ಸೇರಿಸಬೇಕಾಗಿತ್ತು ಇದಗಲ್ಲಿ ಬಿಟ್ಟಿದ್ದು ಸರಿಯಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಇದು ಎಲ್ಲರಿಗೂ ಅನ್ವಯಿಸುವ ಹಾಗೆ ಇರಬೇಕು. ಈಗ ತಂದಿರುವ ಬಿಲ್ ಬರೇ ನಗರ ಮತ್ತು ಪಟ್ಟಣದವರಿಗೆ ಮಾತ್ರ ಅನ್ವಯಿಸುತ್ತದೆ. ಗ್ರಾಮಾಂತರ ಪ್ರದೇಶದ ಜನರಿಗೆ ಅನ್ವಯಿಸುವುದಿಲ್ಲ. ಈ ಒಂದು ಶಂಕೆಯನ್ನು ವ್ಯಕ್ತ ಪಡಿಸಿದ್ದಾರೆ. ನನ್ನ ಅಭಿಪ್ರಾಯ ಹೇಳುವುದಾದರೆ ಒಂದಕ್ಕೆ ಒಂದು ತತ್ವ ಅನುಸರಿಸಿದರೆ ಅದೇ ತತ್ವ ಎಲ್ಲದಕ್ಕೂ ಇರಬೇಕು. ಇನ್ನೊಂದು ಆ ತತ್ವವನ್ನು ಬಿಡಕೂಡದು. ಆ ತತ್ವ ಎಲ್ಲರಿಗೂ ಅನುಕರಣೆಯಾಗಿರುವ ಹಾಗೆ ಇರಬೇಕು. ಮಾನ್ಯ ಮಂತ್ರಿಗಳು ಯಾರೇ ಆಗಲಿ, ಇದನ್ನು ಯಾರೇ ಮೂವ್ ಮಾಡಲಿ, ಸಂಬಂಧಪಟ್ಟ ಮಂತ್ರಿಗಳು ನಾಳೆ ಇದರ ಬಗ್ಗೆ ಒಂದು ಸಮಗ್ರವಾದ ಬಿಲ್ಲನ್ನು ತರಬೇಕೆಂದಿದ್ದೇವೆ ಈ ೧೮ ವರ್ಷದ ವಯೋಮಿತಿಯನ್ನು ಗ್ರಾಮಾಂತರ ಪ್ರದೇಶದ ಜನರಿಗೂ ಅನ್ವಯಿಸುವ ಹಾಗೆ ಒಂದು ಬಿಲ್ ತರುತ್ತೇವೆ ಅಂತ ಏನು ಹೇಳಿದರು ಅದರ ಬಗ್ಗೆ ಬಹಳ ಸ್ಪಷ್ಟವಾದ ಅಭಿಪ್ರಾಯ ಕೊಟ್ಟರೆ ಈ ಎರಡೂ ಬಿಲ್‌ಗಳನ್ನು ಪಾಸ್ ಮಾಡುವುದರಲ್ಲಿ ವಿರೋಧ ಇರುವುದಿಲ್ಲ. ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟ ಭರವಸೆ ಕೊಟ್ಟರೆ ಸಾಕು ಎಂದು ಬಂಗಾರಪ್ಪನವರು ಹೇಳಿದರು. ಒಂದು ವೇಳೆ ಈಗ ಆ ಬಿಲ್ಲನ್ನು ತರದೇ ಹೋದರೂ ಕೂಡ ಮುಂದೆ ಏನಾದರೂ ಒಂದು ಸುಗ್ರೀವಾಜ್ಞೆ ಹೊರಡಿಸಿದರೆ ಅದರಲ್ಲಾದರೂ ತರುತ್ತೇವೆ ಅನ್ನುವ ಒಂದು ಸ್ಪಷ್ಟ ಭರವಸೆ ಬೇಕು ಅಂತ ಹೇಳಿದರು. ನನಗೆ ಅನಿಸುತ್ತದೆ ನಾಳೆ ತಾವು ಇದಕ್ಕೆ ಅಮೆಂಡ್‌ಮೆಂಟ್‌ಬಿಲ್ ತೆಗೆದುಕೊಂಡು ಬಂದರೂ ಪರವಾಯಿಲ್ಲಾ, ಇಲ್ಲದೇ ಹೋದರೆ ಮುಂದೆ ತರುವ ಸುಗ್ರೀವಾಜ್ಞೆಯಲ್ಲಿ ಗ್ರಾಮಪಂಚಾಯಿತಿಗಳಿಗೂ ಈ ೧೮ ವರ್ಷದ ವಯೋಮಿತಿಯನ್ನು ಸೇರಿಸುತ್ತೇವೆ ಅಂತ ಸ್ಪಷ್ಟ ಭರವಸೆ ಕೊಟ್ಟರೆ ಈಗ ತಂದಿರುವ ಬಿಲ್ಲಿಗೆ ತೊಡಕೇನೂ ಬರುವುದಿಲ್ಲ. ಆದುದರಿಂದ ಮಾನ್ಯ ವಿರೋಧಪಕ್ಷದ ಮುಖಂಡರೂ ಮತ್ತು ಮಾನ್ಯ ಧರ್ಮಸಿಂಗ್‌ರವರೂ ಕೂಡ ಈ ಎರಡೂ ಬಿಲ್ಲನ್ನು ಪಾಸು ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ಹೇಳುತ್ತೇನೆ. ಈಗ ಇದನ್ನು ಪಾಸ್ ಮಾಡದೇಹೋದರೆ ನಾಳೆ ದಿವಸ ಈ ಸದನದಲ್ಲಿ ಬರಗಾಲದ ಬಗ್ಗೆ ಮಾತನಾಡಬೇಕಾಗಿದೆ, ಅದು ಬಹಳ ಮುಖ್ಯವಾದ ವಿಚಾರ, ಕಾಲಾವಕಾಶ ಸಿಕ್ಕುವುದಿಲ್ಲ. ಆದುದರಿಂದ ಈವೊತ್ತೇ ಪಾಸ್ ಮಾಡಿದರೆ ಒಳ್ಳೆಯದು.

ಬೇಕಾದರೆ ನಾವು ಸಾಯಂಕಾಲದವರೆಗೆ ಕೂತು ಇದರ ಬಗ್ಗೆ ಚರ್ಚೆ ಮಾಡೋಣ. ಈ ಎರಡು ಬಿಲ್‌ಗಳು ಪಾಸ್ ಆಗದಿಲ್ಲ ಎಂದರೆ ಕಾರ್ಪೊರೇಷನ್ ಮತ್ತು ಮುನಿಸಿಪಲ್ ಚುನಾವಣೆಗಳನ್ನು ಮುಂದೂಡುವುದಕ್ಕೆ ಈ ಸದನವೇ ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದರ ಜವಾಬ್ದಾರಿಯನ್ನು ವಿರೋಧಪಕ್ಷದವರು ಹೊತ್ತುಕೊಳ್ಳಬೇಕಾಗಿ ಬರುತ್ತದೆ.

ಶ್ರೀ ಧರ್ಮಸಿಂಗ್.—ಈ ತರಹ ಮಾನ್ಯ ಸದಸ್ಯರು ಸರ್ಕಾರಕ್ಕೆ ಬೆಂಬಲ ಕೊಡಲಿಕ್ಕೆ ಮಾತನಾಡ ಬಾರದು, ಸರ್ಕಾರದ ಪರವಾಗಿ ಏನು ಉತ್ತರ ಬರುತ್ತದೆಯೋ ಬರಲಿ. ಇದರಲ್ಲಿ ರಾಜಕೀಯ ಭಾಷಣ ಮಾಡುವುದು ಬೇಡ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಮಾತನಾಡುವುದು ರಾಜಕೀಯ.

ಶ್ರೀ ಧರ್ಮಸಿಂಗ್.——ಅದನ್ನೆಲ್ಲಾ ನೀವು ಮಾತನಾಡಬಾರದು,

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗಿ ನೀವು ಮಾತನಾಡಬಾರದು. ನಾನು ಇಲ್ಲಿ ಹೇಳುವುದು, ಇಷ್ಟೆ ಇದರಲ್ಲಿ ರಾಜಕೀಯದ ಪ್ರಶ್ನೆಯೇ ಇಲ್ಲ, ಈ ಚುನಾವಣೆಗಳನ್ನು ಮುಂದೂಡು ವುದಾದರೆ ತಾಲ್ಲೂಕು ಬೋರ್ಡುಗಳ, ಗ್ರಾಮಾಂತರ ಪ್ರದೇಶಗಳ ಚುನಾವಣೆಗಳೂ ಮುಂದೆ ಹೋಗುತ್ತವೆ. ಇದು ಸರಿಯಲ್ಲ. ಆದಕಾರಣ ತಾವು ಇದಕ್ಕೆ ತಿದ್ದುಪಡಿ ತಂದು ನಾಳೆಯೇ ಇದನ್ನು ಸಭೆಯ ಮುಂದೆ ತಂದು ಪಾಸ್ ಮಾಡಿಕೊಳ್ಳಿ. ಆದರೆ ಹಾಗೆಯೇ ತಾವು ಈ ಎರಡು ಬಿಲ್‍ಗಳನ್ನು ಪಾಸ್ ಮಾಡಿ ಕೊಡಿ ಎಂದು ಕೇಳುವುದು ಸರಿಯಾದುದಲ್ಲ, ಇದನ್ನು ತಾವು ಪುನಃ ಪರಿಶೀಲನೆ ಮಾಡ ಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.——ಸನ್ಮಾನ್ಯ ಅಧ್ಯಕ್ಷರೇ, ಇದು ಮೂಲಭೂತವಾಗಿರತಕ್ಕ ಪ್ರಶ್ನೆ ಯೆಂದು ನನಗನ್ನಿಸುತ್ತದೆ. ಮಾನ್ಯ ಮಂತ್ರಿಗಳಾದ ಬೊಮ್ಮಾಯಿಯವರೂ ಕೂಡ ಇದಕ್ಕೆ ಒಪ್ಪುವು ದಿಲ್ಲ ಎಂದು ನಾನು ತಿಳಿಯುತ್ತೇನೆ. ಈ ಬಿಲ್ ಡ್ರಾಫ್ಟ್ ಆಗಿ ಬಂದಿದೆ ಎಂದು ಅದನ್ನು ಇಲ್ಲಿ ಇಂಟರ್ ಡ್ಯೂಸ್ ಮಾಡಿದ ಮಾತ್ರಕ್ಕೆ ಇದು ಸರಿಯಾಗಿದೆ ಎನ್ನುವ ಪಟ್ಟು ಹಿಡಿಯುವುದು ಸರಿಯಲ್ಲ. ಅನೇಕ ಸದಸ್ಯರುಗಳು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರು ಇಲ್ಲಿದ್ದಾರೆ. ಗ್ರಾಮಾಂತರ ಪ್ರದೇಶ ದಲ್ಲಿರತಕ್ಕ ಯುವಕರಿಗೂ ಮತ್ತು ನಗರಪ್ರದೇಶವಲ್ಲಿರತಕ್ಕ ಯುವಕರಿಗೂ ತಾರತಮ್ಯ ಮಾಡಿದರೆ ನಾವು ನಾಳೆಯದಿವಸ ಹಳ್ಳಿಗೆ ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಮತ್ತು ಇದು ಗ್ಲೇರಿಂಗ್ ಮಿಸ್ಟೇಕ್ ಎಂದು ನಾನು ಹೇಳ ಬೇಕಾಗುತ್ತದೆ. ತಾವು ಯಾವಾಗಲೂ ಗ್ರಾಮಾಂತರ ಪ್ರದೇಶದ ಜನರ ಪರವಾಗಿ ವಾದವನ್ನು ಇಲ್ಲಿ ದ್ದಾಗ ಮಾಡಿದ್ದೀರಿ. ಈ ವಾದವನ್ನು ಅಲ್ಲಿಗೆ ಹೋದ ಮೇಲೆ ತಾವು ಏಕೆ ಮಾಡಬಾರದು ? ಗ್ರಾಮಾಂತರ ಪ್ರದೇಶದ ಯುವಕ ಯುವತಿಯರಿಗೆ ವಿಶೇಷವಾದ ಶಕ್ತಿಯನ್ನು ಕೊಡುವ ಈ ಮಸೂದೆ, ಏಕೆ ಜನರಿಂದ ಇಷ್ಟು ದೂರ ಹೋಯಿತು ಎಂದು ನಾನು ಕೇಳಬೇಕಾಗಿದೆ. ತಾವೆಲ್ಲರೂ ಹಳ್ಳಿಯಿಂದ ಬಂದವರು. ತಮ್ಮ ತಾಪತ್ರಯವನ್ನು ನಾವು ಅರ್ಥಮಾಡಿಕೊಳ್ಳಬೇಕು ಅಲ್ಲವೇ ? ತಾವು ಇಲ್ಲಿರುವಾಗ ಏನು ಹೇಳುತ್ತಿದ್ದೀರಿ, ಮಾನ್ಯ ಲಕ್ಷ್ಮೀಸಾಗರ್ ಅವರು ಏನು ಹೇಳುತ್ತಿದ್ದರು ? ನಾವೇನಾದರೂ ಇಂಥ ಮಸೂದೆಯನ್ನು ತಂದಿದ್ದರೆ ಅದನ್ನು ತಾವು ಕ್ಯಾಪ್ಟಿವ್ ಲೆಜಿಸ್ಲೇಷನ್ ಎಂದು ಹೇಳುತ್ತಿದ್ದೀರಿ. ಅದೇನೇ ಇರಲಿ. ಇದರ ಮೂಲಕ ಪಟ್ಟಣದವರಿಗೂ ಮತ್ತು ಗ್ರಾಮಾಂತರ ಪ್ರದೇಶಗಳವರಿಗೂ ತಾರತಮ್ಯ ಮಾಡತಕ್ಕದ್ದು ಸರಿಯಲ್ಲ. ಮಾನ್ಯಸದಸ್ಯರಾದ ನಾರಾಯಣಗೌಡರ ಮನಸ್ಸಿನಲ್ಲಿಯೂ ಬಹಳ ಕಳವಳ ತುಂಬಿಬಿಟ್ಟಿದೆ. ಗ್ರಾಮಾಂತರ ಪ್ರದೇಶದವರಿಗೆ ಚುನಾವಣಾ ವಯಸ್ಸು ೨೧ ರಿಂದ ೧೮ಕ್ಕೆ ಇಳಿಸುವುದು ಬೇಡ ಎಂದು ಹೇಳಿಬಿಡಲಿ ನಾನು ಕೂತುಕೊಂಡುಬಿಡುತ್ತೇನೆ. ಅವರು ಆ ರೀತಿಯಾಗಿ ಹೇಳಲಿಕ್ಕಾಗುವುದಿಲ್ಲ.

ಶ್ರೀ ನಾರಾಯಣ ಗೌಡ.——ನೀವು ನಮ್ಮ ಬಗ್ಗೆ ತಪ್ಪು ತಿಳುವಳಿಕೆಯನ್ನು ಏಕೆ ಇಟ್ಟು ಕೊಂಡಿದ್ದೀರಿ ?

ಶ್ರೀ ಎಂ. ವೀರಪ್ಪಮೊಯಿಲಿ.—ಇಲ್ಲಿರುವ ಪ್ರಶ್ನೆ ಇಷ್ಟೆ, ಗ್ರಾಮಾಂತರ ಪ್ರದೇಶದವರಿಗೂ ಮತ್ತು ನಗರ ಪ್ರದೇಶದವರಿಗೂ ತಾರತಮ್ಯ ಮಾಡಬಾರದು.

ಶ್ರೀ ಎಚ್. ಗಂಗಾಧರನ್.—ಗ್ರಾಮಾಂತರ ಪ್ರದೇಶದವರಿಗೂ ಇದು ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.——ನಾನೂ ಸಹ ನಿಮ್ಮ ಪರವಾಗಿಯೇ ಹೇಳುತ್ತಿದ್ದೇನೆ. ಇದನ್ನು ಯಾರೂ ವಿರೋಧ ಮಾಡುವುದಿಲ್ಲ. ಆದ್ದರಿಂದ ನಾನು ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ಈ ಸದನದಲ್ಲಿ ಏನು ಭಾವನೆ ಇದೆ ಅದನ್ನು ನಾನು ಇಲ್ಲಿ ಸೂಚಿಸಬಯಸುತ್ತೇನೆ ತಾವು ಈ ಕೆಲಸವನ್ನು ಮಾಡದಿದ್ದರೆ ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ನಾವು ಆಸೆ ಆಕಾಂಕ್ಷೆಗಳನ್ನು ಗಮನಕ್ಕೆ ತೆಗೆದು ಕೊಳ್ಳದೆ ಕೆಲಸ ಮಾಡುತ್ತಿದ್ದೇವೆಂದು ಹೇಳುವಂಥ ಆಪಾದನೆಗೆ ನಾವು ನೀವು ಗುರಿಯಾಗಬೇಕಾಗುತ್ತದೆ

ಇದರಲ್ಲಿ ಏನಾದರೂ ತೊಂದರೆ ಇದ್ದರೆ ಅದನ್ನಾದರೂ ತಾವು ಸಭೆಯಲ್ಲಿ ತಿಳಿಸಬೇಕು ನಾವು ಅವರ ಮನೋಭಾವವನ್ನು ಅರ್ಥಮಾಡಿಕೊಳ್ಳದಿದ್ದರೆ ಪ್ರಜಾಪ್ರಭುತ್ವದಲ್ಲಿ ಜನರ ಒಂದು ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳದಿದ್ದರೆ, ಅವರು ಪ್ರಜಾಪ್ರಭುತ್ವದ ವೇದಿಕೆಗಳ ಮೂಲಕ ಅವರು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡುವ ಅವಕಾಶವಾಗುತ್ತದೆ. ಆದ್ದರಿಂದ ಸದನ ಆ ಮಾತ್ರ ಅವರ ಭಾವನೆಗಳನ್ನು ತಾರತಮ್ಯವಾದ ರೀತಿಯಲ್ಲಿ ವ್ಯಕ್ತ ಮಾಡುವುದಕ್ಕೆ ಪ್ರಚೋದನೆ ಕೊಡಬಾರದು, ಇವತ್ತು ನಾವು ಮಾಡತಕ್ಕ ಕೆಲಸ ಅವರ ವ್ಯತಿರಿಕ್ತವಾದ ಭಾವನೆಗಳಿಗೆ ಪ್ರಚೋದನೆ ಕೊಡುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಎಂದು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಆದ್ದರಿಂದ ತಾವು ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ, ನಾವು ವಿರೋಧಪಕ್ಷದಲ್ಲಿದ್ದೇವೆ ಆದ್ದರಿಂದ ಇದನ್ನು ಪ್ರತಿಭಟನೆ ಮಾಡುತ್ತೇವೆಂದು ತಿಳಿದುಕೊಳ್ಳದೆ ಇದನ್ನು ತಾವು ಮತ್ತೊಮ್ಮೆ ಯೋಚಿಸಿಕೊಂಡು ತರಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಈಗಾಗಲೇ ಅನೇಕ ಶತಮಾನಗಳಿಂದ ನಮ್ಮ ದೇಶದ ಆಡಳಿತದ ಒಂದು ಕ್ರಮ ಏನು ಇದೆ ಅದು ಬಹುಶಃ ಒಂದು ರೀತಿಯಲ್ಲಿ ನಡೆದುಕೊಂಡು ಬಂದುಬಿಟ್ಟಿದೆ. ಶ್ರೀಮಂತರು ಬಡವರು, ಪಟ್ಟಣಿಗರು ಮತ್ತು ಹಳ್ಳಿಗರು ಎನ್ನುವಂಥ ಭಾವನೆಗಳು ಇವೆ. ಈ ರೀತಿಯಲ್ಲಿ ಭೇದಭಾವ ಯಾರಲ್ಲಿಯೂ ಬೇರೂರದಂತೆ, ಈ ಭಾವನೆಗಳು ಮುಂದುವರಿಯದಂತೆ ಆಡಳಿತದ ಕ್ರಮ ಬದಲಾವಣೆಯಾಗಬೇಕಾಗಿದೆ ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಇಂಥ ಮಸೂದೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡದೆ, ಜನರಿಗೆ ಈ ಭಾವನೆಗಳಿಂದ ದೂರ ಇರುವಂತೆ ಕ್ರಮ ತೆಗೆದುಕೊಳ್ಳಬೇಕಾದ್ದು ನಿಮ್ಮ ಕರ್ತವ್ಯವಾಗಿದೆ.

ಅದಕ್ಕೆ ಒಂದು ಸಣ್ಣ ಪ್ರಚೋದನೆ ಕಾರಣ ಕೊಟ್ಟರೂ ಕೂಡ ಒಳಿತಾಗುವುದಿಲ್ಲ; ಕೆಡುಕಾಗುತ್ತದೆ ಎನ್ನುವ ಭಾವನೆಯನ್ನು ತಿಳಿದುಕೊಂಡು ದಯಮಾಡಿ ಯಾವ ಪ್ರತಿಷ್ಠೆಗೆ ಒಳಗಾಗಬೇಡಿ. ಈಗಲೇ ತಿದ್ದುಪಡಿ ತರುತ್ತೇವೆಂದು ಹೇಳಿ. ಬಳ್ಳಾರಿ ಘಟನೆಯಲ್ಲಿ ವಾಕೌಟ್ ಮಾಡಿದೆವೇ ಹೊರತಾಗಿ ಇವತ್ತಿನ ವರೆಗೆ ಸಮಾಧಾನವಾಗಿ ಇದ್ದೇವೆ ಈ ಸದನದಲ್ಲಿ ವಿರೋಧಪಕ್ಷದವರು ಆತಂಕ ಮಾಡುತ್ತಾರೆಂಬ ಅಭಿಪ್ರಾಯ ಜನಗಳಲ್ಲಿದೆ ಎನ್ನುವ ಭಾವನೆ ಮೂಡುವುದೂ ಇಲ್ಲ, ತಾವು ನೋಡಿದರೆ ನಿನ್ನೆ ಟ್ಯಾಕ್ಸೇಷನ್ ಬಿಲ್ಲುಗಳು ಐದಾರು ಪಾಸ್ ಆದವು. ಅಷ್ಟು ಸಮಾಧಾನವಾಗಿ ಪಾಸಾದ್ದು ಯಾವಾಗಲೂ ಇರಲಿಲ್ಲ,

SRI A. LAKSHMI SAGAR.—Don't say which is not true. ನಿನ್ನೆ ಒಂದೂವರೆ ಗಂಟೆ ತೆಗೆದುಕೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ,—ನೀವು ಅನೇಕ ಸಾರಿ ಸಣ್ಣ ಸಣ್ಣ ಬಿಲ್ಲುಗಳಿಗೆ ೨–೩ ದಿವಸ ಆತಂಕ, ತೊಂದರೆ ಮಾಡಿದ್ದು ಇದೆ. ಕೆಲವು ಸಾರಿ ಬಿಟ್ಟೀದ್ದೀರಿ. ನಾವೂ ಅನೇಕಸಾರಿ ಸಹಕಾರ ಕೊಟ್ಟಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್,—ಸುಮ್ಮನೆ ಇಲ್ಲದಿರುವುದನ್ನು ಏಕೆ ಹೇಳುತ್ತೀರಿ. What is point in issue ?

ಶ್ರೀ ಎಂ. ವೀರಪ್ಪ ಮೊಯಿಲಿ.—ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನೀವು ಬೇಕಾದಷ್ಟು ಸಹಕಾರ ಕೊಟ್ಟಿದ್ದೀರಿ, ಕೊಡಲಿಲ್ಲ ಎಂದು ಹೇಳಲಿಲ್ಲ. ಇತ್ತೀಚೆಗೆ ಸದನದಲ್ಲಿ ನಾವೂ ಸಹಕಾರ ಕೊಟ್ಟಿದ್ದೇವೆ, ಇನ್ನೂ ಕೊಡುತ್ತೇವೆ, ಬಿಲ್ಲುಗಳನ್ನು ಪಾಸ್‌ಮಾಡಲಿಕ್ಕೆ, ಅಡ್ಡಿ ಆತಂಕ ಒದಗಿಸಲಿಕ್ಕೆ ನಾವು ತಯಾರಿಲ್ಲ. ಇವತ್ತು ಆ ಒಂದು ಭಾವನೆ ನಮ್ಮಲ್ಲಿ ಇಲ್ಲ. ಆದುದರಿಂದ ದಯಮಾಡಿ ಪೇಟೆಯಲ್ಲಿದ್ದವರು ಔದಾರ್ಯ ತೋರಿಸಬೇಕು. You must first initiate. M. S. Krishnan. ಪಟ್ಟಣಿಗರು ತಾವೇ ಲೀಡ್ ತೆಗೆದುಕೊಂಡರೆ ಒಳ್ಳೆಯದು, ಔದಾರ್ಯ ತೋರಿಸುವುದಕ್ಕೆ ಮುಂದೆ ಬರಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಆಗಲೇ ಹೇಳಿದೆ ಇಲ್ಲಿ ೧೮ ವರ್ಷ ಮಾಡಿರುವುದು ಸರಿಯಲ್ಲ ೧೮ ವರ್ಷ ಎನ್ನುವುದು ಎಲ್ಲರಿಗೂ ಒಂದೇರೀತಿಯಾಗಿ ಮಾಡಬೇಕೆ ವಿನಃ ಗ್ರಾಮಕ್ಕೆ ಬೇರೆ, ನಗರಸಭೆಗೆ ಬೇರೆ ಮಾಡಬಾರದು. ಇದರ ಬಗ್ಗೆ ತಿದ್ದುಪಡಿ ತರುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ಎಂದು ಹೇಳಿದೆ,

ಶ್ರೀ ಎಂ. ವೀರಪ್ಪ ಮೊಯಿಲಿ.—ಆಶ್ವಾಸನೆ ಕೊಟ್ಟರೆ ಸಾಲದು.

ಶ್ರೀ ಎಸ್. ಆರ್, ಬೊಮ್ಮಾಯಿ.—ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ೧೮ ವರ್ಷ ವಯೋಮಿತಿ ಇರತಕ್ಕವರು ಓಟ್ ಮಾಡಬಹುದು ಎನ್ನತಕ್ಕಂಥ ಪ್ರಗತಿಪರವಾದಂಥ ಹೆಜ್ಜೆಯನ್ನು ನಾವು ಇಟ್ಟಿದ್ದೇವೆ. ಅಲ್ಲದೆ ಮಹಿಳೆಯರಿಗೆ ರಿಸರ್ವೇಷನ್ ಮಾಡತಕ್ಕಂಥ ಪ್ರಗತಿಪರವಾದ ಒಂದು ಹೆಜ್ಜೆಯನ್ನು ಇಟ್ಟಿದ್ದೇವೆ. ಇದನ್ನು ಇಡೀ ಭಾರತದೇಶದಲ್ಲಿ ಯಾವ ರಾಜ್ಯವೂ ಮಾಡಲಿಲ್ಲ ಕರ್ನಾಟಕ ರಾಜ್ಯದಲ್ಲಿ ಈ ಸರ್ಕಾರ ಮಾಡಿದೆ. ಇನ್ನೊಂದು ವಿಚಾರವೇನೆಂದರೆ, ನಾವು ಕೊಟ್ಟ ಮಾತಿನಂತೆ ನಗರ ಸಭೆಗಳಿಗೆ ಚುನಾವಣೆ ನಡೆಸಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ, ಮಾತು ಕೊಟ್ಟು ಮುಂದಕ್ಕೆ ಹಾಕುವಂಥ ಅಭ್ಯಾಸಬೇಡ. ಚುನಾವಣೆ ಆಗಲೇಬೇಕು ಎನ್ನುವುದನ್ನು ಒಪ್ಪುತ್ತೇನೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯುವಕರಿಗೂ ಮತ್ತು ನಗರಸಭೆ ಪ್ರದೇಶದಲ್ಲಿರತಕ್ಕ ಯುವಕರಿಗೂ ತಾರತಮ್ಯ ಆಗಕೂಡದು ಎನ್ನುವುದನ್ನು ನಾನು ಒಪ್ಪುತ್ತೇನೆ. ಆ ಕಡೆಯುವರೂ, ಈ ಕಡೆಯವರೂ ಗ್ರಾಮಾಂತರ ಪ್ರದೇಶಗಳಿಂದ ಬಂದವರು ಹೆಚ್ಚು ಜನ ಇದ್ದಾರೆ. ಯುವಕರಲ್ಲಿ ಭೇದಭಾವ ತರತಕ್ಕದ್ದು ಎಲ್ಲೂ ಇಲ್ಲ ಸರ್ಕಾರಕ್ಕೆ ತೊಂದರೆ ಏನಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಚುನಾವಣೆಯನ್ನು ಮುಂದೆ ಹಾಕಕೂಡದು ಎನ್ನುವುದು ಈ ಸರ್ಕಾರದ ನಿರ್ಣಯ. ಈ ಸಭೆಯಲ್ಲಿ ಆಶ್ವಾಸನೆ ಕೊಟ್ಟು ಮಾತು ಕೊಟ್ಟು ಹತ್ತು ಸಲ ಮುಂದೆ ಹಾಕತಕ್ಕಂಥಾದ್ದು ನಮ್ಮ ವಿಚಾರವಲ್ಲ. ಚುನಾವಣಾಧಿಕಾರಿಗಳನ್ನು ಕರೆ ಸಿದ್ದೇವೆ ಚರ್ಚೆ ಮಾಡಿದ್ದೇವೆ; ನಾವು ಚರ್ಚೆ ಮಾಡಿದಾಗ ನಗರಸಭೆಗಳಲ್ಲಿ ಓಟರ್ಸ್ ಲಿಸ್ಟ್‌ನಲ್ಲಿ ಸೇರಿಸಿ ಚುನಾವಣೆಯನ್ನು ಜೂನ್ ಒಳಗೆ ಮಾಡತಕ್ಕಂಥಾದ್ದು ಸಾಧ್ಯವಿದೆ ಎನ್ನುವ ಅಭಿಪ್ರಾಯ ಬಂತು. ಏಕೆಂದರೆ, ನಗರಸಭೆಗಳಿಗೆ ಸಿಬ್ಬಂದಿ ಇದೆ, ಈ ಸಿಬ್ಬಂದಿ ಮುಖಾಂತರ ಎನ್ಯುಮರೇಷನ್ ಮಾಡತಕ್ಕ ಕೆಲಸ ಮಾಡಿಕೊಡಲಿಕ್ಕೆ ಸಾಧ್ಯವಿದೆ ಎನ್ನುವ ಅಭಿಪ್ರಾಯ ಬಂತು. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿಗಳಿವೆ, ಇದರಲ್ಲಿ ಕೆಲಸ ಮಾಡತಕ್ಕವರು ಹೆಚ್ಚಾಗಿ ಶಾಲಾ ಶಿಕ್ಷಕರು, ಪರೀಕ್ಷೆ ಮುಗಿಯುವವರೆಗೆ ಅವರ ಸೇವೆ ಚುನಾವಣಾ ಕಮಿಷನ್‌ಗೆ ಸಿಕ್ಕುವುದಿಲ್ಲ, ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುವುದಕ್ಕಾಗುವುದಿಲ್ಲ ಎನ್ನುವ ಅಭಿಪ್ರಾಯ ಬಂತು. ಜೂನ್ ತಿಂಗಳೊಳಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ೧೮ ವರ್ಷ ಆದವರನ್ನು ಸೇರಿಸಿ ಓಟರ್ ಲಿಸ್ಟ್ ರಿವೈಸ್ ಮಾಡಲಿಕ್ಕೆ ಸಾಧ್ಯತೆ ಇಲ್ಲ, ಸೇರಿಸಬೇಕಾದರೆ ಚುನಾವಣೆಯನ್ನು ಮುಂದಕ್ಕೆ ಹಾಕುವಂಥ ಸಂದರ್ಭ ಬರಬಹುದು ಎನ್ನುವ ಅಭಿಪ್ರಾಯ ಬಂತು. ಆದ್ದರಿಂದ ತಾಲ್ಲೂಕು ಬೋರ್ಡ್ ಚುನಾವಣೆಯಾಗಲಿ, ಪಂಚಾಯಂತಿ ಚುನಾವಣೆಯನ್ನಾಗಲಿ ಮುಂದಕ್ಕೆ ಹಾಕಕೂಡದು ಎನ್ನುವ ದೃಷ್ಟಿಯಿಂದ ಈ ನಿರ್ಣಯ ಮಾಡಿದ್ದೇವೆ. ನಿಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇವೆ. ತಮ್ಮಲ್ಲಿ ನಾನು ಮನವಿಮಾಡಿಕೊಳ್ಳುತ್ತೇನೆ ಈ ತಿದ್ದುಪಡಿಗೆ ನಮ್ಮ ವಿರೋಧ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ೧೮ ವರ್ಷ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಚುನಾವಣೆಗಳನ್ನು ಮುಂದೆ ಹಾಕತಕ್ಕ ಕೆಲಸ ಮಾಡಬಾರದು ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಆ ರೀತಿ ಈ ಸಭೆಯ ಅಭಿಪ್ರಾಯವಿದ್ದರೆ ಚುನಾವಣೆಗಳು ಮುಂದೆ ಹೋಗಲಿ, ಮುಂದೆ ಹೋದರೆ ಅಡ್ಡಿಯಿಲ್ಲ ಎನ್ನುವುದಾದರೆ

(ಗೊಂದಲ)

ಶ್ರೀ ಬಿ. ಬೈರಪ್ಪಾಜಿ.—ಎನ್ಯುಮರೇಷನ್ ಮಾಡಬಹುದು, ಏನು ಕಷ್ಟ ಇದೆ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ನೀವು ಮೇ, ನವೆಂಬರ್, ಮೇ ಎಂದು ಮುಂದಕ್ಕೆ ಹಾಕುತ್ತಾ ಇದ್ದೀರಿ, ಅಂತಹವರಿಗೆ ಇವತ್ತಿನದಿವಸ ಚುನಾವಣೆ ಬಗ್ಗೆ ಮಾತನಾಡುವ ರೈಟ್ಸ್ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಧರ್ಮಸಿಂಗರು ಈ ಕಡೆ ಇದ್ದಾಗ ಎಷ್ಟು ಸಮಾಧಾನ, ಶಾಂತಿಯಿಂದ ಇದ್ದರು ನಾವು ಒತ್ತಾಯ ಮಾಡಿದಾಗ ಒಂದೇ ಒಂದು ಮಾತನ್ನು ಸಾವಧಾನವಾಗಿ ಹೇಳುತ್ತಿದ್ದರು. ಅಲ್ಲಿ ಹೋದಮೇಲೆ ಅದು ಬದಲಾಗಿಬಿಟ್ಟಿದೆ. ಗ್ರಾಮಾಂತರಪ್ರದೇಶಗಳಲ್ಲೂ೧೮ ವರ್ಷ ವಯೋಮಿತಿ ಇರತಕ್ಕವರಿಗೆ ಅವಕಾಶಮಾಡಿಕೊಡಬೇಕು ಎನ್ನುವುದನ್ನು ಸರ್ಕಾರ ಒಪ್ಪಿಕೊಂಡಿದೆ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಈ ನೀತಿಯನ್ನು ಜಾರಿಗೆ ಕೊಡಲಿಕ್ಕೆ ತಿದ್ದುಪಡಿಯನ್ನು ಸರ್ಕಾರ ಇದರಲ್ಲಿ ಸೇರಿಸಿಲ್ಲ; ನಾವು ಸೇರಿಸುವುದಕ್ಕೆ ಸಿದ್ಧರಿದ್ದೇವೆ. ಎನುಮರೇಷನ್ ಮಾಡುವುದರಲ್ಲಿ ತಡವಾದರೆ ಚುನಾವಣೆ ಆಗಲಿಕ್ಕಿಲ್ಲ ಎನ್ನುವ ಆತಂಕ ನಮ್ಮಲ್ಲಿದೆ. ಚುನಾವಣೆ ಮಾಡಲೇಬೇಕು ನ್ನುವ ಮನೋಭಾವನೆ ಇದ್ದಾಗ ಈ ಕಾರಣದಿಂದ ಚುನಾವಣೆ ಮುಂದೆ ಹೋಗಬಾರದು ಎನ್ನುವ ಭಾವನೆಯಿಂದ ಈ ತಿದ್ದುಪಡಿಯನ್ನು ತಂದಿಲ್ಲ. ಅಲ್ಲಿ ಇದನ್ನು ಜಾರಿಗೆ ತರಬೇಕಾದರೆ ಪ್ರತಿಯೊಂದು ಹಳ್ಳಿಯಲ್ಲೂ ಎನ್ಯುಮರೇಷನ್ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ತಾಲ್ಲೂಕುಬೋರ್ಡ್, ಪಂಚಾಯಿತಿಗಳಿಗೆ ಚುನಾವಣೆ ಮಾಡುತ್ತಿದ್ದೀರಿ, ಅದಕ್ಕೆ ೨೧ ವರ್ಷ ವಯೋಮಿತಿ ಇಟ್ಟು, ನಗರಗಳಲ್ಲಿ ಕಾರ್ಪೊರೇಷನ್ ಚುನಾವಣೆಯಲ್ಲಿ ೧೮ ವರ್ಷ ವಯೋಮಿತಿ ಇಟ್ಟು ಚುನಾವಣೆ ಮಾಡಿದರೆ ಏನಾಗುತ್ತದೆ. ಅದು ಅನ್ಯಾಯವಾಗುತ್ತದೆ. ಒಂದು ಕಡೆ ತಾಲ್ಲೂಕ್‌ಬೋರ್ಡ್ ಚುನಾವಣೆ ಆಗುತ್ತದೆ, ಇನ್ನೊಂದು ಕಡೆ ಕಾರ್ಪೋರೇಷನ್ ಚುನಾವಣೆ ಆಗುತ್ತದೆ. ನಗರಗಳಲ್ಲಿ ೧೮ ವರ್ಷದ ಯುವಕ ಯುವತಿಯರು ಓಟ್ ಮಾಡುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ೨೧ ವರ್ಷದ ಯುವಕ ಯುವಕ ಯುವತಿಯರು ಓಟ್ ಮಾಡುತ್ತಾರೆ. ಈ ತಾರತಮ್ಯ ಆಗಬಾರದು ಎನ್ನತಕ್ಕ ದೃಷ್ಟಿ ಇದೆಯೇತಾನೆ. ನಿಮಗೆ ಸಮಯ ಸಾಕಾಗದೇ ಹೋದರೆ ಆರ್ಡಿನೆನ್ಸ್ ತನ್ನಿ. ಹೌಸ್ ಅಡ್ಜರ್ನ್ ಆದಮೇಲೆ ೨-೩-೪ ನೇ ತಾರೀಖು ಒಳಗೆ ಆರ್ಡಿನೆನ್ಸ್ ತರಬಹುದು.

4 P. M.

ಶ್ರೀಮಾನ್ ಚಂದ್ರಶೇಖರ್‌ರವರು ಇದನ್ನು ಇಂಟರ್‌ಡ್ಯೂಜ್ ಮಾಡುವುದಕ್ಕೆ ಮೊದಲೇ ರೈಜ್ ಮಾಡಿ ಹೇಳಿದ್ದು ಏತಕ್ಕೆಂದರೆ ಇದರಿಂದ ತಾರತಮ್ಯವಾಗುತ್ತದೆ. ಆದುದರಿಂದ ಈಗಿರುವ ಹಾಗೆ ಬಿಲ್‌ನ್ನು ಪಾಸ್ ಮಾಡಿಕೊಂಡು ಹೋಗಿ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತ ಚುನಾವಣೆಗಳಲ್ಲಿ ೨೧ ವರ್ಷ ಆದವರಿಗೆ ಮಾತ್ರ ಓಟು ಮಾಡುವ ಹಾಗೆ ಮಾಡಿ ೧೮ ವರ್ಷ ವಯಸ್ಸಿನವರಿಗೆ ಓಟು ಮಾಡುವ ಅವಕಾಶವಿಲ್ಲದ ಹಾಗೆ ಮಾಡುತ್ತಿದ್ದೀರಿ ಇದರಿಂದ ಅವರಿಗೆಲ್ಲಾ ಅನ್ಯಾಯ ಮಾಡಿದ ಹಾಗಾಗುವುದಿಲ್ಲವೇ ಎನ್ನುವ ಭಾವನೆ ಇದೆ ಆದುದರಿಂದ ಇದರ ಬಗ್ಗೆ ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಈಗಲೇ ಅಮೆಂಡ್‌ಮೆಂಟ್ ತರುವ ಹಾಗಿದ್ದರೆ ತೆಗೆದುಕೊಂಡು ಬನ್ನಿ.

ಶ್ರೀ ಧರ್ಮಸಿಂಗ್.— ಎನ್ಯೂಮರೇಟ್ ಮಾಡತಕ್ಕವರು ಟೀಚರ್ಸ್ ಆದುದರಿಂದ ತಾವು ಮನಸ್ಸು ಮಾಡಿದರೆ ೨ ತಿಂಗಳಲ್ಲಿ ಈ ಕೆಲಸವನ್ನು ಮಾಡಿಸಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡಿದ್ದೇವೆ, ೧೮ ವರ್ಷ ವಯಸ್ಸಿನವರಿಗೂ ಓಟು ಮಾಡುವ ಬಗ್ಗೆ ತಿದ್ದುಪಡಿ ತರಬೇಕು ಎನ್ನುವ ಬಗ್ಗೆ ಸರ್ಕಾರದವರೂ ಕೂಡ ಒಪ್ಪಿಕೊಂಡಿದ್ದಾರೆ ಅದರ ಬಗ್ಗೆ ಅಮೆಂಡ್‌ಮೆಂಟ್ ಮೂವ್ ಮಾಡುವ ಬಗ್ಗೆ ಮಂತ್ರಿಗಳು ಹೇಳುತ್ತಾರೆ, ಅದನ್ನೂ ನಾವು ಸಹ ಒಪ್ಪಿಕೊಂಡಿದ್ದೇವೆ

ಶ್ರೀ ಅಬ್ದುಲ್ ನಜೀರ್ ಸಾಬ್.— ಸಭಾಧ್ಯಕ್ಷರೇ ಸಮಗ್ರವಾದ ಶಾಸನ ತರಬೇಕು ಎನ್ನುವ ಒಂದು ಆಧಾರದ ಮೇಲೆ ೧೮ ವರ್ಷ ವಯಸ್ಸಿನ ವಯೋಮಿತಿಯನ್ನು ನಿಗದಿ ಮಾಡುತ್ತೇವೆಂದು ಹೇಳಿ ಒಪ್ಪಿಕೊಂಡಿದ್ದೇವೆ. ಸರ್ಕಾರದ ಈ ನೀತಿಯ ಪ್ರಕಾರವಾಗಿ ಗ್ರಾಮಾಂತರ ಮತ್ತು ನಗರ ಪ್ರದೇಶಗಳಲ್ಲೂ ಸಹ ೧೮ ವರ್ಷ ವಯಸ್ಸಿನವರು ಸಹ ಓಟು ಮಾಡಬಹುದಾಗಿದೆ ಆದುದರಿಂದ ಇದರ ಬಗ್ಗೆ ಚರ್ಚೆ ಮುಂದುವರಿಯಲಿದ್ದು ಅನಂತರ ಮಾನ್ಯ ಮಂತ್ರಿಗಳವರೇ ತಿದ್ದುಪಡಿಯನ್ನು ತರುತ್ತಾರೆ ಅದನ್ನು ನಾವು ಎಲ್ಲರೂ ಒಪ್ಪಿಕೊಳ್ಳೋಣ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಬೊಮ್ಮಾಯಿಯವರು ಒಂದು ಮಾತನ್ನು ಹೇಳಿದರು ಜಿಲ್ಲಾ ಪರಿಷತ್ ಮಸೂದೆ ತರುತ್ತೇವೆಂದು ಹೇಳಿದರು. ಆದರೆ ಇದರ ಬಗ್ಗೆ ಈಗ ಅಮೆಂಡ್‌ಮೆಂಟ್ ತರುತ್ತಾರೋ ಇಲ್ಲವೋ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಅಮೆಂಡ್‌ಮೆಂಟನ್ನು ನಾವೇ ಮೂವ್ ಮಾಡುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ.— ನಾಳೆ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗುತ್ತದೆ ಆದುದರಿಂದ ಈ ಸಭೆಯನ್ನು ಇನ್ನೂ ಎರಡು ಮೂರು ದಿವಸಗಳ ಕಾಲ ಮುಂದಕ್ಕೆ ಹಾಕುತ್ತೀರಾ ?

(ಗೊಂದಲ)

ಚೇರ್ಮನ್.— ಸರ್ಕಾರದವರು ಅಮೆಂಡ್‌ಮೆಂಟ್ ತರಲು ಒಪ್ಪಿಕೊಂಡಿದ್ದಾರೆ ಆದುದರಿಂದ ದಯವಿಟ್ಟು ಇಲ್ಲಿ ಧರಣಿ ಕೂತಿರತಕ್ಕವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೇ, ಸರ್ಕಾರದವರೇ ಅಮೆಂಡ್‌ಮೆಂಟನ್ನು ತರುತ್ತೇವೆಂದು ಹೇಳಿದ್ದಾರೆ ಇದನ್ನು ಕೇಳಿ ಬಹಳ ಸಂತೋಷವಾಯಿತು. ಅದನ್ನು ಯಾವಾಗ ತರುತ್ತಾರೆ ಎನ್ನುವ ಮಾತನ್ನು ಸ್ವಲ್ಪ ದಯವಿಟ್ಟು ಕ್ಲಿಯರ್ ಆಗಿ ಹೇಳಿದರೆ ಒಳ್ಳೆಯದು ಏತಕ್ಕೆಂದರೆ ಅದು ರೆಕಾರ್ಡ್‌ಗೆ ಹೋಗಿರಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಮಸೂದೆ ಆ ಅಮೆಂಡ್ ಜೊತೆಗೆ ಪಾಸ್ ಆಗುತ್ತದೆ.

ಶ್ರೀ ಎಸ್, ಬಂಗಾರಪ್ಪ.—ಇವತ್ತೇ ತೆಗೆದುಕೊಳ್ಳುತ್ತೇವೆಂದು ಹೇಳುವುದಾದರೆ ಅದು ರೆಕಾರ್ಡ್‌ಗೆ ಹೋಗಿರಲಿ,

ಶ್ರೀ ಎಂ. ಚಂದ್ರಶೇಖರ್ (ಪೌರಾಡಳಿತ ಮಂತ್ರಿಗಳು)—ಅಧ್ಯಕ್ಷರೇ ಈ ಕೆಳಕಂಡ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

''ಕರ್ನಾಟಕ ಪೌರ ನಿಗಮಂಗಳ (ತಿದ್ದುಪಡಿ) ೧೯೮೩ ವಿಧೇಯಕ ಪರಿಶೀಲಿಸುವುದು''

(ಪ್ರಸ್ತಾವವನ್ನು ಸಭೆಯ ಮುಂದಿಡಲಾಗುವುದು)

ಶ್ರೀ ಎಂ. ಚಂದ್ರಶೇಖರ್.— ಅಧ್ಯಕ್ಷರೇ ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ ಈ ಒಂದು ವಿಧೇಯಕವೇನಿದೆ ಇದು ಒಂದು ಪ್ರಗತಿದಾಯಕವಾದ ವಿಧೇಯಕವಾಗಿದೆ. ಕ್ರಾಂತಿಕಾರಕವಾದ ವಿಧೇಯಕವಾಗಿದೆ ಇದರಲ್ಲಿ ಏನೇನು ಹೇಳಿದ್ದೇವೆಂದರೆ, ಮೊದಲನೆಯದಾಗಿ ಹೆಣ್ಣು ಮಕ್ಕಳಿಗೆ ಶೇಕಡ ೨೦ರಷ್ಟು ಪ್ರಾತಿನಿಧ್ಯ ಕೊಡಬೇಕಾಗಿರುತ್ತದೆ. ತಮಗೆಲ್ಲಾ ಗೊತ್ತಿರುವ ಹಾಗೆ ಅನೇಕ ಪುರಸಭೆಗಳಲ್ಲಿ ಒಬ್ಬರೋ ಇಬ್ಬರೋ ಹೆಣ್ಣು ಮಕ್ಕಳು ಇರುತ್ತಾರೆ. ಶೇಕಡ ೨೦ ಎಂದರೆ ಹೆಚ್ಚಿನ ಪ್ರಾತಿನಿಧ್ಯ ಕೂಡ ಹಾಗಾಗುತ್ತದೆ. ಈಗಾಗಲೇ ನಮ್ಮ ಇತರ ನಾಯಕರು ಹೇಳಿದ ಹಾಗೆ ಇದರ ಬಗ್ಗೆ ಯಾವುದೇ ರಾಜ್ಯದವರು ಯೋಚನೆ ಮಾಡಿರಲಿಲ್ಲ. ಕಾಂಗ್ರೆಸ್ ಐ ಸರ್ಕಾರ ಸಹ ಇದರ ಬಗ್ಗೆ ಯೋಚನೆ ಮಾಡಿರಲಿಲ್ಲ. ಇದು ಮೊದಲನೆಯದು. ಎರಡನೆಯದಾಗಿ ಈಗಾಗಲೇ ನಾವು ಹೇಳಿದ ಹಾಗೆ ಯುವಕರು ಹೆಚ್ಚಿನ ಶ್ರದ್ಧೆ ವಹಿಸಿ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಅಂದರೆ ರಾಜಕೀಯ ಕ್ಷೇತ್ರವಾಗಲೀ ಸಾಮಾಜಿಕ ಕ್ಷೇತ್ರವಾಗಲಿ ಇನ್ನು ಯಾವುದೇ ಕ್ಷೇತ್ರವಾಗಲೀ ಅವರೆಲ್ಲರೂ ಹೆಚ್ಚಿನ ಪಾತ್ರ ವಹಿಸುತ್ತಿದ್ದಾರೆ ಆದುದರಿಂದ ಈ ರಾಜಕೀಯ ಕ್ಷೇತ್ರದಲ್ಲೂ ಸಹ ಅವರು ಚಿಕ್ಕವಯಸ್ಸಿನಲ್ಲಿಯೇ ಹೆಚ್ಚಿನ ಜವಾಬ್ದಾರಿಯನ್ನು ಹೊರುವಂತಾಗಲೀ ಇದರಿಂದ ಅವರು ಮೇಲ್ಮಟ್ಟಕ್ಕೆ ಬರುವಷ್ಟು ಹೊತ್ತಿಗೆ ಒಳ್ಳೆಯ ಅನುಭವ ಪಡೆದಿರುತ್ತಾರೆಂದು ಮಾಡಿದ್ದೇವೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಈ ಒಂದು ಉದ್ದೇಶದಿಂದ ವಯಸ್ಸನ್ನು ೨೧ ರಿಂದ ೧೮ ವರ್ಷಕ್ಕೆ ಇಳಿಸಿದ್ದೇವೆ. ಇದರಲ್ಲಿ ಇನ್ನೊಂದು ಮುಖ್ಯವಾದದ್ದು ಏನೆಂದರೆ ಎಲೆಕ್ಟೋರಲ್ ರೋಲ್. ೧೯೭೧ರ ಜನಗಣತಿಯ ಪ್ರಕಾರವಾಗಿ ರಾಜ್ಯಾಂಗದತ್ತವಾಗಿ ಕಾದಿರಿಸಿರತಕ್ಕ ಸ್ಥಾನಗಳನ್ನು ನಾವು ಈಗಾಗಲೇ ಅಧಿಕೃತವಾಗಿ ಪ್ರಕಟಣೆ ಆಗಿರುವ ಸೆನ್ಸಸ್ ಪ್ರಕಾರವಾಗಿ ಎಸ್.ಸಿ./ಎಸ್.ಟಿ. ಯವರಿಗೆ ಸ್ಥಾನಗಳನ್ನು ನಿಗದಿ ಮಾಡಬೇಕಾಗಿದೆ. ೧೯೭೧ರ ಸೆನ್ಸಸ್ ತೆಗೆದುಕೊಂಡರೆ ಅದಕ್ಕೆ ಒಂದು ಅಮೆಂಡ್‌ಮೆಂಟ್ ಬೇಕಾಗುತ್ತದೆ. ಅನಂತರ ಎಲೆಕ್ಟೋರಲ್ ರೋಲನ್ನು ೨೧ ರಿಂದ ೧೮ ವರ್ಷ ವಯಸ್ಸಿಗೆ ಇಳಿಸಿರುವುದರಿಂದ ಅವರ ಪಟ್ಟಿಯನ್ನು ಸಹ ಹೊಸದಾಗಿ ಲಗತ್ತಿಸಲಾಗುತ್ತದೆ. ಆ ರೀತಿಯಾಗಿ ಹೊಸದಾಗಿ ಒಂದು ಪಟ್ಟಿಯನ್ನು ಸೇರಿಸುವುದಕ್ಕೆ ಇಲ್ಲಿ ವಿಧೇಯಕದಲ್ಲಿ ಅವಕಾಶ ಮಾಡಿದ್ದೇವೆ. ಈ ಮೂರು ಮುಖ್ಯ ಅಂಶಗಳುಳ್ಳ ಒಂದು ವಿಧೇಯಕ ಇದು ಈ ಒಂದು ವಿಧೇಯಕದಿಂದ ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ಹೆಚ್ಚಿನ ವೆಚ್ಚವಾಗುವುದಿಲ್ಲ. ಇನ್ನೊಂದು ಮುಖ್ಯ ಉದ್ದೇಶವೇನೆಂದರೆ ಜೂನ್ ತಿಂಗಳಿನಲ್ಲಿ ಚುನಾವಣೆ ಮಾಡಬೇಕು ಎಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಆದುದರಿಂದ ಯಾವುದೇ ತಂಟೆ ತಕರಾರುಗಳು ಆಗದಿದ್ದ ಪಕ್ಷದಲ್ಲಿ ಎಲ್ಲಾ ಕಡೆಗಳಲ್ಲೂ ಸಹ ಜೂನ್ ತಿಂಗಳಲ್ಲಿ ಮಾಡಿಯೇ ಮಾಡುತ್ತೇವೆ. ಆದುದರಿಂದ ಈ ವಿಧೇಯಕವನ್ನು ತಾವು ಎಲ್ಲರೂ ಒಪ್ಪಿ ಇದಕ್ಕೆ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೆ, ಈ ಸದನದ ಮುಂದೆ ಮಾನ್ಯ ಮಂತ್ರಿಗಳು ಏನು ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ ಇದರ ಬಗ್ಗೆ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ ಏಕೆಂದರೆ ಬಹುಶ ಗಡಿಬಿಡಿಯಲ್ಲಿ ತಪ್ಪು ಮಾಡಿದ್ದಾರೆಂದು ಕಾಣುತ್ತದೆ. ತಾವು ಯಾವ ಉದ್ದೇಶದಿಂದ ತಂದಿದ್ದೀರಿ ಅದು ಸಫಲವಾಗುವುದಿಲ್ಲ. ಪುರಸಭೆಗಳಲ್ಲಿ ಹೆಣ್ಣು ಮಕ್ಕಳಿಗೆ ೨೦ ಪರ್ಸೆಂಟ್ ಪ್ರಾತಿನಿಧ್ಯ ಕೊಡುವುದು, ಪಟ್ಟಣ ಪ್ರದೇಶಗಳಲ್ಲಿರತಕ್ಕ ಯುವಕರ ಮತದಾನದ ವಯಸ್ಸನ್ನು ೧೮ ವರ್ಷಕ್ಕೆ ಇಳಿಸುವುದು, ಹಳ್ಳಿಗಾಡು ಪ್ರದೇಶಗಳಲ್ಲಿರತಕ್ಕ ಯುವಕರಿಗೆ ಪ್ರಾತಿನಿಧ್ಯ ಕೊಡುವುದು – ಇವೆಲ್ಲವನ್ನು ತಾವು ಒಪ್ಪಿದ್ದೀರಿ. ಅದಕ್ಕೋಸ್ಕರ ನಾವು ಕೂಡ ಧರಣಿ ಮಾಡಿದೆವು ; ಸರ್ಕಾರಕ್ಕೆ ವಿರೋಧ ಮಾಡಬೇಕೆಂದು ಅಲ್ಲ. ಇವರು ಹೇಳಿರತಕ್ಕಂಥ ಮಾತು ಏನಂದರೆ ಹಳ್ಳಿಯಲ್ಲಿರತಕ್ಕ ಯುವಕರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುತ್ತೇವೆ ಎಂದು ಇವರು ತಿದ್ದುಪಡಿಯನ್ನು ತರುವಾಗ ವಿಚಾರ ಮಾಡದೆ ತಂದರೋ ಏನೋ ಎಂದು ಭಾಸವಾಗುತ್ತದೆ. ಇದರಿಂದ ನಿಜವಾಗಿ ಬಹಳ ಖೋತಾ ಆಗುತ್ತದೆ. ತಿದ್ದುಪಡಿಯನ್ನು ತರತಕ್ಕ ಸಂದರ್ಭದಲ್ಲಿ ವಿಚಾರ ಮಾಡಬೇಕಾಗಿತ್ತು. ಇದರಲ್ಲಿ ಮುಖ್ಯವಾಗಿ ೧೯೭೧ನೇ ಇಸವಿಯ ಸೆನ್ಸಸ್ ಪ್ರಕಾರ ಮತದಾರರ ಪಟ್ಟಿಯನ್ನು ತಯಾರು ಮಾಡಿರ ತಕ್ಕದ್ದು.

ಶ್ರೀ ಎಂ. ಚಂದ್ರಶೇಖರ್.—ಅದು ಮತದಾರರಪಟ್ಟಿ ಅಲ್ಲ. ಜನವರಿ ೧೯೮೩ರಲ್ಲಿ ನಡೆದ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಪ್ರತಿಯೊಬ್ಬ ಮತದಾರರು ಇದ್ದಾರೆ.

ಶ್ರೀ ಬಿ, ಬಿ. ಚಿಮ್ಮನಕಟ್ಟಿ.—ಅದು ೧೯೮೧ರ ಸೆನ್ಸಸ್ ಪ್ರಕಾರ ಬರಬೇಕು.

ಶ್ರೀ ಎಂ. ಚಂದ್ರಶೇಖರ್.—ರಾಜ್ಯಾಂಗಬದ್ಧವಾಗಿ ಎಸ್.ಸಿ. ಎಸ್.ಟಿ.ಗೆ ಕಾಯ್ದಿರಿಸಬೇಕಲ್ಲ ಅದಕ್ಕೆ ಮಾತ್ರ ಸೆನ್ಸಸ್ ತೆಗೆದುಕೊಂಡಿರುವುದು. ಮತದಾರರ ಪಟ್ಟಿ ಇತ್ತೀಚೆಗೆ ಅಂದರೆ ಜನವರಿ ೧೯೮೩ರ ಚುನಾವಣೆಯ ಸಲುವಾಗಿ ತಯಾರಿಸಿರತಕ್ಕದ್ದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—೧೯೮೧ರಲ್ಲಿ ಏನು ಸೆನ್ಸಸ್ ಆಗಿದೆ ಅದರ ಪ್ರಕಾರ ಮತದಾರರ ಪಟ್ಟಿಯನ್ನು ತಯಾರು ಮಾಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಅದನ್ನು ನಾವು ಅಧಿಕೃತವಾಗಿ ಪ್ರಕಟಣೆ ಮಾಡಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ವರ್ಷೇ ವರ್ಷೇ ಕ್ಷೇತ್ರಗಳು ಹೆಚ್ಚಾಗುತ್ತವೆ, ರಿಸರ್ವೇಷನ್ ಹೆಚ್ಚಾಗುತ್ತದೆ, ಹೀಗೆ ೧೦ ವರ್ಷದಲ್ಲಿ ಎಷ್ಟೋ ಮತದಾರರಿಗೆ ಧಕ್ಕೆ ತಂದಂತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—೧೯೮೧ನೇ ಇಸವಿಯಲ್ಲಿ ನಡೆದಂತಹ ಜನಗಣತಿಯ ಪ್ರಕಾರ ಮಾಡ ಬೇಕೆಂದು ನಮ್ಮ ಇಚ್ಛೆ ಇತ್ತು. ಆದರೆ Technically the census figures as compiled by the Census Commissioner must be approved by the Central Cabinet Sub-Committee. All paper connected therewith are before that Committee. The Committee has not met and its approval has not been given, It may be given at any time. We tried our best from our end to contact the persons in connection with this. They are not in a position to say when it will be approved by the Cabinet Sub-Committee. This is one factual information. The other point is, we are not in a mood to wait for a period indefinitely. This is the position.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನನ್ನ ಅಭಿಪ್ರಾಯ ಏನೆಂದರೆ, ಆ ರೀತಿ ಮಾಡಿದ್ದರೆ ಅದರಲ್ಲಿ ಇನ್ನೂ ಹೆಚ್ಚು ಜನರು ಭಾಗಿಗಳಾಗುತ್ತಿದ್ದರೆಂದು ನನ್ನ ಭಾವನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸದಸ್ಯರು ಮಿಸ್‌ಲೀಡ್ ಮಾಡಿಕೊಳ್ಳುತ್ತಿದ್ದಾರೆ. ೧೯೮೧ರ ಜನವರಿಯಲ್ಲಿ ಏನು ಜನಗಣತಿ ನಡೆದಿದೆ ಅದಕ್ಕೂ ಇದಕ್ಕೂ ಬೇರೆ ಬೇರೆ ಸಂಬಂಧ. ಅದೇ ಬೇರೆ, ಇದೇ ಬೇರೆ. ಲೇಟೆಸ್ಟ್ ಓಟರ್ಸ್ ಲಿಸ್ಟ್ ಸಿಗಬೇಕು ಎಂದರೆ ೧–೧–೧೯೮೩ರಲ್ಲಿ ಮಾಡಿದ್ದಂತ ಲಿಸ್ಟ್ ಇದೆ. ಇದರ ಮಧ್ಯೆ ಸೇರಿಸಿಕೊಳ್ಳುವುದಕ್ಕೆ ಕಾನೂನು ಪ್ರಕಾರ ಅಡ್ಡಿ ಇಲ್ಲ. ೧೮ ರಿಂದ ೨೧ ವರ್ಷ ದೊಳಗೆ ಇರುವವರನ್ನು ಸೇರಿಸಿಕೊಳ್ಳುವುದಕ್ಕೆ ಪ್ರತ್ಯೇಕ ಲಿಸ್ಟ್ ಇರುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇಲ್ಲಿ ಕನ್‌ಫ್ಯೂಷನ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಒಂದರಿಂದ ಒಂದಕ್ಕೆ ಹೋಗುತ್ತಿದ್ದೀರಿ. ನಾವು ಹೀಗೆ ಮಾಡುವುದರಿಂದ ಮತದಾರರು ಜಾಸ್ತಿಯಾಗುವುದಕ್ಕೆ ಅವಕಾಶವಿಲ್ಲ. For the purpose of delimitation of the constituencies latest census figures are to be taken into consideration. But you are mistaking one for the other. Census figures are to be taken into consideration only for the purpose of determination of delimitation of constituencies in all local authorities. You should not mistake them.

ಶ್ರೀ ಧರ್ಮಸಿಂಗ್.—ಇದು ಲಾ ಕಾಲೇಜು ಅಲ್ಲ. ನೀವು ಲಾ ಕಾಲೇಜಿನಲ್ಲಿ ಹೇಳಿದ ಹಾಗೆ ಹೇಳುತ್ತಿದ್ದೀರಿ. ನಾನೂ ಉತ್ತರ ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ನೀವು ಏನು ಬೇಕಾದರೂ ಇಲ್ಲ ಹೇಳಿ ನೀವು ಏನು ಬೇಕಾದರೂ ಹೇಳುವುದಕ್ಕೆ ಈ ಸಭೆಯ ಅಧ್ಯಕ್ಷರು ಅನುಮತಿಯನ್ನು ತೆಗೆದುಕೊಂಡು ಹೇಳುವುದಕ್ಕೆ ಅವಕಾಶ ಇದೆ. ನನ್ನ ಮೇಲೆ ಏತಕ್ಕೆ ಹೌಹಾರಬೇಕು ? ನಾನು...

ಶ್ರೀ ಧರ್ಮಸಿಂಗ್.—ಅವರು ಹಿಂದೆ ಪ್ರೊಫೆಸರ್ ಆಗಿದ್ದವರು.

SRI A. LAKSHMISAGAR.—I am on my feet. I can also characterise him. I don't want to do it. If he keeps quiet that would be the monumental characterisation of certain persons. I can explain the legal position as I understand it. I want that there should be no confusion between the census figures which are to be taken into consideration for the purpose of determination of delimitation of constituencies on one side and the preparation of voters' list on the other. This is what I was trying to make out. I don't know why hon member Sri Dharam Singh shot up from his seat. He has every opportunity of saying whatever he wants to say. I should like to have the benefit of his views and limitless experience he had. I am a small man...

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ತಾವು ರೂಲ್ಸ್‌ನಲ್ಲಿ ಸಿಂಗಲ್ ಸೀಟ್ ಕಾನ್‌ಸ್ಟಿಟ್ಯೂಯನ್ಸಿ ಮಾಡುವವರಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—'One or more' ಎಂದು ಇದೆ. ಎರಡಕ್ಕೂ ಅವಕಾಶ ಇದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಯಾವ ಉದ್ದೇಶದಿಂದ ತಂದಿದ್ದಾರೆ ಎಂದರೆ ಒಂದು ವರ್ಗದವರಿಗೆ ಅಷ್ಟೇ ಅನುಕೂಲವಾಗುವುದು ಆಗಬಾರದು ಹಿಂದುಳಿದ ವರ್ಗದವರಿಗೆ ದುರ್ಬಲ ವರ್ಗದವರಿಗೆ ಮತ್ತು ಹರಿಜನ ಗಿರಿಜನರಿಗೂ ಪ್ರಾತಿನಿಧ್ಯ ಸಿಗಬೇಕು ಎಂದು ಆದರೆ ಅವರಿಗೆ ಆ ಪ್ರಾತಿನಿಧ್ಯ ಸಿಕ್ಕಿಲ್ಲ. ಅದನ್ನು ಸಹಿತ ಕಸಿದುಕೊಳ್ಳುವ ಪ್ರಯತ್ನ ಸರ್ಕಾರದ್ದಾಗಿದೆ ಎಂದು ಅನ್ನಿಸುತ್ತದೆ. ಕ್ಷೇತ್ರಕ್ಕೆ ಒಂದೊಂದು ಸೀಟು ಎಂದು ಮಾಡುತ್ತಿದ್ದೀರಿ. ಅದನ್ನು 'one or more' ಎಂದು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಪುಸ್ತಕ ನೋಡಿದರೆ ಅರ್ಥವಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ರೂಲ್ಸ್‌ನಲ್ಲಿ 'one or more' ಎಂದು ಮಾಡಿದ್ದಾರೆ. ಆ ಜನಗಳ ಹಿತರಕ್ಷಣೆ ಮಾಡತಕ್ಕ ಜವಾಬ್ದಾರಿ ಕೂಡ ಸರ್ಕಾರಕ್ಕೆ ಇದೆ. ಅದನ್ನು ವಿಚಾರ ಮಾಡಬೇಕಾದುದು ಅವಶ್ಯಕವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳು ಹೇಳಿದರು ಡೆಪ್ಯೂಟಿ ಕಮೀಷನರ್...

ಶ್ರೀ ಎಂ. ಚಂದ್ರಶೇಖರ್.—ಇದು ಮಹಾನಗರಸಭೆಯಲ್ಲಿ ಬರುವುದಿಲ್ಲ.

ಶ್ರೀ ಧರ್ಮಸಿಂಗ್.— ಈಗ ನೀವು ಇಂಟ್ರಡ್ಯೂಸ್ ಮಾಡಿದ ಬಿಲ್ ಯಾವುದು ?

ಶ್ರೀ ಎಂ. ಚಂದ್ರಶೇಖರ್.—ಮಹಾನಗರಸಭೆಯದು.

ಶ್ರೀ ಧರ್ಮಸಿಂಗ್.—ಸರಿಯಾಗಿ ನೋಡದೆ ಏತಕ್ಕೆ ಮಾತನಾಡುತ್ತೀರಿ ? ಮೊದಲು ತಂದದ್ದು ಮುನಿಸಿಪಾಲಿಟಿ ಅಮೆಂಡ್‌ಮೆಂಟ್ ಆಕ್ಟ್, ಅದಾದನಂತರ ಕಾರ್ಪೊರೇಷನ್ ಆಕ್ಟ್. ನಾನು ನೋಡಿಯೇ ಹೇಳುತ್ತಿದ್ದೇನೆ. ಆದರೆ ಲಕ್ಷ್ಮೀಸಾಗರ್ ಏತಕ್ಕೆ ಓದಿಲ್ಲವೆಂದು ಹೇಳಿದರು ?

ಶ್ರೀ ಭೀಮಣ್ಣ ಖಂಡ್ರೆ.—ಈಗ ಮಾನ್ಯ ಮಂತ್ರಿಗಳು ಹೇಳಿದರು 'one or more' ಎಂದು. ಒಂದೇ ಎಂದು ಅಲ್ಲ. ಡೆಪ್ಯೂಟಿ ಕಮೀಷನರ್‌ರವರು ಎಲ್ಲ ಮುನಿಸಿಪಾಲಿಟಿಗಳಿಗೂ ಏನು ಆರ್ಡರ್ ಕೊಟ್ಟಿದ್ದಾರೆಂದರೆ ಒಂದೇ ಒಂದು ಮಾಡಿ ಎಂದು. ಕೊನೇಪಕ್ಷ ಮೂರನ್ನಾದರೂ ಮಾಡಬಹುದೇ ಎಂದು ಕೇಳುತ್ತಿದ್ದೇನೆ.

ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅವರು ಓನ್ ಮೆಂಬರ್ ಕಾನ್‌ಸ್ಟಿಟುಯೆನ್ಸಿ ಅಲ್ಲ one or more ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಒಂದು ಮುನಿಸಿ ಪಾಲಿಟಿಗೆ one member constituency ಮಾಡಿ ಎಂದು ಆದೇಶ ಕೊಟ್ಟಿದ್ದಾರೆ, ಇದರ ಬಗ್ಗೆ ಏನು ಹೇಳುತ್ತಾರೆ ?

ಶ್ರೀ ಎಂ. ಚಂದ್ರಶೇಖರ್.—ಪುರಸಭೆಗಳ ವಿಚಾರ ಬಂದಾಗ ಅದನ್ನು ಚರ್ಚೆ ಮಾಡೋಣ. ಈಗ ಮಹಾ ನಗರಸಭೆಯ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಧರ್ಮಸಿಂಗ್.—ನೀವು ಇಂಟ್ರೊಡ್ಯೂಸ್ ಮಾಡಿದ್ದು ಮುನಿಸಿಪಾಲಿಟೀಸ್. ಅಮೆಂಡ್‌ಮೆಂಟ್ ಆಕ್ಟ್.

ಶ್ರೀ ಎಂ. ಚಂದ್ರಶೇಖರ್.—ಇಲ್ಲ ಸಿಟಿ ಕಾರ್ಪೊರೇಷನ್‌ಗೆ ಸಂಬಂಧಪಟ್ಟಿದ್ದು.

ಶ್ರೀ ಧರ್ಮಸಿಂಗ್.—ಕರ್ನಾಟಕ ಮುನಿಸಿಪಾಲಿಟೀಸ್ ಅಮೆಂಡ್‌ಮೆಂಟ್ ಬಿಲ್ ೧೯೮೩ ಎಂದಿದೆ ಇನ್ನೊಂದು ಬೇರೆ ಇದೆ. ನಾನು ತಮಗೆ ಯಾವ ತರಹದ ತೊಂದರೆಯನ್ನೂ ಮಾಡಬೇಕೆಂದು ಇದನ್ನು ಹೇಳುತ್ತಿಲ್ಲ. ತಮಗೆ ಸಹಾಯಕನಾಗಿ ಹೇಳುವುದಕ್ಕೆ ನಿಂತಿದ್ದೇನೆ. ಮುನಿಸಿಪಾಲಿಟಿಗಳ ತಿದ್ದುಪಡಿ ಮಸೂದೆ ಒಂದಿದೆ, ಇನ್ನೊಂದು ಕಾರ್ಪೊರೇಷನ್‌ಗಳ ತಿದ್ದುಪಡಿ ಮಸೂದೆ ಇದೆ. ಮೊದಲು ಮೂವ್ ಮಾಡಿದ್ದು ಮುನಿಸಿಪಾಲಿಟಿಗಳಿಗೆ ಸಂಬಂಧಿಸಿದ ತಿದ್ದುಪಡಿ ಮಸೂದೆ.

ಶ್ರೀ ಎಂ. ಚಂದ್ರಶೇಖರ್.—ಇಲ್ಲ, ಸಿಟಿ ಕಾರ್ಪೊರೇಷನ್‌ಗೆ ಸಂಬಂಧಿಸಿದ್ದು.

ಶ್ರೀ ಧರ್ಮಸಿಂಗ್.—ಅಜೆಂಡಾದಲ್ಲಿ ಮುನಿಸಿಪಾಲಿಟೀಸ್ ಅಮೆಂಡ್‌ಮೆಂಟ್ ಬಿಲ್ ೧೯೮೩ ಮೊದಲಿದೆ. ಅದಾದಮೇಲೆ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ ೧೯೮೩ ಇದೆ.

ಶ್ರೀ ಎಂ. ಚಂದ್ರಶೇಖರ್.—ಟೌನ್ ಮುನಿಸಿಪಾಲಿಟಿ ಮತ್ತು ಸಿಟಿ ಮುನಿಸಿಪಾಲಿಟಿಗಳ ಮಸೂದೆ ಆಮೇಲೆ ಬರುತ್ತದೆ.

†ಶ್ರೀ ಧರ್ಮಸಿಂಗ್.—ಅಜೆಂಡಾ ಪ್ರಕಾರ ಹೀಗಿದೆ. ಮೊದಲು ಪುರಸಭೆಗಳು ಮತ್ತು ನಗರಸಭೆಗಳ ಬಗ್ಗೆ ತಂದಿಲ್ಲ. ಕಾರ್ಪೊರೇಷನ್ ಬಗ್ಗೆ ತಂದಿದ್ದೀರಿ. ಬೆಂಗಳೂರಿನ ಬಗ್ಗೆ ತಮಗೆ ಹೆಚ್ಚು ಆಸಕ್ತಿ ಇದೆ ಎಂದು ಕಾಣುತ್ತದೆ. ಚುನಾವಣೆ ಮಾಡಬೇಕೆಂಬುದು ಹೊಸ ಸರ್ಕಾರದ ಉದ್ದೇಶ ಎಂದು ಮಂತ್ರಿ ಮಂಡಲದ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಪದೇ ಪದೇ ಚುನಾವಣೆ ಮಾಡತಕ್ಕ ವಾಗ್ದಾನ ಮಾಡಿದ್ದರೂ ಕೂಡ ಹಿಂದಿನ ಸರ್ಕಾರ ಚುನಾವಣೆ ಮಾಡಲಿಲ್ಲವೆಂದು ಮಾನ್ಯ ಜೆ ಎಚ್ ಪಟೇಲ್ ಅವರು ಮೊದಲು ಹೇಳಿದ್ದಾರೆ. ತಮಗೆ ಕೂಡ ಗೊತ್ತಿರುವಹಾಗೆ ನಾನು ಹಿಂದೆ ಇದಕ್ಕೆ ಸಂಬಂಧಪಟ್ಟ ಮಂತ್ರಿಯಾಗಿದ್ದಾಗ ಬೆಂಗಳೂರು ನಗರದ ಶಾಸಕರು ಮತ್ತು ಬೇರೆ ಶಾಸಕರ ಜೊತೆ ಈ ವಿಷಯದಲ್ಲಿ ಸಮಾಲೋಚನೆ ಮಾಡಿದ್ದೇನೆ. ಚುನಾವಣೆ ಮಾಡಲೇ ಬಾರದು ಎಂದು ಸರ್ಕಾರದ ಉದ್ದೇಶವಾಗಿರಲಿಲ್ಲ. ಚುನಾವಣೆ ಮುಂದೂಡುವುದಕ್ಕೆ ಸಂದರ್ಭ ಏನಿತ್ತು ಎಂಬುದನ್ನು ನೋಡಬೇಕು.

---

† ಈ ಚಿಹ್ನೆಯು ಸಂಬಂದಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಜೂನ್ ತಿಂಗಳಲ್ಲಿ ಚುನಾವಣೆ ಮಾಡಬೇಕೆಂಬ ಉದ್ದೇಶದಿಂದ ತರಾತುರಿಯಿಂದ ತಿದ್ದುಪಡಿ ತಂದಿದ್ದೀರಿ. ಈಗಾಗಲೇ ಈ ಬಗ್ಗೆ ಮಾನ್ಯ ಸದಸ್ಯರಾದ ಚಿಮ್ಮನಕಟ್ಟಿಯವರೂ ಪ್ರಸ್ತಾಪ ಮಾಡಿದ್ದಾರೆ. ೧೯೭೧ರ ಜನಗಣತಿ ಆಧಾರದಮೇಲೆ ೨೦೦೦ನೇ ಇಸವಿಯವರೆಗೆ ಚುನಾವಣೆ ಆಗಬೇಕೆಂದು ಪಾರ್ಲಿಮೆಂಟಿನಲ್ಲಿ ಪೀಪಲ್ ರೆಪ್ರಸೆಂಟೇಷನ್ ಆಕ್ಟಿಗೆ ತಿದ್ದುಪಡಿಯಾಗಿದೆ. ಅದಕ್ಕನುಗುಣವಾಗಿ ೧೯೮೧ರಲ್ಲಿ ಏನು ಜನಗಣತಿಯಾಗಿದೆ. ಆ ಜನಸಂಖ್ಯೆಯ ಆಧಾರದ ಮೇಲೆ ಚುನಾವಣೆಯಾಗಬೇಕೆಂದು ೧೯೭೬ರಲ್ಲಿ ಕೂಡ ಈ ಸಭೆಯಲ್ಲಿ ತಿದ್ದುಪಡಿಯಾಗಿತ್ತು. ಮುನಿಸಿಪಾಲಿಟಿ ಚುನಾವಣೆ ಕೂಡ ೧೯೭೧ರ ಜನಗಣತಿ ಆಧಾರದ ಮೇಲೆ ೨೦೦೦ನೇ ಇಸವಿಯವರೆಗೆ ಆಗಬೇಕೆಂದು ತಿದ್ದುಪಡಿ ಬಂದಿತ್ತು. ಈ ತಿದ್ದುಪಡಿ ಡಿಫೆಕ್ಟೀವ್ ಆಗಿದೆ ಎಂದು ಸಾಕಷ್ಟುಸಲ ಶಾಸಕರ ಸಭೆಯಲ್ಲಿ ನಾನು ಹೇಳಿದ್ದೇನೆ. ೧೦ ವರ್ಷದ ಅವಧಿಯಲ್ಲಿ ಏನು ಜನಸಂಖ್ಯೆಯಾಗುತ್ತದೆ ಅದಕ್ಕನುಗುಣವಾಗಿ ಡೀಲಿಮಿಟೇಷನ್ ಆಫ್ ಕಾನ್‌ಸ್ಟಿಟುಯೆನ್ಸಿ ಆಗಬೇಕು ೧೮ ವರ್ಷದ ಯುವಕರೂ ಕೂಡ ಮತ ಹಾಕಬೇಕೆಂಬ ಅವಕಾಶವನ್ನು ಕಲ್ಪಿಸಿಕೊಡುತ್ತಿರುವಾಗ ಮತ್ತು ಶೇಕಡ ೨೦ ರಷ್ಟು ಮಹಿಳೆಯರಿಗೆ ಪಾತಿನಿಧ್ಯ ಕೊಡುವ ಪ್ರಗತಿಪರವಾದ ಕಾನೂನನ್ನು ಜಾರಿಗೆ ತರುವಾಗ ತಾವು ಸ್ಪಷ್ಟವಾಗಿ ಹರಿಜನ ಗಿರಿಜನರ ಬಗ್ಗೆಯೂ ಹೇಳಬೇಕಾಗಿತ್ತು. ಈ ರಾಜ್ಯದಲ್ಲಿರತಕ್ಕ ಹರಿಜನ ಗಿರಿಜನರೇನಿದ್ದಾರೆ ಅವರಿಗೆ ನಗರ ಪ್ರದೇಶದಲ್ಲಿ ದೈನಿಕ ಜೀವನಕ್ಕೆ ಸಂಬಂಧಪಟ್ಟಂತೆ ಇರತಕ್ಕ ಸಮಸ್ಯೆಗಳನ್ನು ಪ್ರಾತಿನಿಧ್ಯ ಮಾಡತಕ್ಕ ಹಕ್ಕು ದೊರೆಯಬೇಕಾಗಿದೆ. ನಾನು ಗುಲ್ಬರ್ಗದಲ್ಲಿ ನಗರಸಭಾ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ೧೯೬೮ರಲ್ಲಿ ಚುನಾವಣೆಯಾದಮೇಲೆ ಹರಿಜನ ಗಿರಿಜನರ ಪ್ರಾತಿನಿಧ್ಯ ೫ ಇದ್ದು ಹರಿಜನ ಗಿರಿಜನರ ಸಂಖ್ಯೆ ೧೩ ಸಾವಿರ ಇದ್ದರೆ ಇವತ್ತು ೨೬ ಸಾವಿರ ಆಗಿದೆ. ಇವತ್ತು ಅದೇ ಜನ ಸಂಖ್ಯೆ ಆಧಾರದ ಮೇಲೆ ಚುನಾವಣೆ ನಡೆಸುವುದಾದರೆ ೧೩ ಸಾವಿರ ಹರಿಜನ ಗಿರಿಜನರಿಗೆ ಚುನಾವಣೆಗೆ ನಿಲ್ಲತಕ್ಕ ಹಕ್ಕು ತಪ್ಪುತ್ತಿದೆ. ೧೯೭೬ರಲ್ಲಿ ಏನು ತಿದ್ದುಪಡಿಯಾಗಿದೆ ಅದು ದೋಷಪೂರಿತವಾದ ತಿದ್ದುಪಡಿ, ೧೯೭೧ರ ಸೆನ್ಸಸ್ ಫಿಗರ್ ಇಲ್ಲ ಎಂದು ಏನು ವಾದ ಮಾಡುತ್ತಿದ್ದಾರೆ. ಅದು ಸರಿಯಲ್ಲ, ನಾಳೆ ಅದು ಸಿಗಬಹುದು, ಆ ಆಧಾರದ ಮೇಲೆ ಡೀಲಿಮಿಟೇಷನ್ ಆಫ್ ಕಾನ್ಸ್ಟಿಟುಯೆನ್ಸಿ ಮಾಡಿದರೆ ಹರಿಜನ ಗಿರಿಜನರಿಗೆ ಏನು ಹೆಚ್ಚು ಪ್ರಾತಿನಿಧ್ಯ ಮಾಡತಕ್ಕ ಅವಕಾಶ ಸಿಗುತ್ತದೋ ಅದನ್ನು ತಾವು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದೀರಿ. ಕರ್ನಾಟಕದಲ್ಲಿರತಕ್ಕ ಹರಿಜನ ಗಿರಿಜನರು ಮಹಾನಗರಸಭೆ ಮತ್ತು ಪುರಸಭೆಗಳಲ್ಲಿ ಹೆಚ್ಚಿನಸ್ಥಾನಗಳಿಗೆ ನಿಂತು ಸದಸ್ಯರಾಗಿ ಬಂದು ಧೈರ್ಯವಾಗಿ ತಮ್ಮ ಸಮಸ್ಯೆಗಳನ್ನು ಪ್ರಸ್ತಾಪ ಮಾಡತಕ್ಕ ಹಕ್ಕನ್ನು ತಾವು ಕಿತ್ತು ಹಾಕುತ್ತಿದ್ದೀರಿ. ನಾನು ಮೊನ್ನೆ ಕೂಡ ಹೇಳಿದ್ದೇನೆ, ೧೯೮೧ರ ಜನಗಣತಿ ಆಧಾರದ ಮೇಲೆ ಡೀಲಿಮಿಟೇಷನ್ ಆಫ್ ಕಾನ್ಸ್ಟಿಟುಯೆನ್ಸಿ ಮಾಡದೇಹೋದರೆ ಕೋರ್ಟಿನಲ್ಲಿ ಕೂಡ ಅದು ನಿಲ್ಲುವುದಿಲ್ಲ ಎಂದು. ತಾವು ಇವತ್ತು ಸೆಕ್ಷನ್ ೧೩ರಲ್ಲಿ ತಿದ್ದುಪಡಿ ಮಾಡುತ್ತಿದ್ದೀರಿ ಅದರಲ್ಲಿ "No notification under sub-section (1) shall be called in question in any court of law" ಎಂದು ಹೇಳಿದ್ದೀರಿ ಸಾಮಾಜಿಕ ನ್ಯಾಯಕ್ಕಾಗಿ ಕೋರ್ಟಿಗೆ ಹೋದರೂ ಕೂಡ ಅದುಅಲ್ಲಿ ನಿಲ್ಲಬಾರದು ಎಂಬ ತಿದ್ದುಪಡಿಯನ್ನು ತಾವು ತರುತ್ತಿದ್ದೀರಿ. ಒಂದು ಕಡೆ ಹೊಸ ಸರ್ಕಾರ ಪ್ರಜಾಪ್ರಭುತ್ವದ ಮೂಲಭೂತ ಹಕ್ಕುಗಳನ್ನು ರಕ್ಷಿಸುತ್ತದೆಂದು ಪ್ರತಿಪಾದನೆ ಮಾಡುವ ತಾವು ಹರಿಜನ ಗಿರಿಜನರು ನಮಗೆ ಹೆಚ್ಚು ಅನುಕೂಲ ಮಾಡಿಕೊಡಿ ಎಂದು ಕೋರ್ಟಿಗೆ ಹೋದರೆ ಅಲ್ಲಿ ಅದೂ ಕೂಡ ನಿಲ್ಲಬಾರದು ಎಂದು ಪ್ರಜಾಪ್ರಭುತ್ವಕ್ಕೆ ವಿರೋಧವಾದ ತಿದ್ದುಪಡಿಯನ್ನು ತರುತ್ತಿದ್ದೀರಿ. ನಾನೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈ ರೀತಿಯ ತಿದ್ದುಪಡಿಯನ್ನು ನಾನು ಯಾವತ್ತೂ ತಂದಿಲ್ಲ. ನಾವು ಚುನಾವಣೆಯನ್ನು ಏತಕ್ಕಾಗಿ ನಿಧಾನ ಮಾಡಿದೆವು ಎಂದು ಹೇಳಿದರೆ ಎಲ್ಲ ಜನರಿಗೂ ಪ್ರಾತಿನಿಧ್ಯ ಸಿಕ್ಕಬೇಕು. ಎಂಬ ಉದ್ದೇಶದಿಂದ. ನಾನು ಶಾಸಕರ ಜೊತೆ ಸಮಾಲೋಚನೆ ಮಾಡಿದಾಗಲೂ ಇದೇ ಮಾತನ್ನು ಹೇಳಿದ್ದೇನೆ. ದೈನಿಕ ಜೀವನಕ್ಕೆ ಸಂಬಂಧ ಪಟ್ಟ ದೀಪ, ನಲ್ಲಿ, ರಸ್ತೆ ಇವುಗಳಿಗೆ ಸಂಬಂಧಪಟ್ಟ ಕೆಲಸ ಆಗಬೇಕಾಗಿದೆ. ಇದಕ್ಕೆಲ್ಲಾ ಚುನಾಯಿತ ಪ್ರತಿನಿಧಿಗಳ ಹತ್ತಿರ ಜನರು ಬರಬೇಕಾಗುತ್ತದೆ, ಪ್ರತಿನಿದಿಗಳೂ ಕೂಡ ಜನರ ಹತ್ತಿರ ಹೋಗಲೇ ಬೇಕಾಗುತ್ತದೆ. ಈ ದೃಷ್ಟಿಯಿಂದ ಚುನಾವಣೆ ಆಗಲೇಬೇಕು ಎಂದು ವಾದ ಮಾಡುವವನು ನಾನು, ೧೯೮೧ರ ಸೆನ್ಸಸ್ ಪ್ರಕಾರ ಡೀಲಿಮಿಟೇಷನ್ ಆಫ್ ಕಾನ್‌ಸ್ಟಿಟುಯೆನ್ಸಿ ಆಗಬೇಕು ಎಂದು ನಾವು ಪ್ರಸ್ತಾಪಮಾಡಿದ್ದೆವು.

೪-೩೦ ಪಿ.ಎಂ.

ಯಾವ ಜನ ತಮ್ಮ ಪ್ರಾಥಮಿಕ ಹಕ್ಕಿಗಾಗಿ ಹೊಡೆದಾಡಬೇಕೆಂಬ ವಾದವನ್ನು ಮುಂದೆ ಇಟ್ಟು ಕೊಂಡು, ಅದರ ಮೇಲೆ ನಿಲ್ಲತಕ್ಕ ವಾದವನ್ನು ಮಂಡಿಸಿ ಇವತ್ತು ಸರ್ಕಾರವನ್ನು ರಚನೆ ಮಾಡಿ ರಾಜ್ಯ ಭಾರ ಮಾಡುತ್ತಿದ್ದಾರೋ ಅವರು ಈ ಒಂದು ತಿದ್ದುಪಡಿಯನ್ನು ತಂದಿರುತ್ತಾರೆ. ಈ ಒಂದು ತಿದ್ದು ಪಡಿಯಿಂದ ಈ ಸರ್ಕಾರದ ಸಿದ್ಧಾಂತದ ಆತ್ಮಹತ್ಯೆ ಆಗುತ್ತದೆ. ಯಾರೂ ಕೂಡ ಈ ಬಗ್ಗೆ ಕೋರ್ಟಿಗೆ ಹೋದರೆ ಇದು ನಿಲ್ಲಬಾರದೆಂದು ಏನು ಇದನ್ನು ತರುತ್ತಿದ್ದೀರಿ ಇದನ್ನು ನಾನು ವಿರೋಧ ಮಾಡುತ್ತೇನೆ. ಇವತ್ತು ನಿಯಮ ೧೧ರ ಪ್ರಕಾರ ಚುನಾವಣೆ ಮಾಡುವುದಕ್ಕೆ ಹೊರಟಾಗ ಈಚಿನ ಸೆನ್ಸಸ್ ಫಿಗರ್ಸ್ ಏನಿದೆ ಅದರ ಆಧಾರದ ಮೇಲೆ ಚುನಾವಣೆ ಮಾಡಬೇಕಾಗುತ್ತದೆ. ಸೆಕ್ಷನ್ ೧೧ರಲ್ಲಿ

"Constitution of Municipal Councils which says that population means the population ascertained at the last preceding census and the relavant figures that are published."

ಎಂದು ಇದೆ. ಇವತ್ತು ತಾವು ಅದನ್ನು ನೋಡಿಲ್ಲ. ಏನೋ ತರಾತುರಿಯಲ್ಲಿ ತಾವು ಚುನಾವಣೆ ಮಾಡುವುದಕ್ಕೆ ಹೊರಟಿದ್ದೀರಿ. ನಾನು ತಾವು ಚುನಾವಣೆ ಮಾಡುವುದನ್ನು ಒಪ್ಪುತ್ತೇನೆ. ೧೮ ವರ್ಷದ ಜನರಿಗೆ ಪಟ್ಟಣ ಪ್ರದೇಶದಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ ಪ್ರಾತಿನಿಧ್ಯ ಕೊಡುವುದನ್ನು ನಾನು ಸ್ವಾಗತಿಸುತ್ತೇನೆ. ೨೦ ಜನ ಮಹಿಳೆಯರಿಗೆ ಪ್ರತ್ಯೇಕ ಅವಕಾಶ ಕೊಡುವುದನ್ನು ನಾನು ಸ್ವಾಗತಿಸು ತ್ತೇನೆ. ಆದರೆ ಇವತ್ತು ಪಟ್ಟಣ ಪ್ರದೇಶದಲ್ಲಿ ಇರತಕ್ಕ ಮಹಿಳೆಯರು ಯಾರು ? ಇವತ್ತು ಓದು ಬರಹ ಬರದವರಿಗೆ ಪ್ರಾತಿನಿಧ್ಯ ಇಲ್ಲ. ಎಷ್ಟು ಹರಿಜನಗಿರಿಜನ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡು ತ್ತೀರೆಂದು ತಾವು ಪ್ರಸ್ತಾಪ ಮಾಡಿಲ್ಲ. ಇವತ್ತು ತಾವು ಸಾಮಾಜದಲ್ಲಿನ ಮೇಲ್ವರ್ಗದವರಿಗೆ ಪ್ರಾತಿ ನಿಧ್ಯ ಕೊಡುವುದಕ್ಕೆ ಇದನ್ನು ಮಾಡುತ್ತಿದ್ದೀರಿ ಸಮಾಜದಲ್ಲಿನ ದುರ್ಬಲವರ್ಗದವರಿಗೆ, ಕೊಳಚೆ ಪ್ರದೇಶದಲ್ಲಿರುವ ಜನರ ಹಿತರಕ್ಷಣೆ ಮಾಡತಕ್ಕ, ಅವರ ಸಮಸ್ಯೆ ಬಗ್ಗೆ ವಿಚಾರ ಮಾಡತಕ್ಕ ವಿಷಯದ ಬಗ್ಗೆ ತಾವು ಅವಕಾಶ ಕಲ್ಪಿಸಿಕೊಡುತ್ತಾ ಇಲ್ಲ. ಇವತ್ತು ತಾವು ಇದನ್ನು ಪ್ರಗತಿಪರ ತಿದ್ದುಪಡಿ ಎಂದು ಹೇಳುತ್ತಿದ್ದೀರಿ. ಆದರೆ ಇದು ಪ್ರತಿಕ್ರಿಯಾವಾದೀ ಶಕ್ತಿಗಳ ಪ್ರತಿಪಾದನೆ ಮಾಡತಕ್ಕ ತಿದ್ದುಪಡಿ ಇದೆ ಯೆಂದು ನಾನು ಹೇಳುತ್ತೇನೆ. ಇವತ್ತು ಮಲ್ಟಿಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಬಗ್ಗೆ ಹೇಳುತ್ತಿದ್ದೀರಿ, ಇವತ್ತು ಡಿವಿಜನ್‌ವೈಸ್ ಆಗಬೇಕು. ತಾವು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್ಸಿ ಮಾಡುತ್ತಿ ದ್ದೀರಿ. ಕೇವಲ ಸಮಾಜದ ಮೇಲಿನ ವರ್ಗದವರಿಗೆ ಹಿತವಾಗತಕ್ಕ ರೀತಿಯಲ್ಲಿ ಇದು ಇದೆ. ಇವತ್ತು ಡಿವಿಜನ್‌ವೈಸ್‌ನಲ್ಲಿ ಮಲ್ಟಿಮೆಂಬರ್ ಕಾನ್‌ಸ್ಟಿಟೂಯನ್ಸಿ ಮಾಡಬೇಕು. ಕರ್ನಾಟಕ ರಾಜ್ಯ ಎಲ್ಲಾ ನಗರಸಭೆಗಳಲ್ಲಿ, ಪುರಸಭೆಗಳಲ್ಲಿ, ಮಹಾನಗರಸಭೆಗಳಲ್ಲಿ ಒಂದೇ ಕಾನೂನು ಆಗಬೇಕೆಂದು ಹೇಳಿ ಹಿಂದಿನ ಸಂಪುಟಸಭೆ ನಿರ್ಣಯವನ್ನು ತೆಗೆದುಕೊಂಡಿದೆ. ಇವತ್ತು ಎಲ್ಲಾ ಸಮಾಜದ ವರ್ಗದ ಜನರಿಗೆ ಎಲ್ಲಾ ಕಡೆಯಿಂದಲೂ ಕೂಡಾ ಮತ ಪಡೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಆದುದರಿಂದ ಹೇಳುತ್ತಿದ್ದೇನೆ ತಾವೂ ಕೂಡಾ ನಮ್ಮ ಗೆಳೆಯರಿದ್ದೀರಿ. ಸಾಕಷ್ಟು ಸಲ ನಗರಸಭೆಗಳ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಅವರು ಚುನಾವಣೆ ಮಾಡಲಿ ಆದರೆ ಇವತ್ತು ಇದನ್ನು ಇಷ್ಟು ತರಾತುರಿಯಲ್ಲಿ ಪಾಸ್ ಮಾಡತಕ್ಕದ್ದು ಸರಿಯಲ್ಲ. ಈ ಬಗ್ಗೆ ಬೇಕಾದರೆ ಅವರು ಆರ್ಡಿನೆನ್ಸ್ ತಂದು ಚುನಾವಣೆ ಮಾಡಬಹುದು. ಆದ್ದರಿಂದ ತಾವು ಏನು ತಿದ್ದುಪಡಿ ತಂದಿದ್ದೀರಿ ಅದರಿಂದ ಯಾವ ಯಾವ ಸೆಕ್ಷನ್ಸ್ ಮೇಲೆ ಪರಿಣಾಮ ಬೀರುತ್ತದೆಂಬುದನ್ನು ಹೇಳುತ್ತೇನೆ. ಇವತ್ತು ಸೆಕ್ಷನ್ ೩೨೩ರಲ್ಲಿ ಪ್ರಸ್ತಾಪ ಮಾಡಿದ್ದೀರಿ. ಮತ್ತು ಸೆಕ್ಷನ್ ೩೨೬ನ್ನು ಹೇಳಿದ್ದೀರಿ. ತಾವು ಅಮೆಂಡಮೆಂಟ್ ಮಾಡಿ ಸೆಕ್ಷನ್ ೧೦ ಆಗಲೀ, ೧೧ ಆಗಲೀ ೧೩ ಆಗಲೀ ೧೪ ಆಗಲೀ ಅದನ್ನು ಹೇಳಿದ್ದೀರಿ ತಾವು ಸೆಕ್ಷನ್ ೩೨೩ನ್ನು ಪ್ರಸ್ತಾಪ ಮಾಡಿದ್ದೀರಿ. ಇಲ್ಲಿ ಸೆಕ್ಷನ್ ೩೨೬ ಇದೆ. ಏಕೆ ಹೀಗೆ ಆಯಿತು ಎಂದು ನನಗೆ ಅರ್ಥವಾಗು ತ್ತಿಲ್ಲ. ಅಡ್ಮಿನಿಸ್ಟ್ರೇಷನ್ ರಿಫಾರಮ್ಸ್ ಮಾಡಬೇಕಾದರೆ ತಿದ್ದುಪಡಿ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ತಾವು ೩೨೬ರಲ್ಲಿ ಏನು ಹೇಳುತ್ತಿದ್ದೀರಿ ಅದು ನಮಗೆ ಗೊತ್ತಾಗುತ್ತಿಲ್ಲ ತಾವು ತರಾತುರಿಯಲ್ಲಿ

ಚುನಾವಣೆ ಮಾಡುತ್ತಿರುವುದರ ಹಿನ್ನೆಲೆ ನನಗೆ ಗೊತ್ತು. ಹೋದ ಚುನಾವಣೆಯಲ್ಲೂ ಜನತೆ ನಮ್ಮ ಪಕ್ಷಕ್ಕೆ ೮೧ ಜನರನ್ನು ಆರಿಸಿ ಕಳುಹಿಸಿದೆ. ಆದ್ದರಿಂದ ಈ ಚುನಾವಣೆ ಬಗ್ಗೆ ನಾವೇನೂ ಹಿಂಜರಿಯುವುದಿಲ್ಲ. ನಮ್ಮ ಪಕ್ಷಕ್ಕೂ ಹೆಚ್ಚು ಬಹುಮತ ಸಿಕ್ಕಿದೆ. ನಿಮ್ಮ ಪಕ್ಷಕ್ಕೇ ಹೆಚ್ಚು ಬೆಂಬಲ ಸಿಕ್ಕಿಬಹುವುದು ಎಂಬ ಭಾವನೆ ನಿಮ್ಮ ಮನಸ್ಸಿನಲ್ಲಿ ಇದ್ದರೆ ಆ ಬಗ್ಗೆ ಮುಂದಿನ ಚುನಾವಣೆಯಲ್ಲಿ ಜನತೆ ಎಚ್ಚರಗೊಳಿಸುತ್ತಾರೆ. ಇವತ್ತು ಏನು ಸಮಾಜದಲ್ಲಿ ಇರತಕ್ಕ ದೊಡ್ಡವರ್ಗೆ ಅನುಕೂಲ ಮಾಡಿ ಹರಿಜನಗಿರಿಜನರಿಗೆ ವಿರೋಧವಾಗಿ ಅವರಿಗೆ ಹೆಚ್ಚು ಪ್ರಾತಿನಿಧ್ಯ ಸಿಕ್ಕದಹಾಗೆ ಬಿಲ್ಲನ್ನು ತರುತ್ತಿದ್ದೀರಿ ಇದು ಪ್ರತಿಕ್ರಿಯಾವಾದಿ ಶಕ್ತಿಗಳ ಹಿತರಕ್ಷಣೆ ಮಾಡುವ ರೀತಿಯಲ್ಲಿ ಬರುತ್ತಿದೆಯೆಂದೂ, ಇದನ್ನು ನಾನು ವಿರೋಧಿಸುತ್ತೇನೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ. ನಾನು ಬಹಳ ತೃಪ್ತಿಯಿಂದ ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಹಾಗೂ ಒಂದೆರಡು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮೊದಲು ನಾನು ಸ್ವಾಗತ ಮಾಡಬೇಕಾಗಿರುವ ಅಂಶವೆಂದರೆ. ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿರುವುದು. ಏಕೆಂದರೆ ನನಗೆ ತಿಳಿದ ಮಟ್ಟಿಗೆ ಸದನದಲ್ಲಿ ಮಹಿಳೆಯರ ಪ್ರಾತಿನಿಧ್ಯದ ವಿಷಯ ಚರ್ಚೆಗೆ ಬಂದಾಗ ಅದನ್ನು ಕಡೆಗಣಿಸಿ ಮಾತನಾಡುವ ಮನೋಭಾವವೇ ಆಳುವ ಪಕ್ಷದವರು ತೆಗೆದುಕೊಳ್ಳುತ್ತಿದ್ದುದು. ಏಕೆಂದರೆ ೧೯೭೬ರಲ್ಲಿ ಈ ಬಗ್ಗೆ ಚರ್ಚೆ ನಡೆಯಿತು. ಶ್ರೀಮತಿ ನಾಗರತ್ನಮ್ಮನವರು ಆಗ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದರು. ಆಗ ನಾನು ಇಲ್ಲಿ ಕುಳಿತಿದ್ದೆ. ಆಗ ಮುನಿಸಿಪಾಲಿಟಿ ಅಮೆಂಡ್‌ಮೆಂಟ್‌ಗೆ ಚರ್ಚೆ ಮಾಡುವ ಕಾಲದಲ್ಲಿ ಕೂಡಾ ಮಹಿಳೆಯರಿಗೆ ಎಷ್ಟು ಪ್ರಾತಿನಿಧ್ಯ ಕೊಡಬೇಕು ಹಾಗೂ ಸಪರೇಟಾಗಿ ಹರಿಜನಗಿರಿಜನ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಬೇಕೇ ಎಂಬ ವಿಷಯ ಪ್ರಸ್ತಾಪಕ್ಕೆ ಬಂತು. ಮಹಿಳೆಯರಿಗೆ ಎಷ್ಟು ಪ್ರಾತಿನಿಧ್ಯ ಕೊಡಬೇಕೆಂದಾಗ ಅದರ ಬಗ್ಗೆ ಯಾರೂ ಹೆಚ್ಚಿನ ಕಳಕಳಿಯನ್ನು ತೋರಿಸಲಿಲ್ಲ. ಅವರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಹೇಳಿದರೇ ವಿನಹ ಎಷ್ಟು ಕೊಡಬೇಕು ಎನ್ನುವ ಬಗ್ಗೆ, ಜಾಸ್ತಿ ಕೊಡಬೇಕೆನ್ನುವ ಬಗ್ಗೆ ದುರಾದೃಷ್ಟ ವಶಾತ್ ಮಹಿಳೆಯರೂ ಕೂಡಾ ಹೇಳಲಿಲ್ಲ. ಆದರೆ ನಾನು ಎದ್ದು ನಿಂತು ಮಹಿಳೆಯರ ಪ್ರಾತಿನಿಧ್ಯದ ಬಗ್ಗೆ ಮಾತನಾಡಿದೆ. ಆ ದಿನ ಶ್ರೀಮತಿ ನಾಗರತ್ನಮ್ಮನವರು ಅಧ್ಯಕ್ಷ ಸ್ಥಾನದಲ್ಲಿ ಇದ್ದರು. ಆದರೆ ಅವತ್ತು ಸಭೆಯಲ್ಲಿ ಇದ್ದ ಮಹಿಳಾ ಸದಸ್ಯರೂ ಸಹಾ ಆ ಬಗ್ಗೆ ಏನೂ ಹೇಳಲಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ,—ಆ ಹೆಂಗಸರಿಗೆ ಬುದ್ಧಿ ಇದ್ದರಲ್ಲವೇ ಹೇಳುವುದು?

ಶ್ರೀ ಎಂ.ಎಸ್. ಕೃಷ್ಣನ್.—ಅವರು ಒಳ್ಳೆಯ ಮಾತನ್ನು ಹೇಳಿದರು. ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ಅದು ಬಹಳ ದೊಡ್ಡ ಮಾತು ಇವತ್ತು ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಮಹಿಳೆಯರಿಗೆ ಬುದ್ಧಿ ಇದೆ. ವಿವೇಚನೆ ಇದೆ. ಆದರೆ ದುರಾದೃಷ್ಟವಶಾತ್ ಇವತ್ತು ಮೇಲ್ ಡಾಮಿನೆನ್ಸ್ ಜಾಸ್ತಿ ಆಗಿದೆ ಅಷ್ಟೇ. ಉದಾಹರಣೆಗೆ ಇವತ್ತು ವಿಧಾನಸಭೆಯಲ್ಲಿ ಕೇವಲ ಇಬ್ಬರೇ ಇಬ್ಬರು ಮಹಿಳಾ ಪ್ರತಿನಿಧಿಗಳು ಇದ್ದಾರೆ. ಇವರ ಸಂಖ್ಯೆ ಇನ್ನೂ ಜಾಸ್ತಿ ಇರಬೇಕಾಗಿತ್ತು. ಎಲ್ಲಾ ಕಡೆಯೂ ಅವರು ಮುಂದೆ ಬರಬೇಕು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ ಇದೆ.

ಒಬ್ಬ ಮಾನ್ಯ ಸದಸ್ಯರು —ವಿಧಾನ ಪರಿಷತ್ತಿನ ಸ್ಥಾನಗಳಿಗೆಲ್ಲಾ ಮಹಿಳೆಯರಿಗೇ ಪ್ರಾತಿನಿಧ್ಯವನ್ನು ಕೊಡಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾನು ಕಳೆದ ೨೫ ವರ್ಷಗಳಿಂದ ನೋಡುತ್ತಿದ್ದೇನೆ, ಮಹಿಳೆಯರ ಬಗ್ಗೆ ಬರೀ ಲಿಪ್ಸ್ ಸಿಂಪತೀನೇ ಆಗಿಹೋಯಿತು.

ಶ್ರೀ ಎಂ.ಎಸ್. ಕೃಷ್ಣನ್.—ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಲಿಪ್ಸ್ ಸಿಂಪತಿಯನ್ನಾದರೂ ತೋರಿಸುತ್ತಾರಲ್ಲಾ ಎಂದು ತಾವು ಸಂತೋಷಪಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಮಹಿಳೆಯರಿಗೆ ಬುದ್ಧಿ ಇಲ್ಲ ಎಂದು ಹೇಳಿಬಿಟ್ರಿ ನಿಮ್ಮದು ಲಿಪ್ಸ್ ಸಿಂಪತಿ ಎಂದು ಹೇಳಿಬಿಟ್ರಿ. ಇವರಿಗೆ ಏನೋ ಕಲಸುಮೇಲೋಗಿರವಾಗಿದೆಯೆಂದು ಕಾಣುತ್ತದೆ.

ಶ್ರೀ ಕೆ. ಎಚ್. ರಂಗನಾಥ್. —ಮಾನ್ಯ ಕೃಷ್ಣನ್‌ರವರು ಮಹಿಳೆಯರ ಬಗ್ಗೆ ಕಳಕಳಿ ವ್ಯಕ್ತಪಡಿಸುತ್ತಿದ್ದಾರೆ. ಅವರ ಬದಲು ಅವರ ಸ್ಥಾನದಲ್ಲಿ ವಿಧಾನಸಭೆಗೆ ಒಬ್ಬ ಮಹಿಳಾ ಅಭ್ಯರ್ಥಿಯನ್ನು ನಿಲ್ಲಿಸಿ ಕಳುಹಿಸಬಹುದಾಗಿತ್ತಲ್ಲಾ?

ಶ್ರೀ ಎಂ.ಎಸ್. ಕೃಷ್ಣನ್.—ಹೆಣ್ಣುಮಕ್ಕಳಿಗೆ ಮೂಲಭೂತವಾಗಿ ಹೆಚ್ಚು ಪ್ರಾತಿನಿಧ್ಯ ಕೊಡಬೇಕೆಂಬುದರಲ್ಲಿ ನ್ಯಾಯ ಇದೆ. ಖಂಡಿತಾ ಹೆಚ್ಚು ಹೆಣ್ಣುಮಕ್ಕಳಿಗೆ ಸ್ಥಾನ ಸಿಕ್ಕಿ ಅವರನ್ನು ನಿಲ್ಲಿಸಿದ್ದರೆ ಗೆದ್ದು ಬರುತ್ತಿದ್ದರು. ೧೯೭೫ ರಿಂದ ೧೯೮೫ನೇ ಇಸವಿವರೆಗೆ International decade of Women ಎಂದು ಯುನೈಟೆಡ್ ನೇಷನ್ ಆರ್ಗನೈಸೇಷನ್‌ರವರು ತೀರ್ಮಾನ ಮಾಡಿ ಕಳುಹಿಸಿದ್ದಾರೆ. ಅದು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂತ್ರಿಗಳಿಗೆ ತಿಳಿದಿರಬಹುದೆಂದು ಕಾಣುತ್ತದೆ. ಅವರು ಅದನ್ನು ತಿಳಿದುಕೊಂಡಿರಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ತಂದಿದ್ದಾರೆ. ಇಲ್ಲದೇ ಹೋಗಿದ್ದರೆ ಅವರು ತರುತ್ತಿರಲಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಇದರಿಂದ ಪುರುಷರ ಪ್ರಭಾವ ಕಡಿಮೆಯಾಗುವುದಕ್ಕೆ ಸಾಧ್ಯತೆ ಇದೆ. ಪುಸ್ತಕ ತರಿಸಿನೋಡಿ. ನಾನು ಇದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಕೆಲಸ ಮಾಡುವಂಥ ಮಹಿಳೆಯರಿಗೆ ಯಾವರೀತಿ ಸಂಬಳ ಕಡಿಮೆ ಕೊಡುತ್ತಾರೆ. ಎಷ್ಟು ಜನ ಮಹಿಳಾ ಅಧಿಕಾರಿಗಳು ಇದ್ದಾರೆ? ಅಂಕಿಸಂಖ್ಯೆಗಳೆಲ್ಲಾ ಆ ಪುಸ್ತಕದಲ್ಲಿ ಇವೆ. ಇವತ್ತು ಹೆಣ್ಣು ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರು ಮಹಿಳೆಯರ ವಿಚಾರದಲ್ಲಿ ಎಂದೂ ವಿರೋಧಿ ಅಲ್ಲ. ಅದು ನಮಗೆ ಗೊತ್ತಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಸಾಗರ್‌ರವರು ಅವರ ವಿಷಯಕ್ಕೆ ಬಂದಾಗ ಮಹಿಳೆಯರಿಗೆ ವಿರೋಧಿ.

ಶ್ರೀ ಎ. ಲಕ್ಷ್ಮೀಸಾಗರ್.—ಮದುವೆ ಮಾಡಿಕೊಂಡಿರುವಂಥ ಜನ ಮಹಿಳೆಯರ ಹಿತರಕ್ಷಣೆ ವಿಷಯ ಬಂದಾಗ ಅವರನ್ನು ಅಲ್ಲಿ ಕೂರುಸುತ್ತೇವೆ, ಇಲ್ಲಿ ಕೂರಿಸುತ್ತೇವೆಂದು ಬರೀ ವಾದ ಮಂಡಿಸುತ್ತಾರೆಯೇ ಹೊರತು ಕಾರ್ಯಗತ ಮಾಡುವುದಿಲ್ಲ. ನಾನು ಅವರ ಪರವಾಗಿ ವಕಾಲತ್ತು ವಹಿಸಿ, ಸಮಾಜದಲ್ಲಿ ಮಹಿಳೆಯರನ್ನು ತುಳಿದಿರತಕ್ಕಂಥ ವ್ಯವಸ್ಥೆ ಎದುರಿಸುತ್ತಿದ್ದೇನೆ. ಅವರಿಗೆ ತೊಂದರೆ ಯಾಗಬಾರದು ಎನ್ನುವ ದೃಷ್ಟಿಯಿಂದ ಅವರ ಸಂಪರ್ಕವನ್ನೇ ಬಿಟ್ಟಿದ್ದೇನೆ.

(ನಗು)

ಶ್ರೀ ಎಂ. ರಘುಪತಿ.—ಮಾನ್ಯ ಲಕ್ಷ್ಮೀಸಾಗರ್‌ರವರ ವಾದವನ್ನು ನಾನು ಪುಷ್ಠೀಕರಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಹಿಳೆಯರಿಗೆ ತೊಂದರೆಯಾಗಬಾರದೆಂದು ಅವರ ಸಂಪರ್ಕ ಬಿಟ್ಟಿದ್ದೇನೆಂದು ಮಾನ್ಯ ಮಂತ್ರಿಯವರು ಹೇಳಿದರು. We have to presume something.

SRI A LAKSHMISAGAR.—I cannot produce any evidence to the Contrary.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳಿದ್ದು ಕೂಡ ಅವರ ಕಡೇ ಮಾತಿನ ಅರ್ಥದಲ್ಲಿಯೇ? ವೈಯಕ್ತಿಕ ವಿಷಯಕ್ಕೆ ಬಂದಾಗ ಮಹಿಳೆಯರಿಗೆ ವಿರೋಧ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸಚಿವರು ಹೇಳಿದ್ದು ವಿಷಯಕ್ಕೆ ಸಂಬಂಧಪಟ್ಟಂತೆ ಒಬ್ಬ ಅರ್ಥಶಾಸ್ತ್ರಜ್ಞ ಹೇಳುತ್ತಾನೆ. Those who are married are likely to repent but those who are not married are sure to repent.

SRI A. LAKSHMI SAGAR.—I don't mind.

SRI M. S. KRISHNAN.—Anyway, we need not repent for this 20% reservation being given to women. Whether you repent or not I don't bother.

೨೦ ಪರ್ಸೆಂಟ್ ಮಾಡಿರುವುದು ಸಂತೋಷ. ೧೮ ವರ್ಷ ಮಾಡಿರುವುದು ಸಹ ಹಿಂದಿನ ಕೇಳಿಕೆ. ಯುವಕರ ಬಗ್ಗೆ ಹೇಳುವುದಕ್ಕೆ ಮುಂಚೆ. Amendment to section 7 says thus ;

"For women shall be, as nearly as may be, twenty per cent of the total number of Councillors".

ಇದರಲ್ಲಿ ಎರಡು ಅರ್ಥವಾಗುತ್ತದೆ. ಒಂದು ಕಾರ್ಪೊರೇಷನ್‌ನಲ್ಲಿ ೫೫ ಜನ ಇದ್ದರೆ ೨೦ ಪರ್ಸೆಂಟ್ ಅಂದರೆ ೧೧ ಜನ ಆಗುತ್ತಾರೆ. ೫೭ಜನ ಇದ್ದರೆ ೨೦ ಪರ್ಸೆಂಟ್ ಅಂದರೆ ೧೨.೫ ಆಗುತ್ತಾರೆ, ೧೨.೫ ಮಹಿಳೆಯರನ್ನು ಮಾಡುವುದಕ್ಕಾಗುವುದಿಲ್ಲ. ೧೧ ಮಾಡಬೇಕು; ಇಲ್ಲ ೧೨ ಮಾಡಬೇಕು. ಇಂಗ್ಲೀಷ್ ಭಾಷೆಯ ಬಳಕೆಯಿಂದ ಏನು ಅನುಮಾನವಾಗುತ್ತದೆಂದರೆ ಪರ್ಸೆಂಟೇಜ್ ಕಡಿಮೆ ಮಾಡುವುದಕ್ಕೆ ಅವಕಾಶವಾಗಬಹುದೆಂಬ ಸಂಶಯ ಬರುತ್ತೆ

"As nearly as may be"

It is a loosely worded formualtion.

ಈ ಪದಗಳನ್ನು ಯಾರು ಉಪಯೋಗ ಮಾಡಿದರೋ ನನಗೆ ಗೊತ್ತಿಲ್ಲ.

You kindly put it like this, "If it is more than half, it may be taken as full and if it is less than half it may be taken as zero." ಆ ರೀತಿ ಮಾಡಿದ್ದರೆ ಸರಿಯಾಗಿರುತ್ತಿತ್ತು; ಈ ರೀತಿ ಮಾಡುವುದರಿಂದ ತಪ್ಪು ಅರ್ಥಕ್ಕೆ ಅವಕಾಶ ವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

Sri A. LAKSHMISAGAR.—There is a commitment on the part of the Government. It shall not be less than 20%

ಶ್ರೀ ಎಂ. ಎಸ್. ಕೃಷ್ಣನ್.—ಯುವಕರಿಗೂ ಮತ್ತು ಯುವತಿಯರಿಗೂ ನಗರ ಮತ್ತು ಗ್ರಾಮಗಳಲ್ಲಿ ೧೮ ವರ್ಷ ತುಂಬಿದವರು ಮತದಾನ ಮಾಡಬಹುದೆಂಬುದನ್ನು ಒಪ್ಪಿಕೊಂಡಿದ್ದಾರೆ; ಬಹಳ ಸಂತೋಷ. ನಾವು ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್‌ನಲ್ಲಿ ಬೆಳೆದುಬಂದಂಥ ಜನ. ನಾಗಪುರದಲ್ಲಿ ಸಮ್ಮೇಳನ ಮಾಡಿದಾಗ ೧೯೪೫-೪೬ರಲ್ಲಿ ಒಂದು ನಿರ್ಣಯ ಪಾಸು ಮಾಡಲಾಗಿತ್ತು. ಅದು ಇಲ್ಲಿಯತನಕ ಜಾರಿಗೆ ಬಂದಿರಲಿಲ್ಲ. ಎಲ್ಲಾ ಪಕ್ಷದಲ್ಲಿಯೂ ವಿದ್ಯಾರ್ಥಿಫೆಡರೇಷನ್‌ಗಳು ಇವೆ. ೧೮ ವರ್ಷ ಕೊಟ್ಟಿರುವುದು ಒಳ್ಳೆಯದು. ಆದಷ್ಟು ಬೇಗ ಚುನಾವಣೆಗಳನ್ನು ನಡೆಸಬೇಕು. ಮಾನ್ಯ ಸದಸ್ಯರು ಹರಿಜನರಿಗೆ ವಿರುದ್ಧವಾದ ಅಂಶ ಎಂದು ಹೇಳಿದ್ದಾರೆ; ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಅಂಥಾದ್ದು ಏನು ನನಗೆ ಕಂಡು ಬಂದಿಲ್ಲ. ಒಟ್ಟಿನಲ್ಲಿ ಇದು ಸ್ವಾಗತಾರ್ಹ ವಾದ ಮಸೂದೆ ಯಾದುದರಿಂದ ನಾನು ಒಪ್ಪಿಕೊಳ್ಳುತ್ತೇನೆ.

† ಶ್ರೀ ಜಿ. ಡಿ. ಸೋಮಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ಪುರಸಭೆ ಮತ್ತು ನಗರ ಸಭೆಗೆ ಸಂಬಂಧಪಟ್ಟಂತೆ ತಿದ್ದುಪಡಿಯನ್ನು ಏನು ತಂದಿದ್ದಾರೆ; ಇದರ ಬಗ್ಗೆ ಧರಣಿ ಕೂಡ ಕೂರಬೇಕಾಯಿತು. ಮಾನ್ಯ ಲಕ್ಷ್ಮೀಸಾಗರ್‌ರವರು ವಿರೋಧ ಪಕ್ಷದವರು ಗಲಾಟೆ ಮಾಡುವುದಕ್ಕೋಸ್ಕರ ಇದನ್ನುಮಾಡಿದ್ದಾರೆಂದು ಹೇಳಿದರು. ನಾವು ಧರಣಿ ಕೂತಂತ ಉದ್ದೇಶ ಸರ್ಕಾರ ಪಟ್ಟಣಗಳಲ್ಲಿರುವವರಿಗೆ ಒಂದು ನೀತಿ; ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಒಂದು ನೀತಿ ಮಾಡಿರುವುದರಿಂದ, ಅದನ್ನು ಸರಿಪಡಿಸುವ ಭಾವನೆಯಿಂದ ಧರಣಿ ಕೂರಬೇಕಾಯಿತೇ ಹೊರತು; ಬೇರೆ ದೃಷ್ಟಿಯಿಂದಲ್ಲ; ಇದರ ಬಗ್ಗೆ ತಪ್ಪು ತಿಳಿದು ಕೊಳ್ಳಬಾರದೆಂದು ಹೇಳುತ್ತೇನೆ. ಈ ಮನೆಗೆ ಆರಿಸಿಬಂದಿರುವವರಲ್ಲಿ ಈ ಸಭೆಗೆ ಗೌರವ ಕೊಡುವುದರಲ್ಲಿ ನಾನು ಮೊದಲಿಗ. ರಾಜ್ಯದ ಜನತೆಗೆ ಹಿತರಕ್ಷಣೆಗೋಸ್ಕರ ಧರಣಿ ಮಾಡಲಾಗಿದೆ. ಮಾನ್ಯ ಧರ್ಮಸಿಂಗ್‌ರವರು ಹೇಳಿದಹಾಗೆ ೧೯೮೧ನೇ ಇಸವಿ ಜನಗಣತಿಯನು ಅನುಸರಿಸಿ ಚುನಾವಣೆಯನ್ನು ಮಾಡಿದರೆ ಹೆಚ್ಚಿನ ಜನಗಳಿಗೆ ಅವಕಾಶ ವಾಗುತ್ತದೆ. ಅದನ್ನು ಏತಕ್ಕೋಸ್ಕರ ಕೈಬಿಟ್ಟರೋ ಗೊತ್ತಿಲ್ಲ. ಇವತ್ತು ಸಕಲೇಶಪುರನಗರದಲ್ಲಿ ೧೫ ಸ್ಥಾನಗಳು ಇವೆ. ೧೯೮೧ನೇ ಜನಗಣತಿ ಪ್ರಕಾರ ೨೧ ಸ್ಥಾನಗಳಾಗುತ್ತವೆ. ಇನ್ನು ಹೆಚ್ಚು

ಜನರಿಗೆ ಅನುಕೂಲವಾಗುತ್ತಿತ್ತು. ಇದೇ ರೀತಿ ರಾಜ್ಯದ ಎಲ್ಲಾ ಪುರಸಭೆಗಳಲ್ಲಿಯೂ ನಗರಸಭೆಗಳಲ್ಲಿಯೂ ಸ್ಥಾನಗಳು ಜಾಸ್ತಿ ಯಾಗುತ್ತವೆ. ಆದ್ದರಿಂದ ಸರ್ಕಾರದವರು ಈ ವಿಷಯವನ್ನು ಪುನರ್ವಿಮರ್ಷೆ ಮಾಡುವುದು ಉತ್ತಮವೆಂದು ಹೇಳುತ್ತೇನೆ ಮಹಿಳೆಯರಿಗೆ ೨೦ ಪರ್ಸೆಂಟ್ ತಂದಿದ್ದಾರೆ, ಇನ್ನೂ ೧೦ ಪರ್ಸೆಂಟ್ ಜಾಸ್ತಿ ಮಾಡಲಿ, ಅದಕ್ಕೆ ನಮ್ಮ ವಿರೋಧವಿಲ್ಲವೆಂದು ಹೇಳುತ್ತೇನೆ. ಅಧ್ಯಕ್ಷರೆ, ಹೇಳುವುದು ನೀತಿ ಹಾಕುವುದು ಗಾಣ. ಬರೀ ಲಿಪ್ ಸಿಂಪತಿ ತೋರಿಸಬಾರದು. ಅವರು ಒಂದು ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ. ಈಗ ವಿಧಾನ ಸಭೆಯಲ್ಲಿ ಮಹಿಳಾ ಸಂಖ್ಯೆ ಕಡಿಮೆ ಇದೆ. ಇಬ್ಬರು ಮಹಿಳೆಯರಿಗೆ ಎಂಎಲ್‌ಸಿ ಸ್ಥಾನವನ್ನು ಕೊಟ್ಟು ಮೂರು ಜನರಿಗೆ ಮಂತ್ರಿಗಳನ್ನಾಗಿ ಮಾಡಿದ್ದರೆ ಅವರು ನುಡಿದಂತೆ ನಡೆಯುತ್ತಾರೆ ಎನ್ನುವುದು ಸಾಬೀತಾಗುತ್ತಿತ್ತು. ಅಂತಹ ಕೆಲಸವನ್ನು ಮಾಡದೇ ಮಹಿಳೆಯರ ಬಗ್ಗೆ ಬರೀ ಅನುಕಂಪ ತೋರಿಸುವುದರಿಂದ ಏನೂ ಪ್ರಯೋಜನ ಇಲ್ಲ. ನಮ್ಮ ಕರ್ನಾಟಕದಲ್ಲಿ ಶೇಕಡ ೫೦ ಭಾಗ ಮಹಿಳೆಯರು ಮತದಾನದ ಹಕ್ಕು ಪಡೆದಿರುವಾಗ ಅವರಿಗೆ ಹೆಚ್ಚಿನ ಅವಕಾಶ ಕಲ್ಪಿಸಿಕೊಡಬೇಕು. ಈಗ ಏಕೈಕ ಮಹಿಳಾ ಮಂತ್ರಿಗಳೊಬ್ಬರು ನಮ್ಮ ಕ್ಯಾಬಿನೆಟ್‌ನಲ್ಲಿದ್ದಾರೆ. ಪಾಪ ಅವರು ಒಳ್ಳೆಯ ಮನೆತನದಿಂದ ಬಂದವರು. ಅವರ ತಂದೆಯವರೂ ಸಹ ಒಳ್ಳೆಯ ಸೇವೆಯನ್ನು ಮಾಡಿದವರು. ಅಂತಹವರನ್ನು ತೆಗೆಯಬೇಕೆಂದು ಒಂದು ನೋಟೀಸ್ ಕೊಟ್ಟಿದ್ದಾರೆನ್ನುವ ವಿಚಾರ ಮೊನ್ನೆ ಪತ್ರಿಕೆಯಲ್ಲಿ ಬಂದಿದ್ದನ್ನು ನೋಡಿ ನನಗೆ ಬೇಸರವಾಯಿತು.

ಉಪಾಧ್ಯಕ್ಷರು.—ಮಾನ್ಯ ಸೋಮಪ್ಪನವರು ವಿಷಯಕ್ಕೆ ಬರಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೆ, ಮಹಿಳೆಯರಿಗೆ ಸಂಬಂಧಪಟ್ಟ ವಿಚಾರವನ್ನು ಹೇಳುತ್ತಿದ್ದೇನೆ ಆ ಕೆಲಸವನ್ನು ಅವರು ಯಾವುದೇ ಕಾರಣದಿಂದ ಮಾಡಬಾರದೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಆ ಬಗ್ಗೆ ನಮಗೆ ವಾಗ್ದಾನ ಕೊಡಬೇಕು. ಅವರು ಅಂತಹ ಅಪರಾಧ ಏನೂ ಮಾಡಿಲ್ಲ. ಬಾಕಿ ವಿಚಾರ ನನಗೆ ಗೊತ್ತಿಲ್ಲ. ಕಳೆದ ಸಾರಿ ನಾನು ಮಾತನಾಡಿದಾಗ ಅವರಿಂದ ಎಕ್ಸ್‌ಪ್ಲೈಸ್ ಕಿತ್ತುಕೊಂಡರೆಂದು ಹೇಳಿದ್ದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ವಿಷಯಕ್ಕೆ ಬನ್ನಿ.

ಶ್ರೀ ಜೆ. ಡಿ. ಸೋಮಪ್ಪ.—ಅಧ್ಯಕ್ಷರೆ, ಯಾವಾಗಲೂ ಹೇಳತಕ್ಕವರು ಮೊದಲು ಮಾದರಿಯಾಗಿರಬೇಕು. ಇವೊತ್ತು ಮಹಿಳೆಯರಿಗೆ ಕೊಟ್ಟಿರತಕ್ಕದ್ದರ ಬಗ್ಗೆ ನಾನು ಸ್ವಾಗತ ಮಾಡುತ್ತೇನೆ. ೧೯೮೧ರ ಸೆನ್ಸಸ್ ಪ್ರಕಾರ ಮಾಡಲಿಕ್ಕೆ ಸಾಧ್ಯವಾದಷ್ಟು ಅವರು ಅಮೆಂಡ್‌ಮೆಂಟ್ ತಂದು ತಿದ್ದುಪಡಿ ಮಾಡಿ ಇನ್ನೂ ಹೆಚ್ಚಿನ ಜನರಿಗೆ ಅವಕಾಶ ಮಾಡಿಕೊಡಲಿ ಎಂದು ಹೇಳುತ್ತೇನೆ. ಈಗ ಅಧ್ಯಕ್ಷರು ನಾನು ಮಾತನಾಡಲಿಕ್ಕೆ ಹೆಚ್ಚು ಅವಕಾಶ ಕೊಡುತ್ತಿಲ್ಲ. ಇಷ್ಟು ಕಾಲಾವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ, ನಮ್ಮ ಮಾನ್ಯ ಸದಸ್ಯರು ಬಹಳ ಗಂಭೀರವಾಗಿ ಕೇಳಿದ್ದಾರೆ ಅವರಿಗೂ ಕೂಡ ದಯಾಮಯನಾದ ಭಗವಂತನು ಇದೇ ರೀತಿಯ ಇನ್ನೂ ಹೆಚ್ಚಿನ ಬುದ್ಧಿಯನ್ನು ಕೊಡಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಈ ಮಸೂದೆಯನ್ನು ಏನು ತಂದಿದ್ದಾರೆ ಇದನ್ನು ನಾನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ಸ್ವಾಗತ ಮಾಡುತ್ತೇನೆ. ಮಹಿಳೆಯರಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ಬಹಳ ಜನ ಮಾತನಾಡುತ್ತಿದ್ದರು. ಆದರೆ ಅದು ಕಾರ್ಯಗತ ಮಾಡಲಿಕ್ಕೆ ನಿಶ್ಚಿತ ಮಾಡಿಲ್ಲ. ಏಕೆಂದರೆ ನಮ್ಮಲ್ಲಿ ಸಹಜವಾಗಿ ಹೆಂಗಸರು ಕೀಳು, ಅವರು ಯಾವ ಸ್ಥಾನದಲ್ಲೂ ಬರಬಾರದೆಂದು ಹೇಳತಕ್ಕದ್ದು ನಮ್ಮಲ್ಲಿ ಬಹಳ ಇರುತ್ತದೆ, ಅದರ ಬಗ್ಗೆ ಫೈಟ್ ಮಾಡಬೇಕು. ಅದರ ಬಗ್ಗೆ ಮುಂದೆ ಆದವರು ಫೈಟ್ ಮಾಡುತ್ತಾರೋ ಅಥವಾ ಮುಂದೆ ಆಗದೇ ಇದ್ದವರು ಫೈಟ್ ಮಾಡುತ್ತಾರೋ ಆ ವಿಚಾರಕ್ಕೆ ನಾನು ಹೋಗುವುದಿಲ್ಲ, ಇವೊತ್ತಿನ ದಿವಸ ಇವರಿಗೆ ೩೦ ಪರ್ಸೆಂಟ್ ಇರಬೇಕೆಂದು ಹೇಳಿದ್ದರೆ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ಎರಡನೆಯದು ಯುವ ಜನರಿಗೆ, ಯುವಶಕ್ತಿಗೆ ಪ್ರಾತಿನಿಧ್ಯ ಕೊಡಬೇಕು ಅವರಿಗೂ ಓಟಿನ ಹಕ್ಕು ಕೊಡಬೇಕೆಂದು ಹೇಳಿದ್ದಾರೆ ಇದು ಸ್ವಾಗತ. ಈ ಹಿನ್ನೆಲೆಯಲ್ಲಿ ಹೇಳಬೇಕೆಂದರೆ, ಸುಮಾರು ೧೦-೧೨-೧೮ ವರ್ಷಗಳಿಂದ ನಗರಸಭೆಗಳಿಗೆ, ಪುರಸಭೆಗಳಿಗೆ, ಕಾರ್ಪೊರೇಷನ್

ಗಳಿಗೆ ಚುನಾವಣೆ ನಡೆಯದೇ ಅಧಿಕಾರಿಗಳು ನಡೆಸುತ್ತಿದ್ದುದು ಏನು ಇತ್ತು, ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಇಲ್ಲದೆ, ಯಾವ ಜನರಿಗೆ ಪ್ರಾತಿನಿಧ್ಯ ಇಲ್ಲದೆ ಬ್ಯೂರೋಕ್ರಸಿಯಲ್ಲಿ ಇದುವರೆಗೆ ಏನು ನಡೆದುಕೊಂಡು ಹೋಗುತ್ತಿತ್ತು ಅದು ಇಷ್ಟು ಮುಂದೆ ಬೇಡ ಎಂದು ಹೇಳುತ್ತೇನೆ. ಹಿಂದೆ ೧೯೭೧ರಲ್ಲಿ ಸೆನ್ಸಸ್ ಬಂದಮೇಲೆ ಅವೊತ್ತಿನ ಆಧಾರದ ಮೇಲೆ ಚುನಾವಣೆ ಮಾಡಿದ್ದರೆ ನಮ್ಮ ಮಾನ್ಯ ಮಿತ್ರರು, ನಮ್ಮ ವಿರೋಧ ಪಕ್ಷದವರು ಹೇಳಿದ್ದಕ್ಕೆ ನಾನು ಬೆಲೆ ಕೊಡುತ್ತಿದ್ದೆ. ಆಗ ಹರಿಜನರ ಬಗ್ಗೆ ಏನೂ ಮಾತನಾಡಬೇಕಾದ್ದೆ ಇಲ್ಲ ಎಂದು ಹೇಳುತ್ತಿದ್ದುದು ಸರಿಯಲ್ಲ. ಈಗ ೧೯೮೧ರ ಸೆನ್ಸಸ್ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಈಗ ಚುನಾವಣೆಯನ್ನು ಮಾತ್ರ ಮುಂದಕ್ಕೆ ಹಾಕಬಾರದು. ಈಗ ಚುನಾವಣೆಯನ್ನು ನಡೆಸಿ, ಮತ್ತೆ ಮೂರು ವರ್ಷ ಕಳೆದ ಮೇಲೆ ಚುನಾವಣೆ ಮಾಡಿ, ಆಗ ಎಲ್ಲರಿಗೂ ಅವಕಾಶ ಸಿಕ್ಕುತ್ತದೆ. ಕಾಲಕಾಲಕ್ಕೆ ಚುನಾವಣೆಗಳನ್ನು ಮಾಡಿದರೆ ಅವರವರುಗಳ ಅವಕಾಶ ಅವರುಗಳಿಗೆ ಸಿಕ್ಕುತ್ತದೆ. ಕಳೆದ ೩೦ ವರ್ಷಗಳಿಂದ ಹರಿಜನ ಗಿರಿಜನರ ಬಗ್ಗೆ ಘೋಷಣೆ ಹೇಳಿ ಯಾರು ಸುಲಿಗೆ ಮಾಡುತ್ತಿದ್ದರು ಆ ಒಂದು ಪಕ್ಷದವರು ಹರಿಜನ ಗಿರಿಜನರ ಬಗ್ಗೆ ಪ್ರಸ್ತಾಪ ಮಾಡುವುದು ಸರಿಯಲ್ಲ. ಏಕೆಂದರೆ ಇವೊತ್ತು ನನಗೆ ಗೊತ್ತು ತಾತಾಗುಣಿ ಎಸ್ಟೇಟ್‌ನಲ್ಲಿ ಹರಿಜನ ಗಿರಿಜನರು ೫ ರೂಪಾಯಿ ಕೂಲಿಗೆ ಹೋದಾಗ ಅವರು ಜೈಲಿಗೆ ಹೋಗಿದ್ದಾರೆ. ಆ ಸಂದರ್ಭದಲ್ಲಿ ಹರಿಜನ ಗಿರಿಜನ ಹೆಣ್ಣುಮಕ್ಕಳೆಲ್ಲರೂ ಜೈಲಿನಲ್ಲಿದ್ದರು. ಅದೆಲ್ಲಾ ಕಾಂಗ್ರೆಸ್ ರಾಜ್ಯದಲ್ಲಿ ನಡೆದದ್ದು. ಹರಿಜನರ ಮೇಲೆ ಅನೇಕಬಾರಿ ಗೋಲಿಬಾರ್ ಆಗಿದೆ. ಕಳೆದ ೩೦ ವರ್ಷಗಳಲ್ಲಿ ಹರಿಜನ ಗಿರಿಜನರಿಗೆ ಸಿಕ್ಕಬೇಕಾದಂಥ ಭೂಮಿ ಅವರುಗಳಿಗೆ ಇನ್ನೂ ಸಿಕ್ಕಿಲ್ಲ. ಇವೊತ್ತು ಹರಿಜನ ಗಿರಿಜನರ ಬಗ್ಗೆ ಮೊಸಳೆ ಕಣ್ಣೀರು ಮಾಡಿ ಹರಿಜನ ಗಿರಿಜನರಿಗೆ ಮೋಸ ಮಾಡುವುದು ಕಾಂಗ್ರೆಸ್ ಪಕ್ಷಕ್ಕೆ ಬೇಡ ಎಂದು ಹೇಳುತ್ತೇನೆ, ಇವೊತ್ತು ಹರಿಜನ ಗಿರಿಜನರ ಸಂಘಟನೆಯಾಗಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಖರ್ಗೆಯವರು ಕಾಂಗ್ರೆಸ್ ಬಿಟ್ಟು ಹರಿಜನರನ್ನು ಸಂಘಟನೆ ಮಾಡಲಿಕ್ಕೆ ಗ್ರಾಮಾಂತರ ಪ್ರದೇಶಕ್ಕೆ ಬಂದು ಕೃಷಿ ಕಾರ್ಮಿಕರನ್ನು ಸಂಘಟನೆ ಮಾಡಿ ಆಗ ಮಾತನಾಡಲಿ. ಇವೊತ್ತು ನಮ್ಮ ಧರ್ಮಸಿಂಗ್ ಅವರು ಹರಿಜನ ಗಿರಿಜನರ ಬಗ್ಗೆ ಮಾತನಾಡಲಿಕ್ಕೆ ಯಾವ ಹಕ್ಕು ಇಲ್ಲ.

ಶ್ರೀ ಧರ್ಮಸಿಂಗ್.— ಮಾನ್ಯ ಸೂರ್ಯನಾರಾಯಣರಾವ್ ಅವರು ಇದೇ ರೀತಿ ಇನ್ನೆಷ್ಟು ಮಾತನಾಡಿದರೂ ಏನೂ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ನಾವು ಏನಾದರೂ ಹೇಳಿದರೆ ಅವರಿಗೆ ಸ್ವಲ್ಪ ತೊಂದರೆಯಾಗುತ್ತದೆ. ಈ ದೇಶದಲ್ಲಿ ಸಾವಿರಾರು ವರ್ಷಗಳಿಂದಲೂ ಶೋಷಣೆ ಏನು ಆಗುತ್ತಿತ್ತು ಅದಕ್ಕೆ ಅನೇಕ ಜನರು ಕಲಿತವರು ಇದ್ದರೂ ಏನೂ ಮಾಡಲಿಲ್ಲ. ಕೊನೆಗೆ ಯಾರು ಮಾಡಿದರು ಅಂದರೆ ಡಾ. ಅಂಬೇಡ್ಕರ್ ಅವರು ಬಂದಮೇಲೆ ರಿಸರ್ವೇಷನ್ ಆಯಿತು. ಅದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಅವರು ರಾಜಕೀಯ ಮಾಡಲಿಕ್ಕೆ ಹೋಗಬಾರದು.

(ಗೊಂದಲ)

ಉಪಾಧ್ಯಕ್ಷರು.— ಮಾನ್ಯ ಸದಸ್ಯರೆಲ್ಲರೂ ಈ ರೀತಿ ಮಾತನಾಡಿದರೆ ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು.— ಅಧ್ಯಕ್ಷರೆ, ನಾವು ಮಾತನಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಬುದ್ಧಿವಾದ ಹೇಳಿದರು. ಬಹಳ ಸಂತೋಷವಾಯಿತು. ಆದರೆ, ನಮ್ಮ ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ಅಡ್ಡ ಮಾತನಾಡುತ್ತಾರೆ ಎನ್ನುವ ರೀತಿಯಲ್ಲಿ ಪರೋಕ್ಷವಾಗಿ ಬುದ್ಧಿಯನ್ನು ಹೇಳಿದರು. ನಾವು ಹೆಚ್ಚು ಕಡಿಮೆ ಮಾತನಾಡಿರಬಹುದೆಂದು ಸುಮ್ಮನೆ ಕುಳಿತುಕೊಂಡೆವು. ಈಗ ಮಾನ್ಯ ಸೂರ್ಯನಾರಾಯಣರಾವ್ ಅವರು ಮಾತನಾಡುತ್ತಿರಬೇಕಾದರೆ, ಮಾಜಿ ಮಂತ್ರಿಗಳು ಎದ್ದು ದೊಡ್ಡ ಗಂಟಲಿನಲ್ಲಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್ ಅವರು ನನ್ನ ಹೆಸರನ್ನು ಹೇಳಿ ಏನೋ ಮಾತನಾಡಿದರು. ಅದಕ್ಕೋಸ್ಕರ ನಾನು ಈಗ ಎದ್ದು ನಿಲ್ಲಬೇಕಾಯಿತು. ಅವರು ಗಲಾಟೆಯಲ್ಲಿ ಏನು ಹೇಳಿದರೋ ಸರಿಯಾಗಿ ಕೇಳಿಸಲಿಲ್ಲ. ಮಾನ್ಯ ಎಂ. ಎಸ್. ಕೃಷ್ಣನ್‌ರವರು ಹರಿಜನರ

ಬಗ್ಗೆ ಮೊಸಳೆ ಕಣ್ಣೀರು ಸುರಿಸುವಂತೆ ಒಂದು ಪಕ್ಷ ಮಾಡಿದ್ದಾರೆ ಎನ್ನುವ ರೀತಿಯಲ್ಲಿ ಅದೇನೇನೋ ಮಾತನಾಡಿದರು ಅದು ಅರ್ಥವಾಗಲಿಲ್ಲ. ಇವೊತ್ತು ಹರಿಜನರ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆ, ಅದಕ್ಕಿಂತಲೂ ಹೆಚ್ಚಿಗೆ ಕಳಕಳಿ ನಮಗೂ ಇದೆ. ನಾವು ವರ್ಗ ಹೋರಾಟದಲ್ಲಿ ನಂಬಿಕೆ ಇರುವಂಥ ಜನ, ವರ್ಗಗಳು ನಿರ್ನಾಮವಾದರೆ ಈ ರೀತಿಯ ಜಾತಿ ಮತಗಳ ವ್ಯಸನ್ಯ ಹೋಗುತ್ತದೆಂದು ದುಡಿಯುತ್ತಿದ್ದೇವೆ. ಇವೊತ್ತು ಕೃಷಿ ಕಾರ್ಮಿಕರ ಸಂಘಟನೆಯನ್ನು ನಾವೇ ಹೆಚ್ಚು ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ಶೇಕಡ ೨೭ರಷ್ಟು ಕೃಷಿ ಕಾರ್ಮಿಕರು ಇದ್ದರೆ, ಅದರಲ್ಲಿ ಇಪ್ಪತ್ತಾರೂವರೆಯಷ್ಟು ಜನ ಹರಿಜನರು ಎನ್ನುವುದನ್ನು ಒಪ್ಪಿಕೊಳ್ಳಬಹುದು. ಅಂತಹವರ ಬಗ್ಗೆ ನಾವು ಸಂಘಟನೆ ಮಾಡಿ ಅವರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ಅವರ ಪರವಾಗಿ ಯಾವುದೇ ಮಸೂದೆ ಬಂದರೂ ನಾವು ಬೆಂಬಲ ಕೊಡುತ್ತೇವೆಂದು ಹೇಳುತ್ತೇನೆ.

೫-೦೦ ಪಿ. ಎಂ.

ಶ್ರೀ ಎಸ್. ಸೂರ್ಯನಾರಾಯಣರಾವ್.— ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಈ ಮಸೂದೆಯ ಬಗ್ಗೆ ಮಾತನಾಡುತ್ತಾ reactionery ಮಸೂದೆ ಪ್ರತಿಗಾಮಿಗಳು ಮಾಡಿದ್ದಾರೆ ಎಂದು ನನ್ನ ಪಾರ್ಟಿಗೆ...

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ...

ಉಪಾಧ್ಯಕ್ಷರು.— ಧರ್ಮಸಿಂಗ್‌ರವರೆ, ದಯವಿಟ್ಟು ಮಧ್ಯೆ ತಾವು ಪ್ರವೇಶ ಮಾಡಬೇಡಿ. ವಿವರಣೆ ಬೇಕಾದರೆ ಅನಂತರ ತಾವು ಕೇಳಿ. ಈ ರೀತಿ ಆದರೆ ನಾವು ಸಭೆಯನ್ನೇ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.— ಕೃಷಿ ಕಾರ್ಮಿಕರನ್ನು ಬಂಗಾಳದಲ್ಲಿ, ಕೇರಳದಲ್ಲಿ ಲಕ್ಷಗಟ್ಟಲೆ ಜನರನ್ನು ಸಂಘಟನೆ ಮಾಡಿ ನಾವು ಕೆಲಸ ಮಾಡುತ್ತಿದ್ದೇವೆ. ಇದು ಪ್ರತಿಗಾಮಿಯಾಗಿದ್ದದ್ದರೆ ನಾವು ಬೆಂಬಲವನ್ನು ಕೊಡುತ್ತಿರಲಿಲ್ಲ. ನಾವು ಜಾತಿವಾದಿಗಳಲ್ಲ ಮಾನ್ಯ ಸದಸ್ಯರಾದ ಖರ್ಗೆಯವರಿಗಿಂತ ಮುಂಚಿನಿಂದಲೂ ನಾವು ರಾಜಕೀಯದಲ್ಲಿದ್ದೇವೆ. ರೈತರು ಮತ್ತು ಕಾರ್ಮಿಕರ ಸಂಘಟನೆ ಮಾಡುತ್ತೇವೆ. ಚುನಾವಣೆಯಲ್ಲಿ ಗೆದ್ದು ಕೇವಲ ಪಾರ್ಲಿಮೆಂಟ್‌ನಿಂದ ಇಲ್ಲಿಗೆ ಬಂದವರಲ್ಲ. ಇವತ್ತು ಕೃಷಿ ಕಾರ್ಮಿಕರ ಮೇಲೆ ಏನು ಧಾಳಿಯಾಗುತ್ತಿದೆ ಅದನ್ನು ವಿರೋಧ ಮಾಡಿದರೆ ಉತ್ತಮ. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಇವತ್ತು ನಮ್ಮ ಹರಿಜನರಮೇಲೆ ಈ ವಿರೋಧಪಕ್ಷದವರು ಮಾಡುತ್ತಿದ್ದಾರೆ. ಸಂದರ್ಭ ಬಂದಾಗ ನಾನು ಹೇಳುತ್ತೇನೆ. ಆದರೆ, ಈಗ ಅದನ್ನು ಹೇಳುವುದು ಸರಿಯಲ್ಲ, ಈಗ ಈ ಮಸೂದೆಯನ್ನು ನಾವು ಸ್ವಾಗತ ಮಾಡುತ್ತೇವೆ. ಚುನಾವಣೆಯನ್ನು ಯಾವ ಕಾರಣದಿಂದಲೂ ಮುಂದೂಡಬಾರದು, ನಡೆಸಲೇಬೇಕು. ಇಲ್ಲಿ ಮಿಯಂ ಎನ್ನುವ ಪದವನ್ನು ಏನು ಹೇಳಿದ್ದಾರೆ ಇದನ್ನು ವಕೀಲರು ಹೇಳಿದ್ದಾರೆ. ಕಾನೂನು ಇಲಾಖೆಯವರು ಹೇಳಿದ್ದಾರೆ ಎಂದು ಇದನ್ನು ಮಿಸ್‌ಯೂಸ್ ಮಾಡಿಕೊಳ್ಳಬಾರದು. ೨೦ ಪರ್ಸೆಂಟ್ ಅಂದರೆ ೨೦ ಪರ್ಸೆಂಟೇ ಇರಬೇಕು, ೧೮ ಪರ್ಸೆಂಟ್ ಇರುವುದು ೧೬ ಪರ್ಸೆಂಟ್ ಆಗಬಾರದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುವಾಗ ಕಾಂಗ್ರೆಸ್ ಪಕ್ಷದವರಿಂದ ಹರಿಜನರ ಮೇಲೆ ಅನ್ಯಾಯವಾಗುತ್ತಿದೆ ಎನ್ನುವ ಪದವನ್ನು ಹೇಳಿದ್ದಾರೆ. ಅದನ್ನು ರೆಕಾರ್ಡ್‌ನಿಂದ ತೆಗೆದುಹಾಕಬೇಕು. ಏಕೆಂದರೆ ಅದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಮಾನ್ಯ ಸದಸ್ಯರಾದ ಸೂರ್ಯನಾರಾಯಣರಾವ್‌ರವರು ಹೇಳಿದರು, ಕಾಂಗ್ರೆಸ್(ಐ) ಪಕ್ಷದಿಂದ ನನ್ನ ಕ್ಷೇತ್ರದಲ್ಲಿ ಹರಿಜನರ ಮೇಲೆ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕು. ಇಲ್ಲದಿದ್ದರೆ ಅವರು ಅದನ್ನು ಸಾಬೀತು ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಅದು ಆಗಿರುವುದರಿಂದ ಹೇಳಿದ್ದಾರೆ. ಅದನ್ನು ಏತಕ್ಕೆ ತೆಗೆದು ಹಾಕಬೇಕು? ಅದು ಅನ್ ಪಾರ್ಲಿಮೆಂಟರಿ ಏನೂ ಅಲ್ಲವಲ್ಲಾ?

(ಗೊಂದಲ)

ಸ್ವಾಮಿ, ಇವರು ಸೋತಮೇಲೆ ಬುದ್ಧಿ ಚುರುಕಾಗುತ್ತದೆಂದು ನಾನು ಅಂದುಕೊಂಡಿದ್ದೆ ಆದರೆ ಇವರ ಗಂಟಲು ಮಾತ್ರ ಚುರುಕಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಾಲಪ್ಪನವರೇ ಸ್ವಲ್ಪ ಸುಮ್ಮನೆ ಇರಿ. ಚುನಾವಣೆ ಬರುತ್ತದೆ.

(ಗೊಂದಲ)

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ, ೧೯೭೬ನೇ ಇಸವಿಯಲ್ಲಿ ತಂದ ಸುಮಾರು ೪೫೦ ಸೆಕ್ಷನ್ ಇರತಕ್ಕ ಕಾನೂನಿನಲ್ಲಿ ಕೇವಲ ೭ ಸೆಕ್ಷನ್‌ಗಳಿಗೆ ಮಾತ್ರ ಇಲ್ಲಿ ತಿದ್ದುಪಡಿಯನ್ನು ತಂದಿರತಕ್ಕದ್ದು. ಮೂಲ ಕಾನೂನಿನಲ್ಲಿ ಏನಿದೆ ಅದೆಲ್ಲಾ ಇಲ್ಲಿದೆ. ಕೆಲವು ಅಂಶವನ್ನು ಮಾತ್ರ ಮಾನ್ಯ ಧರ್ಮಸಿಂಗ್ ರವರು ಇಲ್ಲಿ ಪ್ರಸ್ತಾಪ ಮಾಡಿದರು. ಅದರಲ್ಲಿ ಒಂದು ಪ್ರಮುಖವಾದ ಅಂಶವನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಒಂದು ವಿಷಯವನ್ನು ಹೇಳಿದರು. 3. Amendment of Section 21.—(1A) : No notification under sub-section (1) shall be called in question in any court of law. ಇದು ನಮ್ಮ ಅನುಭವದಿಂದ ಅವಶ್ಯಕವಾಗಿ ಬೇಕಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಏಕೆಂದರೆ ಹಿಂದೆ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳ ಚುನಾವಣೆಯನ್ನು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಾಗ, ನೋಟಿಫಿಕೇಷನ್ ಕೊಟ್ಟಾಗ ಇಲ್ಲಸಲ್ಲದ ಕಾರಣಕ್ಕೆ ಹೈಕೋರ್ಟಿಗೆ ಹೋಗಿ ಚುನಾವಣೆಗಳನ್ನು ಮುಂದೂಡಿದ್ದು ತಮಗೇ ಗೊತ್ತಿದೆ. ಮತ್ತೆ ಅದೇರೀತಿ ಇದು ಮುಂದಕ್ಕೆ ಹೋಗಬಾರದೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿರುವುದು ಸ್ವಾಗತಾರ್ಹ.

ಇನ್ನು ಎರಡನೆಯದಾಗಿ ಹಿಂದೆ ಗೋಕಾಕ್ ವರದಿಯನ್ನು ಒಪ್ಪಿಕೊಂಡಾಗ ನಾನು ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೆ. ನಿಜವಾಗಿಯೂ ಗೋಕಾಕ್ ವರದಿಯನ್ನು ಜಾರಿಗೆ ತರಬೇಕೆಂಬ ಅಭಿಪ್ರಾಯ ನಿಮಗೆ ಇರುವುದಾದರೆ ಇದನ್ನು ಕಾನೂನಾಗಿಯೇ ಮಾಡಿ ಮತ್ತು ಕೋರ್ಟಿನಲ್ಲಿ ಪುನಃ ಇದು ಪ್ರಶ್ನೆ ಮಾಡದ ರೀತಿಯಲ್ಲಿ ಇರಬೇಕು, ಇಲ್ಲವೇ ಹೈಕೋರ್ಟ್‌ನಲ್ಲಿ ಕೇವಿಯಟ್ ಆದರೂ ಹಾಕಬೇಕೆಂದು ನಾನು ಅವತ್ತೇ ಹೇಳಿದ್ದೆ. ಅಂದಿನ ಕಾನೂನು ಮಂತ್ರಿಗಳು ಅದನ್ನು ಒಪ್ಪಿ ಕೊಂಡಿದ್ದರೂ ಅದನ್ನು ಮಾಡದೇ ಹೋದ ಪರಿಣಾಮ ಇವತ್ತು ನಾವು ಈ ಕಾನೂನನ್ನು ಜಾರಿಗೆ ತಂದಿದ್ದರೂ ನೀನು ಸತ್ತಹಾಗೆ ಮಾಡು, ನಾನು ಅತ್ತಹಾಗೆ ಮಾಡುತ್ತೇನೆ ಎನ್ನುವ ರೀತಿ ಆಗಿದೆ. ಇಂದು ಈ ಗೋಕಾಕ್ ವರದಿ ನೆನೆಗುದಿಗೆ ಬೀಳಲು ಕಾರಣವಾದರೂ ಏನೆಂದು ನಾನು ಕೇಳಬೇಕಾಗಿದೆ. ಹೀಗೆ ನೀವು ಮಾಡತಕ್ಕ ಕಾನೂನುಗಳು ಯಾವುದಾದರೊಂದು ಹಿಂಬಾಗಿಲಿನಿಂದ ಹೋಗಿ ಅವು ಕಾರ್ಯ ರೂಪಕ್ಕೆ ಬಾರದ ರೀತಿಯಲ್ಲಿ ಆಗಬಾರದೆಂಬ ದೃಷ್ಟಿಯಿಂದ ಈ ಮಸೂದೆಯ ಒಂದು ವಿಧಿಯನ್ನು ಇಲ್ಲಿ ತಂದಿರುವುದು ಸ್ವಾಗತಾರ್ಹವೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ ಹರಿಜನ ಗಿರಿಜನರ ಬಗ್ಗೆ ಅವರು ಹೇಳಿದರು, ಅದು ಸೆಕ್ಷನ್ ೭ರ ಹಿಂದಿನ ತಿದ್ದುಪಡಿಯಲ್ಲಿ ಏನಾಗಿದೆ ಎಂದರೆ ೭ರಲ್ಲಿ (ಬಿ) ಕ್ಲಾಸ್ ನ್ನು ಸೇರಿಸಿ ಶೇಕಡ ೨೦ ರಷ್ಟು ಅಂತ ಹೇಳಿದ್ದಾರೆ. ಹಿಂದೆ ಏನಿತ್ತು ಅದು ೨ (ಎ) ಮೂಲದಲ್ಲಿದೆ. ಅದು ತಿದ್ದುಪಡಿಯಾಗಿಲ್ಲ.

2 (a) for the Scheduled Castes and the Scheduled tribes shall bear as nearly as may be, the same proportion to the total number of seat in the corporation as the population of the scheduled castes and the scheduled tribes in city bears to the total population of the city; ಈ ಸಿಟಿ ಕಾರ್ಪೊರೇಷನ್‌ಗೆ ಎಷ್ಟು ಸೀಟು ಇರತಕ್ಕದ್ದು ಎಂಬುದನ್ನು ರೂಲ್ಸ್ ಪ್ರಕಾರ ಮಾಡಲಾಗುತ್ತದೆ. ನೂರಕ್ಕೆ ಎಂಭತ್ತು ಎಂದು ಮಾಡಿದರೆ ಅದಕ್ಕನುಗುಣವಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಸೀಟೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚಿಗೆಯಾಗುತ್ತದೆ. ಅದು ಕಡಿಮೆಯಾಗುವುದಿಲ್ಲ. ಇದರಲ್ಲಿ ಹರಿಜನರಿಗೆ ಅನ್ಯಾಯ ವಾಗುವುದಿಲ್ಲ.

ಶ್ರೀ ಧರ್ಮಸಿಂಗ್.—೧೯೮೧ರ ಸೆನ್ಸಸ್ ಪ್ರಕಾರ ಮಾಡಿದರೆ ಹೆಚ್ಚಿನ ಜನರಿಗೆ ಪ್ರಾತಿನಿಧ್ಯ ಸಿಕ್ಕುತ್ತದೆಂದು ಹೇಳಿದ್ದೇವೆ.

ಶ್ರೀ ಹೆಚ್. ಗಂಗಾಧರನ್.—ಇದು ಪ್ರಾತಿನಿಧ್ಯ ಸಿಕ್ಕುವುದು ಹೇಗೆಂದರೆ, ನೀವು ಎಷ್ಟು ಮತ ಕ್ಷೇತ್ರಗಳನ್ನು ಮಾಡುತ್ತೀರೋ ಅದರ ಮೇಲೆ ಹೋಗುತ್ತದೆ. ಇಂಥ ಏರಿಯಾದಲ್ಲಿ ಇಷ್ಟು ಮತ ಕ್ಷೇತ್ರಗಳನ್ನು ಮಾಡಬೇಕೆಂದು ಮೂಲ ಕಾನೂನಿನಲ್ಲಿದೆ. ಮತ ಕ್ಷೇತ್ರಗಳ ಸಂಖ್ಯೆಗನುಗುಣವಾಗಿ ಹರಿಜನರಿಗೆ ರಿಸರ್ವೇಷನ್ ಇರುತ್ತದೆ. ಈಗ ಹೆಚ್ಚಿಗೆ ಮಾಡಿದ್ದೇನೆಂದರೆ ಸೆಕ್ಷನ್ ಒನ್ನು ಅಮೆಂಡ್ ಮಾಡಿ ನೂರಕ್ಕೆ ೨೦ರಷ್ಟು ಸೀಟುಗಳನ್ನು ಹೆಣ್ಣುಮಕ್ಕಳಿಗೆ ಕೊಡಬೇಕೆಂದು ಮಾಡಿದೆ. ಹರಿಜನಗಿರಿಜನರಿಗೆ ಏನೂ ಕೊರತೆಯಾಗಿಲ್ಲ. ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಇದು ಎಲ್ಲರ ದೃಷ್ಟಿಯಿಂದ ಸ್ವಾಗತಾರ್ಹ. ಒಂದು ವಿಷಯ ಏನೆಂದರೆ ಶ್ರೀಮತಿ ಇಂದಿರಾಗಾಂಧಿಯವರೇ ಬಹಳ ವರ್ಷಕಾಲ ಪ್ರಧಾನ ಮಂತ್ರಿಗಳಾಗಿದ್ದರೂ ಅವರು ಹೆಣ್ಣುಮಕ್ಕಳಿಗೆ ಕೊಡದೇ ಇದ್ದ ಪ್ರಾತಿನಿಧ್ಯವನ್ನು ಈ ಸರ್ಕಾರ ಕೊಟ್ಟಿದ್ದು ಒಂದು ಸ್ವಾಗತಾರ್ಹ ವಿಷಯ.

ಇನ್ನು ಎರಡನೆಯದಾಗಿ ನಮ್ಮ ಆಳುವ ಪಕ್ಷದಲ್ಲಿ ಆರಿಸಿಬಂದ ಒಬ್ಬ ಹೆಣ್ಣುಮಗಳನ್ನು ನಾವು ಮಂತ್ರಿಯನ್ನಾಗಿ ಮಾಡಿದೆವು. ಆದರೆ ನಿಮ್ಮ ಪಕ್ಷದಲ್ಲಿ ಆರಿಸಿಬಂದ ಹೆಣ್ಣುಮಗಳನ್ನು ಲೀಡರ್ ಆಗಿ ಕೂಡ ಮಾಡಲಿಲ್ಲವಲ್ಲಾ? ಇನ್ನೇನು ನೀವು ಹೆಂಗಸರಿಗೆ ಪ್ರಾತಿನಿಧ್ಯವನ್ನು ಕೊಡುತ್ತೀರಿ?

ಶ್ರೀ ಕೆ.ಪಿ. ಶಾಂತಮೂರ್ತಿ.—ನೀವು ಆ ಹೆಣ್ಣುಮಗಳನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದ್ದಿದ್ದರೆ ನಾವು ನಮ್ಮ ಪಕ್ಷದ ಹೆಣ್ಣು ಮಗಳನ್ನು ನಾಯಿಕೆಯನ್ನಾಗಿ ಮಾಡುತ್ತಿದ್ದೆವು.

ಶ್ರೀ ಧರ್ಮಸಿಂಗ್.—ಆ ಹೆಣ್ಣುಮಗಳಿಗೆ ಖಾತೆ ಕೊಟ್ಟು ಯಾವ ರೀತಿ ಅವಮಾನ ಮಾಡಿದ್ದೀರೆಂಬುದು ರಾಜ್ಯದಲ್ಲಿ ಎಲ್ಲರಿಗೂ ಗೊತ್ತಿದೆ.

ಶ್ರೀ ಹೆಚ್. ಗಂಗಾಧರನ್.—ಅವರೂ ಬಹಳ ಖುಷಿಪಟ್ಟಿದ್ದಾರೆ. ಖಾತೆಗಳನ್ನು ಹಂಚಿಕೆ ಮಾಡುವ ವಿಚಾರದಲ್ಲಿ ಅವರೂ ಭಾಗಿಗಳಾಗಿ ಸಂತೋಷದಿಂದಲೇ ಮಾಡಿದ್ದಾರೆ. ಇನ್ನು ಓಟರು ಲಿಸ್ಟ್ ವಿಚಾರದಲ್ಲಿ ಸರ್ಕಾರ ಎಚ್ಚರಿಕೆಯನ್ನು ವಹಿಸಬೇಕೆಂದು ನಾನು ಮುನ್ನೆಚ್ಚರಿಕೆಯನ್ನು ಕೊಡುತ್ತಿದ್ದೇನೆ. ಏಕೆಂದರೆ, ಈ ಸಾರಿ ೮೨ನೇ ಇಸವಿಯಲ್ಲಿ ನಡೆದಂಥ ಚುನಾವಣೆ ಸಂದರ್ಭದಲ್ಲಿ ನಾನು ನೋಡಿದ್ದೇನೆ. ಯಾವ ಕಾರಣದಿಂದ ಮಾಡಿದರೋ ಏನೋ ಗೊತ್ತಿಲ್ಲ. ನಗರದಲ್ಲಿ ಎಲ್ಲೆಲ್ಲಿ ವಿರೋಧ ಪಕ್ಷದವರಿಗೆ ಖಚಿತವಾಗಿ ಮತ ಸಿಕ್ಕಿ ಅವರು ಆಯ್ಕೆಯಾಗುತ್ತಾರೆಂದು ಹಿಂದಿನ ಆಡಳಿತ ಪಕ್ಷದವರಿಗೆ ಗೊತ್ತಿತ್ತೋ ಅಂಥ ಏರಿಯಾ. ಏರಿಯಾಗಳನ್ನೇ ಸಂಪೂರ್ಣವಾಗಿ ಬಿಟ್ಟುಬಿಟ್ಟರು. ಯಾವ ಉದ್ದೇಶದಿಂದ ಈ ರೀತಿ ಬಿಟ್ಟರೋ ಗೊತ್ತಿಲ್ಲ. ಸರ್ಕಾರದ ಆದೇಶದ ಮೇರೆಗೆ ಬಿಟ್ಟರೋ ಅಥವಾ ಬೇರೆ ಯಾವ ಉದ್ದೇಶದಿಂದ ಬಿಟ್ಟರೋ ಗೊತ್ತಿಲ್ಲ. ಇದು ಅವರಿಗೂ ಅನುಭವ ಇದೆ. ವಾಸ್ತವವಾಗಿ ಓಟರು ಲಿಸ್ಟ್‌ನಲ್ಲಿ ಬಿಟ್ಟಿರತಕ್ಕ ಎಲ್ಲ ಓಟುಗಳನ್ನೂ ಸೇರಿಸಿದ್ದಿದ್ದರೆ ಖಂಡಿತವಾಗಿ ಇವರು ಇಷ್ಟೊಂದು ಜನ ಇಲ್ಲಿಗೆ ಸದಸ್ಯರಾಗಿ ಬರುತ್ತಿರಲಿಲ್ಲ. ಹಿಂದೆ ಆದುದು ಆಗಿಹೋಯಿತು. ಈಗಿನ ಸರ್ಕಾರವಾದರೂ ಎಚ್ಚರಿಕೆಯನ್ನು ತೆಗೆದುಕೊಂಡು ಹಿಂದಿನ ರೀತಿಯಲ್ಲಿ ಆಗದಂತೆ ನೋಡಿಕೊಂಡು ಓಟರು ಲಿಸ್ಟ್‌ನಲ್ಲಿ ಎಲ್ಲರನ್ನೂ ಸೇರಿಸತಕ್ಕ ವ್ಯವಸ್ಥೆ ಮಾಡಬೇಕು. ಕಾನೂನು ಪ್ರಕಾರ ೧೮ ರಿಂದ ೨೧ ವರ್ಷದವರೆಗಿರತಕ್ಕವರನ್ನು ಮಾತ್ರ ಮತದಾರರ ಪಟ್ಟಿಯಲ್ಲಿ ಸೇರಿಸುವುದಕ್ಕೆ ಅವಕಾಶ ಇದೆ. ಆದರೆ ಅದೇ ಅರ್ಜಿಯನ್ನು ಕೊಟ್ಟು ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ಕಾನೂನು ಇಲ್ಲವೆಂದು ಇಷ್ಟು ಮಾತ್ರ ಹೇಳಬಯಸುತ್ತೇನೆ.

ಬಹುಶಃ ನಿಜಕ್ಕೂ ಈ ಪ್ರಜಾಪ್ರಭುತ್ವ ಉಳಿಯಬೇಕು. ಇದನ್ನು ಅವರೂ ಕೂಡ ಒಪ್ಪಿಕೊಳ್ಳುತ್ತಾರೆ. ಕಂಪಲ್‌ಸರಿ ಓಟಿಂಗ್ ಇದ್ದಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಆದರೆ ಅವರು ಒಪ್ಪಿಕೊಳ್ಳುವುದಿಲ್ಲವೆಂದು ನನಗೆ ಗೊತ್ತಿದೆ. ಮುಂದೆ ಯಾರಾದರೂ ವೆಲ್‌ಕಮ್ ಮಾಡುವುದಾದರೆ ಬಹಳ ಸಂತೋಷ ಆ ದೃಷ್ಟಿಯಿಂದ ಒಂದು ಒಳ್ಳೆಯ ಕೆಲಸ ಮಾಡಬೇಕು. ೧೮ ವರ್ಷದವರೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾವು ವಾದ ಮಾಡುವುದರಲ್ಲಿ ಏನು ಪ್ರಯೋಜನವಿಲ್ಲ. ಅದಕ್ಕೋಸ್ಕರವಾಗಿ ಇದೇ ಒಂದು ನೆಪದಲ್ಲಿ ಚುನಾವಣೆಯನ್ನು ಮುಂದೆ ಹಾಕಬಾರದು. ಗ್ರಾಮಾಂತರ ಪ್ರದೇಶಗಳಲ್ಲೂ ಇದನ್ನು ತರಲಿಕ್ಕೆ ನಮ್ಮ ಪಕ್ಷದ ವತಿಯಿಂದ ಸಹಾಯ ಮಾಡಿದ್ದೇವೆ. ಸರ್ಕಾರಕ್ಕೂ ಕೂಡ ಪತ್ರ ಬರೆದಿದ್ದೇವೆ. ಅನೇಕ ಮಿತ್ರರೂ ಕೂಡ ಒಪ್ಪಿಕೊಂಡಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಗ್ರಾಮ ಪಂಚಾಯತಿಗಳು, ತಾಲ್ಲೋಕ್ ಬೋರ್ಡ್‌ಗಳಿಗೂ ೧೮ ವರ್ಷಗಳು ಇರಬೇಕು. ಸರ್ಕಾರ ಒಪ್ಪಿಕೊಂಡಿರತಕ್ಕಂಥದ್ದನ್ನು

ಸ್ವಾಗತ ಮಾಡಿ ೧೮ ವರ್ಷಕ್ಕೆ ಓಟ್ ಮಾಡತಕ್ಕಂಥ ಅವಕಾಶ ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಕೆಂಪೇಗೌಡ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ ಈಗ ತಂದಿರತಕ್ಕಂಥ ಮಸೂದೆ ಏನು ಇರುತ್ತದೆ ಇದು ಒಂದು ಪ್ರಗತಿಪರವಾದ ಮಸೂದೆಯಾಗಿದೆ. ಸುಮಾರು ೨೦ ವರ್ಷಗಳಿಂದಲೂ ನಾನು ಪುರಸಭೆಯ ಅಧ್ಯಕ್ಷನಾಗಿ ನೋಡಿದ್ದೇನೆ. ಯಾವಾಗಲೂ ಕೂಡ ಹೆಂಗಸರಿಗೆ ೨೦ ಪರ್ಸೆಂಟ್ ಸೀಟ್ ಕೊಟ್ಟದ್ದು ಇಲ್ಲ. ಅದರಲ್ಲೂ ಹರಿಜನರಿಗೆ ೧೮ ಪರ್ಸೆಂಟ್ ಕೊಟ್ಟದ್ದು ಯಾವಾಗಲೂ ಇರಲಿಲ್ಲ. ಮಾನ್ಯ ವಿರೋಧ ಪಕ್ಷದವರನ್ನು ಹೃತ್ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ದಯವಿಟ್ಟು ಇದನ್ನು ಯಾವರೀತಿ ವಿರೋಧ ಮಾಡದೆ ಹಿಂದಿನಿಂದ ಆಗದೆ ಇರತಕ್ಕಂಥ ಒಂದು ಪ್ರಗತಿಯಾದ ಮಸೂದೆಯನ್ನು ತಂದುದಕ್ಕೆ ತಾವು ಅಂಗೀಕರಿಸಬೇಕು. ಏತಕ್ಕೆಂದರೆ ನಗರ ಸಭೆಗಳಲ್ಲಿ ಶ್ರೀಮತಿ ನಾಗರತ್ನಮ್ಮನವರಿಗೂ ಗೊತ್ತಿರುತ್ತದೆ ಹೆಂಗಸರನ್ನು ಹುಡಿಕಿಕೊಂಡು ಸೇರಿಸತಕ್ಕಂಥ ಪ್ರಯತ್ನಗಳು ನಡೆದಿರುತ್ತದೆ. ಆದ್ದರಿಂದ ಏನಾದರೂ ಮಾಡಿ ಹೆಂಗಸರನ್ನು ತರಬೇಕೆಂದು ಅವರೂ ಕೂಡ ಸಹಾಯ ಮಾಡುತ್ತಾರೆಂದು ಈ ಮಸೂದೆಯನ್ನು ಇನ್ನೂ ೩೦ ಪರ್ಸೆಂಟ್‌ಗೆ ಹೆಚ್ಚಿಸುವುದಕ್ಕೆ ಮನಸ್ಸು ಮಾಡುತ್ತಾರೆಂದು ಹೇಳಿ ಅಧ್ಯಕ್ಷರನ್ನು ಬೇಡಿಕೊಂಡು ಈಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೇ ಮಾನ್ಯ ಧರ್ಮಸಿಂಗ್‌ರವರು ಒಂದು ಅನುಮಾನವನ್ನು ವ್ಯಕ್ತಪಡಿಸಿದರು. ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕಡಿಮೆಯಾಗುತ್ತವೆ ಎಂದು. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಮಾನ್ಯ ಗಂಗಾಧರನ್‌ರವರು ವಿಷದೀಕರಣ ಕೊಟ್ಟಿದ್ದಾರೆ. ದಾವಾಶ ಅಂದಮೇಲೆ ೭೧ರ ಜನಸಂಖ್ಯೆಗೆ ಅನುಗುಣವಾಗಿ ರಿಸರ್ವೇಷನ್ ಇದ್ದು ಕಾನ್‌ಸ್ಟಿಟ್ಯೂಷನ್ ಡಿ ಲಿಮಿಟೇಷನ್ ಆಯಿತು. ಅದರ ಪ್ರಕಾರ ಜನಸಂಖ್ಯೆ ೬೧ರಲ್ಲಿ ಇದ್ದ ಪ್ರಕಾರವಾಗಿ ಹೆಚ್ಚಿಗೆ ಜನರು ಸೀಟ್ ಜಾಸ್ತಿಯಾಗುತ್ತದೆ. ಹರಿಜನರಿಗೆ ಸೀಟ್ ಯಾವ ಪ್ರಮಾಣದಲ್ಲೂ ಹೋಗುವುದಿಲ್ಲ. ಒಟ್ಟಿನಲ್ಲಿ ಡಿ ಲಿಮಿಟೇಷನ್ ಮಾಡಬೇಕೆಂದು ಮಾಡಿದ್ದೇವೆ. ೧೯೭೧ರ ಜನಸಂಖ್ಯೆಯ ಪ್ರಕಾರವಾಗಿ ಎಲ್ಲರಿಗೂ ಕೂಡ ಅನುಕೂಲವಾಗುವ ರೀತಿಯಲ್ಲಿ ಮಾಡಿರುತ್ತೇವೆ. ಪರ್ಸೆಂಟೇಜ್ ಏನೂ ಕೂಡ ವ್ಯತ್ಯಾಸ ವಾಗುವುದಿಲ್ಲ. ೧೯೬೧ ತೆಗೆದುಕೊಂಡರೆ ಅವರಿಗೆ ಮಾತ್ರ ಜಾಸ್ತಿಯಾಗುತ್ತದೆ, ಬೇರೆಯವರಿಗೆ ಪ್ರೊಪೋರ್ಷನೇಟ್ ಜಾಸ್ತಿಯಾಗುವುದಿಲ್ಲವೆಂದು ಹೇಗೆ ಹೇಳುತ್ತೀರಿ. ಬೇರೆಯವರಿಗೂ ಜಾಸ್ತಿ ಯಾಗುತ್ತಿದೆ.

ಶ್ರೀ ಧರ್ಮಸಿಂಗ್.—೭೧ರ ಜನಸಂಖ್ಯೆಯ ಆಧಾರದ ಮೇಲೆ ಕಡಿಮೆಯಾಗುತ್ತದೆ. ೭೧–೬೧ರ ಜನಸಂಖ್ಯೆಯ ಆಧಾರದಮೇಲೆ ಹರಿಜನರ ಜನಸಂಖ್ಯೆ ಹೆಚ್ಚಾಗುತ್ತದೆ. ಸೀಟ್ಸ್ ಹೆಚ್ಚಾಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಹರಿಜನರು ಒಬ್ಬರದೇ ಅಲ್ಲ.

ಶ್ರೀ ಧರ್ಮಸಿಂಗ್.—ಅದಕ್ಕೆ ನಾನು ಹೇಳುವುದು.

ಶ್ರೀ ಎಂ. ಚಂದ್ರಶೇಖರ್.—ಅನ್ಯಾಯ ಯಾರಿಗೂ ಆಗಲಿಲ್ಲ. ವಿರುದ್ಧವಾಗಿಯೂ ಆಗಿರುವುದಿಲ್ಲ. ೪೦ ಸೀಟ್ಸ್ ಇದ್ದರೆ ೯ ಸೀಟ್ಸ್ ಆಗುತ್ತದೆ. ಈವತ್ತು ೧೦೦ ಸೀಟ್ಸ್ ಆಗಿದ್ದರೆ ೧೮ ಸೀಟ್ಸ್ ಆಗುತ್ತದೆ. ಪ್ರೊಪೋರ್ಷನೇಟ್ ಆಗ ಪರ್ಸೆಂಟೇಜ್ ಕೂಡ ಹೋಗುತ್ತಿರುತ್ತದೆ. ಇದರಲ್ಲಿ ಅನ್ಯಾಯ ಎಲ್ಲಿಬಂತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೭೧ನೇ ಇಸವಿ ಸೆನ್ಸಸ್ ಅನೇಕ ಸಲ ಫ್ಲೋಟಿಂಗ್ ಪಾಪ್ಯುಲೇಷನ್ ತೆಗೆದುಕೊಂಡರೆ ಬೆಂಗಳೂರು ಸಿಟಿ ಈಹತ್ತು ವರ್ಷಗಳಲ್ಲಿ ಎಷ್ಟು ಬೆಳೆದಿದೆ ಪಾಪ್ಯುಲೇಶನ್ ಬೆಳೆದಿದೆ ಆದರೆ ಪ್ರಾತಿನಿಧ್ಯ ಜಾಸ್ತಿಯಾಗುವುದಿಲ್ಲ. ತಾವು ಏನು ಹೇಳುತ್ತೀರಿ ಜನರಲ್ ಸಿಗುವುದಿಲ್ಲ, ಅವರಿಗೂ ಸಿಗುವುದಿಲ್ಲ, ಇವರಿಗೂ ಸಿಗುವುದಿಲ್ಲವೆಂದು ಹೇಳಿದರೆ ಒಂದುವೇಳೆ ಇವರ ಪಾಪ್ಯುಲೇಷನ್ ಜಾಸ್ತಿ ಇದ್ದಾಗ ಏತಕ್ಕೆ ಇವರಿಗೆ ಪ್ರಾತಿನಿಧ್ಯವನ್ನು ಕೊಡಬಾರದು ?

ಶ್ರೀ ಧರ್ಮಸಿಂಗ್.—ಮಾನ್ಯ ಉಪಸಭಾಧ್ಯಕ್ಷರೇ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ನಾನು ಹೇಳುವುದೇನೆಂದರೆ ನಾನು ವಿರೋಧ ಮಾಡತಕ್ಕಂಥದ್ದಲ್ಲ. ಜನರಲ್ ಎಲೆಕ್ಷನ್ ಎಂದರೆ ಆಯಾ ಭಾಗದಲ್ಲಿರತಕ್ಕಂಥ ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಪ್ರತಿನಿಧಿಗಳು ಬರಬೇಕು. ಈವತ್ತು ಏನಾಗಿದೆ ಎಂದರೆ ೧೯೭೧ರ ಜನಸಂಖ್ಯೆ ಆಧಾರದ ಮೇಲೆ ಬೆಂಗಳೂರು ಹದಿನಾರು ಲಕ್ಷ ಇದ್ದುದು ಈ

೧೯೮೧ರ ಸೆನ್ಸಸ್ ಪ್ರಕಾರ ೩೦ ಲಕ್ಷಕ್ಕೆ ಏರಿದೆ. ಈಗ ಏರಿರತಕ್ಕಂಥ ಪಾಪ್ಯುಲೇಷನ್ ಪ್ರಕಾರ ಪ್ರಾತಿನಿಧ್ಯವನ್ನು ಜಾಸ್ತಿ ಮಾಡಬೇಕು. ಈಗ ಸೆನ್ಸಸ್ ಫಿಗರ್, ಅವೈಲಬಲ್ ಆಗುತ್ತದೆ. ಇನ್ನು ಹದಿನೈದು ದಿವಸಕ್ಕೆ ಬರಬಹುದು, ಆತಂಕವಿಲ್ಲ. ಇದರಿಂದ ಚುನಾವಣೆಯನ್ನು ಮುಂದೂಡಬೇಕೆಂದು ಹೇಳುತ್ತಿಲ್ಲ. ಹರಿಜನ ಗಿರಿಜನರಿಗೆ ಧಕ್ಕೆ ಬರುತ್ತದೆ, ಆದ್ದರಿಂದ ೮೧ರ ಸೆನ್ಸಸ್ ಪ್ರಕಾರ ಮಾಡಿದರೆ ಚೆನ್ನಾಗಿರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—೮೧ ರಂದು ಓಟರ್ ಲಿಸ್ಟ್ ಆಧಾರದ ಮೇಲೆ ಕಾನ್‌ಸ್ಟಿಟ್ಯುಯನ್ಸಿಗೆ ೪–೫ ಇದೆ ಎಂದು ಹೇಳಿದೆ. ೧೯೮೧ರ ಓಟರ್ ಲಿಸ್ಟ್ ಆಧಾರದ ಮೇಲೆ ಸೀಟ್ ಡಿವೈಡ್ ಮಾಡುತ್ತಾರೆ, ಈಗ ಮಾಡುತ್ತಿರುವುದು ಹಾಗೇನೆ.

ಶ್ರೀ ಬೈರೇಗೌಡ.— ನಮ್ಮ ವಿರೋಧ ಪಕ್ಷದ ನಾಯಕರು ೧೯೭೧ರ ಸೆನ್ಸಸ್ ಪ್ರಕಾರ ಚುನಾವಣೆಯನ್ನು ನಡೆಸಿದರೆ ಹರಿಜನರಿಗೆ ಧಕ್ಕೆ ಆಗುತ್ತದೆ. ಚುನಾವಣೆಯನ್ನು ಮುಂದೂಡಿ ೧೯೯೧ರ ಸೆನ್ಸಸ್ ಪ್ರಕಾರ ನಡೆಸಬೇಕು ಎಂದು ತೀರ್ಮಾನ ಮಾಡಿ ಇನ್ನೂ ಹನ್ನೊಂದು ವರ್ಷಗಳ ಕಾಲ ಚುನಾವಣೆಯನ್ನು ಮುಂದೂಡಬೇಕೆಂದು ಹೇಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಧರ್ಮಸಿಂಗ್‌ರವರು ಹೇಳತಕ್ಕಂಥದ್ದು ಸತ್ಯಕ್ಕೆ ದೂರವಾದುದು. ಇದು ಒಂದು ಪ್ರಗತಿಪರವಾದ ಮಸೂದೆ ಎಂದು ತಿಳಿದುಕೊಳ್ಳಬೇಕು. ಯಾವುದೇ ವಿರುದ್ಧವಾಗಿಲ್ಲ. ೨೦ ಪರ್ಸೆಂಟ್ ಎಕ್ಸಸ್ಟ್ ಆಗಿ ಇರಬೇಕೆಂದು ಏನು ಹೇಳುತ್ತಾರೆ ಅದನ್ನು ಕೂಡ ಗಮನದಲ್ಲಿಟ್ಟುಕೊಂಡು ಹೇಳುತ್ತೇನೆ, ಆದ್ದರಿಂದ ದಯವಿಟ್ಟು ಈ ಮಸೂದೆಯನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಪರಿಶೀಲನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ.—

ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು
ಖಂಡಗಳ ಪರಿಶೀಲನೆ

೨ರಿಂದ ೭ ಖಂಡಗಳು

ಅಧ್ಯಕ್ಷರು.—ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ ;

"೨ರಿಂದ ೭ನೇ ಖಂಡಗಳು ವಿಧೇಯಕದ ಅಂಗಗಳು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

೨ರಿಂದ ೭ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು
ಮೊದಲನೆಯ ಖಂಡ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವವೇನೆಂದರೆ

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗಗಳು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಅನುಮೋದನಾ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಪ್ರಸ್ತಾವ ಏನೆಂದರೆ.—

''ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸುವುದು.

ಅಧ್ಯಕ್ಷರು.—ಪ್ರಸ್ತಾವವೇನೆಂದರೆ.—

''ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕ ೧೯೮೩ನ್ನು ಅನುಮೋದಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕ ಅನುಮೋದಿಸಲ್ಪಟ್ಟಿತು

ಕರ್ನಾಟಕ ರಾಜ್ಯದ ಪುರಸಭೆಗಳ (ತಿದ್ದುಪಡಿ) ವಿಧೇಯಕ ೧೯೮೩.

ಪರಿಶೀಲನಾ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಕೆಳಗೆ ಕಂಡ ಪ್ರಸ್ತಾವವನ್ನು ಮಂಡಿಸುತ್ತೇನೆ. ಕರ್ನಾಟಕ ರಾಜ್ಯದ ಪುರಸಭೆಗಳ ತಿದ್ದುಪಡಿ ವಿಧೇಯಕ ೧೯೮೩ನ್ನು, ಈ ಸಭೆಯು ಪರಿಶೀಲಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಚಿಮ್ಮನಕಟ್ಟಿ ಅವರು ಹೇಳಿದ ಪ್ರಕಾರ ಡಿವಿಜನ್‌ಗಳಲ್ಲಿನ ಕನಿಷ್ಠ ೩ ಹಾಗೂ ಗರಿಷ್ಠ ೫ ಸ್ಥಾನಗಳನ್ನು ಒಂದು ಅಥವಾ ಅದಕ್ಕಿಂತ ಹೆಚ್ಚು ಸ್ಥಾನಗಳು ಎಂದು ಇಲ್ಲಿ ನಿಗದಿಪಡಿಸಲಾಗಿದೆ. ಈ ರೀತಿ ಮಾಡಿರುವುದರಿಂದ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ. ಇಷ್ಟನ್ನು ಬಿಟ್ಟರೆ ಈ ಮೊದಲಿನ ತಿದ್ದುಪಡಿ ಮಸೂದೆಗೂ ಮತ್ತು ಈ ತಿದ್ದುಪಡಿ ಮಸೂದೆಗೂ ಯಾವುದೇ ಬದಲಾವಣೆ ಇಲ್ಲದ ಪ್ರಯುಕ್ತ ಇದನ್ನು ಮಾನ್ಯ ಸಭೆ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇಲ್ಲಿ ಮಹಿಳೆಯರಿಗೆ ೨೦ ಪರ್ಸೆಂಟ್ ಪ್ರಾತಿನಿಧ್ಯ ಕೊಟ್ಟಿರುವಂತೆ ಕಾರ್ಮಿಕರಿಗೂ ಏತಕ್ಕೆ ಪ್ರಾತಿನಿಧ್ಯ ಕೊಡಬಾರದು ?

ಶ್ರೀ ಧರ್ಮಸಿಂಗ್.—ಈಗ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಒಂದು ರೀತಿಯ ವ್ಯವಸ್ಥೆ ಮತ್ತು ಇತರೇ ನಗರಸಭೆಗಳಿಗೆ ಬಂದು ರೀತಿಯ ವ್ಯವಸ್ಥೆಯನ್ನು ಮಾಡುವುದಕ್ಕಿಂತ ಎಲ್ಲ ಕಡೆಗೂ ಒಂದೇ ರೀತಿಯಾದಂಥ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ಸ್ಥಾನಗಳು ಎಂದು ನಿಗದಿಪಡಿಸಿರುವುದರಿಂದ ಯಾವುದೇ ಪುರಸಭೆ ಅಥವಾ ಯಾವುದೇ ನಗರಸಭೆ ಒಂದು ಸ್ಥಾನವನ್ನು ಬೇಕಾದರೆ ಇಟ್ಟುಕೊಳ್ಳಬಹುದು ಇಲ್ಲದಿದ್ದರೆ ಒಂದಕ್ಕಿಂತ ಹೆಚ್ಚು ಸ್ಥಾನಗಳನ್ನು ಬೇಕಾದರೆ ಇಟ್ಟುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೀತಿ ಮಾಡಿರುವುದರಿಂದ ಏನಾಗುತ್ತದೆಂದರೆ, ಮೇಜರ್ ಕಮ್ಯುನಿಟಿಯವರು ಎಲ್ಲಿ ಜಾಸ್ತಿ ಇರುತ್ತಾರೋ ಅಂತಹ ಕಡೆ ಒಂದೇ ಸ್ಥಾನ ಇಡಿ ಎಂದು ಹೇಳಬಹುದು. ಆಗ ಮೇಜರ್ ಕಮ್ಯುನಿಟಿಯವರೇ ಆರಿಸಿ ಬರಲು ಸಾಧ್ಯವಾಗುತ್ತದೆಯೇ ಹೊರತು ದುರ್ಬಲವರ್ಗದವರು ಆ ಕ್ಷೇತ್ರದಿಂದ ಆರಿಸಿ ಬರಲು ಸಾಧ್ಯವಾಗುವುದಿಲ್ಲ. ಗೆದ್ದು ಬರುವಂತಹ

ಶಕ್ತಿಯೂ ಇವರಿಗೆ ಇರುವುದಿಲ್ಲ, ಈ ಕಾರಣದಿಂದ ಒಂದು ಅಥವಾ ಅದಕ್ಕಿಂತ ಹೆಚ್ಚು ಸ್ಥಾನಗಳು ಎಂದೇ ಹೇಳುವುದಕ್ಕೆ ಬದಲು ಒಬ್ಬರಿಗಿಂತ ಹೆಚ್ಚು ಸದಸ್ಯರು ಉಳ್ಳಂತಹ ಡಿವಿಜನ್ ಎಂದು ಮಾಡುವುದು ಒಳ್ಳೆಯದು. ಈ ರೀತಿ ಮಾಡದಿದ್ದರೆ ಇದನ್ನು ದುರುಪಯೋಗ ಮಾಡಿಕೊಳ್ಳಬಹುದು. ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಡಿವಿಜನ್‌ಗೆ ಒಂದು ಸ್ಥಾನ ಇರಬೇಕೇ ಅಥವಾ ಜಾಸ್ತಿ ಇರಬೇಕೇ ಎಂಬ ಬಗ್ಗೆ ಈ ಹಿಂದೆ ಕೂಡ ಇಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಇಂತಹ ಒಂದು ಪದ್ಧತಿ ಶಾಸನಸಭಾ ಚುನಾವಣೆಗೂ ಸಹ ಅನ್ವಯ ಏತಕ್ಕೆ ಮಾಡಬಾರದು ಎಂಬ ಅಭಿಪ್ರಾಯ ಕೂಡ ಆ ಸಮಯದಲ್ಲಿ ಬಂತು. ಒಂದಕ್ಕಿಂತ ಹೆಚ್ಚು ಸ್ಥಾನಗಳು ಇದ್ದರೆ ಬೇರೆಯವರೂ ಸಹ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವೂ ಸಹ ಆಗ ಬಂತು. ಈಗ ಇಲ್ಲಿ ಈ ಎರಡಕ್ಕೂ ಅವಕಾಶ ಮಾಡಿಕೊಡಲಾಗಿದೆ. ಆದ ಕಾರಣ ನಾನು ಇದನ್ನು ವಿರೋಧ ಮಾಡುವುದಿಲ್ಲ. ಆದರೆ ಇದರಲ್ಲಿ ಒಂದು ಸ್ಪಷ್ಟತೆ ಇರಬೇಕು. ಅಂದರೆ ಒಂದು ಸ್ಥಾನ ಇರಬೇಕೇ ಅಥವಾ ಜಾಸ್ತಿ ಇರಬೇಕೇ ಎಂಬ ಬಗ್ಗೆ ಸ ಷ್ಟತೆ ಇರಬೇಕು. ಇದನ್ನು ತೀರ್ಮಾನ ಮಾಡುವ ಅಧಿಕಾರವನ್ನು ಅವರಿಗೇ ಬಿಟ್ಟರೆ ಅದು ಸಮಂಜಸವಾಗುವುದಿಲ್ಲ. ನಮ್ಮ ದೃಷ್ಟಿಕೋನವೂ ಸರಿಯಾಗಿರುವುದಿಲ್ಲ. ಮಾನ್ಯ ಚಿಮ್ಮನಕಟ್ಟಿಯವರು ಕಾರ್ಮಿಕರಿಗೂ ಪ್ರಾತಿನಿಧ್ಯ ಇರಬೇಕೆಂದು ಹೇಳಿದರು. ಈ ಮೊದಲು ಇದೇ ವಾದವನ್ನು ನಾನು ಇಲ್ಲಿ ಮಂಡಿಸಿದಾಗ ಈ ಕಡೆಯ ಸದಸ್ಯರೆಲ್ಲಾ ಆಡಳಿತ ಪಕ್ಷದಲ್ಲಿದ್ದರು. ಆಗ ನಾನು ಹೇಳಿದ್ದನ್ನು ಇದೇ ಕಾಂಗ್ರೆಸ್ ಪಕ್ಷದವರು ಒಪ್ಪಿಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ನಾವು ದಿವಂಗತ ಪುಟ್ಟಸ್ವಾಮಿ ಅವರನ್ನು ನೆನಸಿಕೊಳ್ಳಬೇಕು. ಏಕೆಂದರೆ, ಅವರೂ ಸಹ ಇದೇ ವಾದವನ್ನು ಮುಂದಿಟ್ಟಿದ್ದರು. ಆಗ ಒಪ್ಪಿಕೊಳ್ಳದಿದ್ದವರು ಈಗ ಸಪೋರ್ಟ್ ಮಾಡುತ್ತಿದ್ದಾರೆ. ಈ ಹಳೆಯ ಕಥೆ ಇವರಿಗೆ ಗೊತ್ತಿಲ್ಲವೆಂದು ಈಗ ಕಾರ್ಮಿಕರಿಗೂ ಪ್ರಾತಿನಿಧ್ಯ ಕೊಡಿ ಎಂದು ಕೇಳುತ್ತಿದ್ದಾರೆ. ಒಟ್ಟಿನಲ್ಲಿ ಕಾರ್ಪೊರೇಷನ್ ಆಕ್ಟ್‌ಗೆ ಸಮಗ್ರವಾದಂಥ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಪಿ. ರಾಮಚಂದ್ರರಾವ್.—ಪುರಸಭೆಗಳಲ್ಲಿ ಒಂದು ಡಿವಿಜನ್‌ಗೆ ಒಂದೇ ಸ್ಥಾನ ಎಂದು ಇರುವುದು ಸರಿಯಲ್ಲ ; ಒಂದಕ್ಕಿಂತ ಹೆಚ್ಚು ಸ್ಥಾನಗಳು ಇರಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಒಂದು ಅಥವಾ ಅದಕ್ಕಿಂತ ಹೆಚ್ಚು ಸ್ಥಾನಗಳು ಎಂಬುದನ್ನು ಇಲ್ಲಿ ತೆಗೆದು ಒಬ್ಬರಿಗಿಂತ ಹೆಚ್ಚು ಸದಸ್ಯರು ಉಳ್ಳಂತಹ ಡಿವಿಜನ್ ಎಂದು ಸ್ಪಷ್ಟವಾಗಿ ಇದರಲ್ಲಿ ಸೇರಿಸಬೇಕು. ಈ ವಿಚಾರದಲ್ಲಿ ಸರ್ಕಾರ ಒಂದು ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಳ್ಳಬೇಕೆಂದು ಸೂಚಿಸುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಪಿ. ಕರ್ಕಿ.—ಒಂದು ಡಿವಿಜನ್‌ನಲ್ಲಿ ಒಬ್ಬರೇ ಆರಿಸಿ ಬರುವಂತಹ ವ್ಯವಸ್ಥೆ ಇದ್ದರೆ ಸಣ್ಣ ಸಣ್ಣ ಪುರಸಭೆಗಳಲ್ಲಿ ಯಾವುದೇ ಒಂದು ಜಾತಿಯ ಇಲ್ಲವೇ ಒಂದು ಕೋಮಿನ ಜನರೇ ಖಾಯಂ ಆಗಿ ಆರಿಸಿ ಬರುತ್ತಾರೆ. ಆದ್ದರಿಂದ ಒಂದಕ್ಕಿಂತ ಹೆಚ್ಚು ಸದಸ್ಯರು ಆರಿಸಿ ಬರಲು ಅವಕಾಶ ಮಾಡಿ ಕೊಟ್ಟರೆ ಸಾಮಾನ್ಯವಾಗಿ ಯಾರು ಜನಪ್ರಿಯರಾಗಿರುತ್ತಾರೋ ಅಂತಹವರೂ ಸಹ ಆರಿಸಿ ಬರಲು ಅವಕಾಶವಾಗುತ್ತದೆ. ಆದ್ದರಿಂದ ಒಬ್ಬರಿಗಿಂತ ಹೆಚ್ಚು ಸದಸ್ಯರು ಇರುವಂತಹ ಡಿವಿಜನ್ ಇರಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮುಂದೆ ಬೇಕಾದರೆ ಈ ಸಭೆಯ ಅಭಿಪ್ರಾಯ ತೆಗೆದುಕೊಂಡು ಮಾಡುತ್ತೇವೆ. ಈಗ ಇದರಲ್ಲಿ ಈ ಎರಡಕ್ಕೂ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಶಕ್ತಿಹೀನರು ಮತ್ತು ದುರ್ಬಲರೂ ಎಂಬ ಕಾರಣದಿಂದ ಮಹಿಳೆಯರಿಗೆ ೨೦ ಪರ್ಸೆಂಟ್ ಸೀಟ್‌ಗಳನ್ನು ಕಾದಿರಿಸಲಾಗಿದೆ. ಈ ರೀತಿ ಕಾದಿರಿಸದಿದ್ದರೆ ಮಹಿಳೆಯರು ಆರಿಸಿಬರಲು ಕಷ್ಟವಾಗುತ್ತದೆಂದು ನೀವೇ ಹೇಳಿದ್ದೀರಿ. ಇದೇ ಒಂದು ತತ್ವದ ಆಧಾರದ ಮೇಲೆ ಹೆಚ್ಚು ಸದಸ್ಯರು ಇರುವಂತಹ ಡಿವಿಜನ್‌ಗಳನ್ನು ಏತಕ್ಕೆ ಮಾಡಬಾರದು? ಈಗ ಮಹಿಳೆಯರಿಗೆ ೨೦ ಪರ್ಸೆಂಟ್ ಸೀಟ್‌ಗಳನ್ನು ಕಾದಿರಿಸಿರುವುದರಿಂದ ಯಾವುದೇ ಪಕ್ಷದಿಂದಲಾದರೂ ಆರಿಸಿ ಬರುತ್ತಾರೆ. ಅದೇ ರೀತಿ ಈ ವಿಚಾರದಲ್ಲಿಯೂ ಸಹ ಶಕ್ತಿಹೀನರಿಗೆ ದುರ್ಬಲವರ್ಗದವರಿಗೆ ಏತಕ್ಕೆ ಪ್ರೋತ್ಸಾಹ ಕೊಡಬಾರದು?

ಈ ರೀತಿ ಅವಕಾಶ ಮಾಡಿಕೊಟ್ಟು ನಮ್ಮ ಸಮಾಜದಲ್ಲಿ ಸಮಾನತೆಯನ್ನು ನೀವು ತರಬೇಕು. ನಮ್ಮ ಸಮಾಜದಲ್ಲಿ ರಾಜಕೀಯ ಸಮಾನತೆ ಮತ್ತು ಸಾಮಾಜಿಕ ಸಮಾನತೆಯನ್ನು ತರಬೇಕಾದರೆ ಹೆಚ್ಚು ಸದಸ್ಯರು ಆರಿಸಿ ಬರುವಂತಹ ಡಿವಿಜನ್ ಇರಬೇಕಾಗುತ್ತದೆ. ಹರಿಜನ ಮತ್ತು ಗಿರಿಜನರಿಗೆ ಕೆಲವು ಸ್ಥಾನಗಳು ಮೀಸಲಿರುವಂತೆ ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರೂ ಸಹ ಮುಂದೆ ಬರಲು ತಾವು ಅವಕಾಶ ಮಾಡಿಕೊಡಬೇಕು. ನಾವು ಈ ದೇಶದಲ್ಲಿ ಎಷ್ಟೇ ತತ್ವಗಳನ್ನು ಹೇಳಿದರೂ ಸಹ ಜಾತಿ ಮತ್ತು ವರ್ಗ ಈ ಎರಡೂ ಸಹ ಜೊತೆಯಲ್ಲಿಯೇ ಇವೆ. ಆದ್ದರಿಂದ ನಾವು ಎಷ್ಟೇ ತತ್ವ ಹೇಳಿದರೂ ಸಹ ವೀಕರ್ ಸೆಕ್ಷನ್ ಅವರು ಆರಿಸಿ ಬರಲು ತೊಂದರೆ ಇದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಆದ್ದರಿಂದ ಒಬ್ಬರಿಗಿಂತ ಹೆಚ್ಚು ಸದಸ್ಯರು ಇರುವಂತಹ ಡಿವಿಜನ್‌ಗಳ ವ್ಯವಸ್ಥೆ ಮಾಡುವುದು ಒಳ್ಳೆಯದು. ಇದನ್ನು ಬಿ.ಜೆ.ಪಿ. ಸದಸ್ಯರೂ ಒಪ್ಪಿದ್ದಾರೆ, ಕಮ್ಯೂನಿಸ್ಟ್ ಪಕ್ಷದವರೂ ಒಪ್ಪಿದ್ದಾರೆ. ಆದ್ದರಿಂದ ಇದನ್ನು ತಾವು ಸಹ ಒಪ್ಪುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಇದನ್ನು ತಿದ್ದುಪಡಿ ಮಾಡುವುದರ ಮೂಲಕ ಹೆಚ್ಚು ಸದಸ್ಯರು ಇರುವಂತಹ ಡಿವಿಜನ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್ : ಕಾರ್ಮಿಕರಿಗೂ ಪ್ರಾತಿನಿಧ್ಯ ಕೊಡಬೇಕೆಂದು ನಾವು ಈ ಮೊದಲು ವಿಚಾರ ಮಾಡಿದ್ದೆವು. ಆದ್ದರಿಂದ ಈಗ ಇದರಲ್ಲಿ ಕಾರ್ಮಿಕರಿಗೂ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಹಿಂದುಳಿದ ವರ್ಗದವರಿಗೂ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಈ ರೀತಿ ಮಾಡುವುದು ಒಳ್ಳೆಯದು. ಆದರೆ ಈ ರೀತಿ ಮಾಡುವುದರಿಂದ ಏನಾಗುತ್ತದೆಂದರೆ major community will be dominating not only in one constituency but also in several constituencies, ಇಂತಹ ಸಂದರ್ಭಲ್ಲಿ ಏನಾಗುತ್ತದೆಂಬುದನ್ನು ಸಹ ನೋಡಬೇಕಾಗುತ್ತದೆ. Irrespective of single constituency or multi-constituency, representatives of major community will get elected. ಈ ಕಾರಣದಿಂದ ಆಯಾ ಸ್ಥಳದ ಅನುಭವ ನೋಡಿಕೊಂಡು ಇಲ್ಲಿ ಹೇಳಿರುವ ಪ್ರಕಾರವೇ ಒಂದು ಅಥವಾ ಅದಕ್ಕಿಂತ ಹೆಚ್ಚು ಸ್ಥಾನಗಳನ್ನು ಕಲ್ಪಿಸಿಕೊಡುವುದು ಒಳ್ಳೆಯದು. ಇದರಿಂದ ಯಾವ ರೀತಿ ಬೇಕಾದರೂ ಮಾಡಲು ಸಹಾಯವಾಗುತ್ತದೆ.

೫–೩೦ ಪಿ. ಎಂ.

ಶ್ರೀ ನಾಯಕ್.—ಒಂದೊಂದು ಬ್ಲಾಕ್‌ನಲ್ಲಿ ಒಬ್ಬೊಬ್ಬರನೇ ನಿಲ್ಲಿಸುವುದರಿಂದ ಅನುಕೂಲಸ್ಥರು ಅವರೇ ಬರುತ್ತಾರೆ ಪಟ್ಟಭದ್ರಾಹಿತಾಶಕ್ತಿಗಳಿಗೆ ಅನುಕೂಲವಾಗುತ್ತದೆ. ಒಂದೊಂದು ಬ್ಲಾಕ್‌ನಲ್ಲಿ ೨–೩ಜನ ನಿಲ್ಲಿಸುವ ಪದ್ಧತಿ ಏನಿದೆ ಅದನ್ನು ಜಾರಿಗೆ ತರಬೇಕೆಂದು ನನ್ನ ಅಭಿಪ್ರಾಯ.

ಶ್ರೀ ವಿ. ಧನಂಜಯಕುಮಾರ್.—ಡಿಲಿಮಿಟೇಷನ್ ಕ್ಷೇತ್ರ ಮಾಡಿದರೆ ಅಪ್ಪನ್ ಇರುವುದಿಲ್ಲ ತಾವು ಯಾವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಪಂಪಾಪತಿ.—ಮಾನ್ಯ ಖರ್ಗೆಯವರು ಹೇಳಿದಹಾಗೆ ಮುನಿಸಿಪಾಲಿಟಿಗಳಲ್ಲಿ ಒಬ್ಬೊಬ್ಬ ಸದಸ್ಯರಿಗೆ ಒಂದೊಂದು ಡಿವಿಜನ್ ಮಾಡಿದರೆ ತೊಂದರೆಯಾಗುತ್ತದೆ; ಕಷ್ಟವಾಗುತ್ತದೆ. ಒಂದೇ ವರ್ಗದವರು ಬರುವುದಕ್ಕೆ ಅನುಕೂಲವಾಗುತ್ತದೆ. ಒಟ್ಟಿಗೆ ಸೇರಿಸಿ ಮಾಡತಕ್ಕ ಡಿವಿಜನ್ ಏನಿದೆ ಅದರಲ್ಲಿ ಎಲ್ಲರಿಗೂ ಸಮಾನವಾದ ಅವಕಾಶ ಸಿಗತಕ್ಕ ಸಂದರ್ಭ ಇದೆ. ಎಲ್ಲಾ ಜನಾಂಗದವರು ಸೇರಿ ಆ ವಿಭಾಗದ ಜನರಿಗೆ ಸೇವೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ದಾವಣಗೆರೆಯಲ್ಲಿ ಹಿಂದೆ ಇದೇ ತರಹ ಇತ್ತು. ಹಿಂದೆ ಎಲ್ಲಾ ಜನರಿಗೂ ಅವಕಾಶವಿತ್ತು. ಒಬ್ಬೊಬ್ಬರಿಗೆ ಒಂದೊಂದು ಕ್ಷೇತ್ರ ಇರತಕ್ಕದ್ದು ಸರಿಯಾದುದಲ್ಲ.

ಒಬ್ಬ ಮಾನ್ಯ ಸದಸ್ಯರು.—ಮಲ್ಟಿ ಕ್ಷೇತ್ರ ಮಾಡಿದರೆ ಕ್ಷೇತ್ರ ಬಹಳ ದೊಡ್ಡದಾಗುತ್ತದೆ. ಚುನಾವಣಾ ಖರ್ಚು ಬಹಳ ಆಗುತ್ತದೆ. ನಾನು ನಗರಸಭೆಯ ಅಧ್ಯಕ್ಷನಾಗಿ ೧೨ ವರ್ಷ ಕೆಲಸ ಮಾಡಿದ್ದೇನೆ. ಕ್ಷೇತ್ರ ದೊಡ್ಡದು ಬರುತ್ತದೆ. ಪ್ರತಿಯೊಬ್ಬರೂ ಹಣ ಖರ್ಚು ಮಾಡುತ್ತಾರೆ. ಈಗಿನ ಕಾಲದಲ್ಲಿ ಯಾವರೀತಿ ಖರ್ಚು ಬರುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಸಿಂಗಲ್ ಕ್ಷೇತ್ರ ಇಡುವುದು ಒಳ್ಳೆಯದು. ಈಗ ತಂದಿರುವ ಮಸೂದೆಯನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಂ. ಎಸ್. ನಾರಾಯಣರಾವ್.--ಹಿಂದೆ ವಾರ್ಡ್ ಸಿಸ್ಟಮ್ ಇತ್ತು. ಆ ಸಿಸ್ಟಮ್ ಪ್ರಕಾರ ಕೆಲಸ ಮಾಡುವುದಕ್ಕೆ ಅಡಚಣೆಯಾಗುತ್ತದೆ. ಕ್ಷೇತ್ರ ಬಹಳ ದೊಡ್ಡದಾಗುತ್ತದೆ. ಒಂದೇ ಕ್ಷೇತ್ರದಲ್ಲಿ ಮೂರು ಜನ ಬಂದರೆ ಒಂದೇ ಧ್ವನಿಯಿಂದ ಕೆಲಸಮಾಡುವುದಕ್ಕಾಗುವುದಿಲ್ಲ. ಈ ಪದ್ಧತಿಯನ್ನು ನೋಡಿದ್ದೇವೆ, ಸಿಂಗಲ್ ಕ್ಷೇತ್ರ ಇದ್ದರೆ ಜನಗಳಿಗೆ ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಒಂದು ಕ್ಷೇತ್ರದಲ್ಲಿ ಬಹುಮಂದಿ ಇರುವುದು ಸರಿಯಾದುದಲ್ಲ.

ಶ್ರೀ ಎಂ. ಚಂದ್ರಶೇಖರ್.--ಎರಡೂ ಪದ್ಧತಿಗಳನ್ನು ನಾವು ಗಮನಿಸಿ ಅದಕ್ಕೆ One or more ಇರಬೇಕೆಂದು ಅನೇಕ ಜನ ಹೇಳಿದ್ದಾರೆ. ಈಗ ಇಲ್ಲಿ ಎರಡೂ ತರಹ ಹೇಳಿದ್ದೀರಿ. ಏನಾದರೂ ಒಂದು ಪ್ರಾವಿಜನ್ ಇರಬೇಕೆಂದು ಪುರಸಭೆಗಳ ಪ್ರತಿನಿಧಿಗಳು ಹೇಳಿದ್ದಾರೆ. ಈಗ ನಾವು ತಂದಿರುವ ತಿದ್ದುಪಡಿಯಿಂದ ತೊಂದರೆಯೇನು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.--ತೊಂದರೆಯಾಗುತ್ತದೆ. ಇದು ಒಬ್ಬರ ಪ್ರಶ್ನೆಯಲ್ಲ. ಮಲ್ಟಿ ಮೆಂಬರ್ ಕ್ಷೇತ್ರ ಆದರೆ ಒಳ್ಳೆಯದು. ಹರಿಜನರಿಗೆ ಅವಕಾಶ ಸಿಗುವಾಗ ತಾವು ಏತಕ್ಕೆ ಅವಕಾಶ ಮಾಡಿಕೊಡಬಾರದು?. ತಾವು ಬಡಜನರನ್ನು ತುಳಿಯುತ್ತಿದ್ದೀರಿ?.

ಉಪಾಧ್ಯಕ್ಷರು.--ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ:

"ಕರ್ನಾಟಕ ರಾಜ್ಯ ಪುರಸಭೆಗಳ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು.

ಖಂಡಗಳ ಪರಿಶೀಲನೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

೨ ರಿಂದ ೭ನೇ ಖಂಡಗಳು.

ಉಪಾಧ್ಯಕ್ಷರು.--ಪ್ರಸ್ತಾವವೆನೆಂದರೆ, ೨ ರಿಂದ ೭ನೇ ಖಂಡಗಳು ವಿಧೇಯಕದ ಅಂಗಗಳು.

ಪ್ರಸ್ತಾವ ಅಂಗಕರಿಸಲ್ಪಟ್ಟಿತ್ತು.

೨ ರಿಂದ ೭ನೇ ಖಂಡಗಳು ವಿಧೇಯಕದ ಅಂಗಳಾಗಿಸೇರಿಸಲ್ಪಟ್ಟವು.

ಮೊದಲನೆಯ ಖಂಡ, ಇತ್ಯಾದಿ

ಉಪಾಧ್ಯಕ್ಷರು.--ಪ್ರಸ್ತಾವ ವೇನೆಂದರೆ, ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗಗಳು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಳಗಿ ಸೇರಿಸಲ್ಪಟ್ಟವು.

ಅನುಮೋದನಾ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್.--ಮಾನ್ಯ ಉಪಾಧ್ಯಕ್ಷರೆ ಈ ಕೆಳಗೆಕಂಡ ಪ್ರಸ್ತಾವನೆಯನ್ನು ಮಂಡಿಸುತ್ತೇನೆ, ಕರ್ನಾಟಕ ರಾಜ್ಯ ಪುರಸಭೆಗಳ ತಿದ್ದುಪಡಿ ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

ಉಪಾಧ್ಯಕ್ಷರು.--ಪ್ರಸ್ತಾವನೆ ಏನೆಂದರೆ.

ಕರ್ನಾಟಕ ರಾಜ್ಯ ಪುರಸಭೆಗಳ (ತಿದ್ದುಪಡಿ) ವಿಧೇಯಕ, ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

SRI K. H. RANGANATH.—I press for division.

(ಸಭೆಯು ವಿಭಾಗವಾಯಿತು.)

ಉಪಾಧ್ಯಕ್ಷರು : ಈಗ ಪ್ರಸ್ತಾವವನ್ನು ಪುನಃ ಮತಕ್ಕೆ ಹಾಕುತ್ತೇನೆ ಪ್ರಸ್ತಾವವೇನೆಂದರೆ.—

ಕರ್ನಾಟಕ ರಾಜ್ಯ ಪುರಸಭೆಗಳ (ತಿದ್ದುಪಡಿ) ವಿಧೆಯಕ, ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

(ಪ್ರಸ್ತಾವವು ಅಂಗೀಕರಿಸಲ್ಪಟ್ಟು ಅನುಮೋದಿಸಲಾಯಿತು)

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತ್ತಿಗಳ ಹಾಗೂ ಸ್ಥಳೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ ೧೯೮೩

ಪರಿಶೀಲನಾ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಈ ಕೆಳಗೆ ಕಂಡ ಪ್ರಸ್ತಾವವನ್ನು ಮಂಡಿಸುತ್ತೆನೆ.—ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತ್ತಿಗಳ ಹಾಗೂ ಸ್ಥಳೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ ೧೯೮೩ನ್ನು ಸಭೆಯು ಪರಿಶೀಲಿಸಾವುದು ಇದರ ಜೊತೆಗೆ ಈ ತಿದ್ದುಪಡಿ ವಿಧೇಯಕ ಈ ರೀತಿ ಇದೆ.

ಪ್ರಸ್ತಾವ ಸಭೆಯು ಮುಂದಿಡಲಾಯಿತು.

ಶ್ರೀ ಬೈರಪ್ಪಾಜಿ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಕಾನೂನು ಸಚಿವರು ಮಂಡಿಸಿರತಕ್ಕಂಥ ಗ್ರಾಮ ಪಂಚಾಯಿತ್ತಿ ಹಾಗೂ ಸ್ಥಳೀಯ ಸಂಸ್ಥೆಗಳ ತಿದ್ದುಪಡಿ ಮಸೂದೆಯನ್ನು ವಿರೋಧಪಕ್ಷದ ಒತ್ತಡದಿಂದ ಮತ್ತು ಅವರ ವಿಶ್ವಾಸವನ್ನು ತೆಗೆದುಕೊಂಡು ಈ ತಿದ್ದುಪಡಿ ಮಸೂದೆಯನ್ನು ತಂದಂಥ ಮಾನ್ಯ ಮಂತ್ರಿಗಳಿಗೆ ಹಾಗೂ ಸರ್ಕಾರವನ್ನು ನಾನು ಮೊಟ್ಟಮೊದಲನೆಯದಾಗಿ ಅಭಿನಂದಿಸುತ್ತೇನೆ. ವಿರೋಧಪಕ್ಷದವರು ತಂದಿದ್ದಂಥ ಒತ್ತಡವನ್ನು ಸರ್ಕಾರ ಮನಗೊಂಡು ಅವರು ಮಾಡಿದಂಥ ವಾದ ಸರಿಯಾದುದೆಂದು ತಿಳಿದು ಈ ಮಸೂದೆಯನ್ನು ತಿದ್ದುಪಡಿ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಈ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೂ ಮತ್ತು ಯುವಕರಿಗೂ ತಾವು ಮತದಾನ ಮಾಡುವ ಹಕ್ಕು ಕಟ್ಟಿಸಿಕೊಟ್ಟಿದ್ದೀರಿ. ಮತ್ತು ಗ್ರಾಮಾಂತರ ಪ್ರದೇಶಗಳ ಹಾಗೂ ಪಟ್ಟಣ ಪ್ರದೇಶಗಳ ಹೆಣ್ಣು ಮಕ್ಕಳಿಗೆ ಶೇಕಡ ೨೦ರಷ್ಟು ಮೀಸಲಾಯಿತಿಯನ್ನು ಕೂಡ ಇಟ್ಟಿದ್ದೀರಿ ಇದನ್ನು ನಾನು ಕೂಡ ಒಪ್ಪಿಕೊಳುತ್ತೇನೆ. ಇದು ಒಂದು ಪ್ರಗತಿದಾಯಕವಾದಂಥ ತಿದ್ದುಪಡಿಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ನಾನು ವಿರೋಧ ಪಕ್ಷದ ಪರವಾಗಿ ಈ ಮಸೂದೆಯನ್ನು ಸ್ವಾಗತಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಮಂತ್ರಿಗಳಾದಂಥ ಶ್ರೀ ಮಾನ್ ಲಕ್ಷ್ಮೀಸಾಗರ್‌ರವರು ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಒಂದು ತಿದ್ದುಪಡಿಯನ್ನು ತಂದಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಾವು ಮೊದಲು ಅನ್ಯಾಯವೆಂದು ಪ್ರತಿಭಟಿಸಿದಾಗ ಅದನ್ನು ಅವರು ಮನಗೊಂಡು ಈ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಇವತ್ತು ಹಳ್ಳಿಗಾಡು ಪ್ರದೇಶಗಳಲ್ಲಿರ ತಕ್ಕಂಥ ಯುವಕ ಮತ್ತು ಯುವತಿಯರಿಗೂ ಕೂಡ ೧೮ ವರ್ಷ ವಯಸ್ಸಿನವರಿಗೆ ಮತದಾನ ಮಾಡುವ ಒಂದು ಹಕ್ಕು ಕಲ್ಪಿಸಿಕೊಟ್ಟಿದ್ದಾರೆ. ಮತ್ತು ಮಹಿಳೆಯರಿಗೆ ೨೦ಪರ್ಸೆಂಟ್ ಮೀಸಲಾತಿಯನ್ನು ಸಹ ಕೊಟ್ಟಿದ್ದಾರೆ ಇದು ಕೂಡ ಒಳ್ಳೆಯ ಕೆಲಸವೇ. ಮತ್ತು ಮಾನ್ಯ ಮಂತ್ರಿಗಳಿಗೆ ಮಹಿಳೆಯರ ಮೇಲೆ ಹೆಚ್ಚು ವಿಶ್ವಾಸ ಇದೆ. ಆದ್ದರಿಂದ ಅವರು ಈ ನಿಲುವನ್ನು ತೆಗೆದುಕೊಂಡಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಅದೇ ರೀತಿಯ ಒಂದು ನಿಲುವನ್ನು ಅವರು ತೆಗೆದುಕೊಂಡು ಈಗಲಾದರೂ ಮದುವೆ ಮಾಡಿಕೊಂಡರೆ ನಮಗೆಲ್ಲಾ ಸಂತೋಷ. ಮತ್ತು ನಮಗೆ ಭರ್ಜರಿ ಊಟ ದೊರೆಯುತ್ತದೆಂದು ನನ್ನ ಆಸೆ.